Swabhimani Sahakari
Pages : 38 / 12₹
Volume - 17
Issue - 09
September - 2020

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ




ಲಾಯರ್ ಇಲ್ಲದಿದ್ದರೆ...ನ್ಯಾಯವಿಲ್ಲ, ಡಾಕ್ಟರ್ ಇಲ್ಲದಿದ್ದರೆ... ಆರೋಗ್ಯವಿಲ್ಲ,
ಪೋಲೀಸ್ ಇಲ್ಲದಿದ್ದರೆ...ಭದ್ರತೆ ಇಲ್ಲ, ಎಂಜಿನಿಯರ್ ಇಲ್ಲದಿದ್ದರೆ...ಟೆಕ್ನಾಲಜಿ ಇಲ್ಲ,
ಆದರೆ, ಶಿಕ್ಷಕರು ಇಲ್ಲದಿದ್ದರೆ...ಇವರಾರೂ ಇರಲ್ಲ!

–ಸಿದ್ದೇಶ್ವರ ಸ್ವಾಮೀಜಿ



ಸೌಹಾರ್ದ ಸಹಕಾರಿಗಳ ಸಂಖ್ಯೆ : 5065

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1341



**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**

ಕಳೆದ 6 ತಿಂಗಳಿನಿಂದ ದೇಶದಲ್ಲಿ ಸರಕಾರಗಳು ಸಂಘ ಸಂಸ್ಥೆಗಳು ಸಾರ್ವಜನಿಕರು ಹಾಗೂ ಸಹಕಾರಿ ಸಂಸ್ಥೆಗಳು ಅನೇಕ ತೊಂದರೆಗಳನ್ನು ಅನುಭವಿಸಿವೆಯಾದರೂ ವಿಶ್ವದ ಬೇರೆ ರಾಷ್ಟ್ರಗಳಿಗೆ ಹೋಲಿಸಿದಾಗ ನಮ್ಮ ದೇಶದಲ್ಲಿ ಕೊರೋನಾ ಮಹಾಮಾರಿಯನ್ನು ಕಟ್ಟಿಹಾಕಲು ಯಶಸ್ವಿಯಾಗಿದ್ದೇವೆ. ಈ ಎಲ್ಲಾ ತೊಂದರೆಗಳಿಂದ ಆಗಿರುವ ಸವಾಲುಗಳನ್ನು ಎದುರಿಸಿ ಅವಕಾಶಗಳನ್ನು ಹುಡುಕಿ ನಾವುಗಳು ವಿಶೇಷವಾಗಿ ಸೌಹಾರ್ದ ಸಹಕಾರಿಗಳು ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ.

# ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ ಸಕ್ರೀಯವಾಗಿರಬೇಕು ಹಾಗೂ ಮಹತ್ವದ್ದಾಗಬೇಕು.

**ಆತ್ಮೀಯ ಸಹಕಾರಿ ಬಂಧುಗಳೆಲ್ಲರಿಗೂ ಸಪ್ರೇಮ ವಂದನೆಗಳು.**

ದೇಶದ 74ನೇ ಸ್ವಾತಂತ್ರ್ಯೋತ್ಸವ ಆಚರಣೆ ಸಂದರ್ಭದಲ್ಲಿ ಆದರಣೀಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ದೇಶದ ಎಲ್ಲಾ ನಾಗರಿಕರು, ಸಂಘ ಸಂಸ್ಥೆಗಳು ಸರಕಾರದೊಡನೆ ಕೈಜೋಡಿಸಬೇಕು ಪ್ರತಿಯೊಂದು ಕ್ಷೇತ್ರದಲ್ಲಿ ಎಲ್ಲರೂ ಸ್ವಾವಲಂಬಿಗಳಾಗಬೇಕು ಎಂದು ಕರೆ ನೀಡಿರುವುದು ದೇಶದ ಸಹಕಾರಿ ಸಂಸ್ಥೆಗಳಿಗೆ ವಿಶೇಷವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ನೀಡುವುದರ ಜೊತೆಗೆ ಒಂದು ಹೊಸ ಕಾರ್ಯಸೂಚಿಯನ್ನು ಮತ್ತು ಉತ್ಸಾಹವನ್ನು ಮೂಡಿಸಿದೆ. ಇದು ಸ್ವಾಗತಾರ್ಹವಾದ ವಿಷಯ ಎಂದು ಸಂಯುಕ್ತ ಸಹಕಾರಿಯ ಅಭಿಪ್ರಾಯವಾಗಿದೆ.

ಕಳೆದ 6 ತಿಂಗಳಿನಿಂದ ದೇಶದಲ್ಲಿ ಸರಕಾರಗಳು, ಸಂಘ ಸಂಸ್ಥೆಗಳು, ಸಾರ್ವಜನಿಕರು ಹಾಗೂ ಸಹಕಾರಿ ಸಂಸ್ಥೆಗಳು ಅನೇಕ ತೊಂದರೆಗಳನ್ನು ಅನುಭವಿಸಿವೆಯಾದರೂ ವಿಶ್ವದ ಬೇರೆ ರಾಷ್ಟ್ರಗಳಿಗೆ ಹೋಲಿಸಿದಾಗ ನಮ್ಮ ದೇಶದಲ್ಲಿ ಕೊರೋನಾ ಮಹಾಮಾರಿಯನ್ನು ಕಟ್ಟಿಹಾಕಲು ಯಶಸ್ವಿಯಾಗಿದ್ದೇವೆ. ಈ ಎಲ್ಲಾ ತೊಂದರೆಗಳಿಂದ ಆಗಿರುವ ಸವಾಲುಗಳನ್ನು ಎದುರಿಸಿ ಅವಕಾಶಗಳನ್ನು ಹುಡುಕಿ ನಾವುಗಳು ವಿಶೇಷವಾಗಿ ಸೌಹಾರ್ದ ಸಹಕಾರಿಗಳು ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದು ಅವಶ್ಯಕ ಹಾಗೂ ಮಹತ್ವ ಪಾತ್ರವನ್ನು ನಿರ್ವಹಿಸುವುದು ಅವಶ್ಯಕ ಎಂದು ಸಂಯುಕ್ತ ಸಹಕಾರಿಯು ಭಾವಿಸಿದೆ.

ಸೌಹಾರ್ದ ಸಹಕಾರಿಗಳು ಕೊರೋನಾ ಮಹಾಮಾರಿಯನ್ನು ತಡೆಗಟ್ಟುವಲ್ಲಿ ಸರಕಾರದ ಸೂಚನೆಗಳನ್ನು ಪಾಲಿಸುವುದರ ಜೊತೆಗೆ ಕೊರೋನಾ ಕಾರ್ಯಕರ್ತರುಗಳಿಗೆ ವಿವಿಧ ರೀತಿಯ ಸಹಕಾರ, ಸಹಾಯ ಮಾಡುತ್ತಲಿರುವುದು, ಆರ್ಥಿಕ ಹಿನ್ನಡೆಯ ಸವಾಲನ್ನು ಎದುರಿಸಿ ಮತ್ತೆ ಚೇತರಿಸಿಕೊಂಡು ಬೇರೆ ಉಪಾಯಗಳನ್ನು ಹುಡುಕಿಕೊಂಡು ಕಾರ್ಯನಿರ್ವಹಿಸುತ್ತಿವುದು ಶ್ಲಾಘನೀಯ. ಅದಕ್ಕಾಗಿ ಸಂಯುಕ್ತ ಸಹಕಾರಿಯು ತಮ್ಮೆಲ್ಲರನ್ನು ಅಭಿನಂದಿಸುತ್ತದೆ.

ಆತ್ಮನಿರ್ಭರ ಭಾರತ ನಿರ್ಮಾಣ ಕಾರ್ಯದಲ್ಲಿ ವಿಶೇಷವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳ ಪಾತ್ರ ಮಹತ್ವಾಗಬೇಕೆಂಬುದು ಮತ್ತು ಸಕ್ರೀಯವಾಗಿರಬೇಕೆಂಬುದು ಸಂಯುಕ್ತ ಸಹಕಾರಿಯ ಆಶಯ. ಈ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಕಾರ್ಯವ್ಯಾಪ್ತಿಯೊಳಗೆ ಉತ್ತಮ ಕ್ರಿಯಾಯೋಜನೆಗಳನ್ನು ಸಿದ್ಧಡಿಸುವುದು, ಸ್ವಾಭಾವಿಕ ಸಂಪನ್ಮೂಲಗಳ ಮತ್ತು ಮಾನವ ಸಂಪನ್ಮೂಲಗಳ ಸದ್ಬಳಕೆಗೆ, ಸದಸ್ಯತ್ವ ಅಭಿಯಾನ, ಠೇವಣಿ ಸಂಗ್ರಹ ಕಾರ್ಯಕ್ರಮ, ಗುಣಾತ್ಮಕ ಸಾಲ ನೀಡುವಿಕೆ, ಸದಸ್ಯರ ದೈನಂದಿನ ಅಗತ್ಯಗಳ ಪೂರೈಸುವಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಹಕಾರಿಯ ಸ್ವಾವಲಂಬನೆಗೆ ಮಹತ್ವದ ಹೆಜ್ಜೆಯೆನಿಸುತ್ತದೆ. ಸಹಕಾರಿಗಳ ವಿಶ್ವಾಸಾರ್ಹತೆ ಹೆಚ್ಚಿಸುವ ಕ್ರಮಗಳಿಗೆ ಆದ್ಯತೆ ನೀಡುವುದು ಅತ್ಯಂತ ಮಹತ್ವದ್ದಾಗಿರುತ್ತದೆ. ಆತ್ಮನಿರ್ಭರ ಭಾರತ ನಿರ್ಮಾಣ ಹಾಗೂ ಸ್ವಾವಲಂಬಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಇದು ಪೂರಕವಾಗುತ್ತದೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜಿ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು



**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop


## ಒಳಪುಟಗಳಲ್ಲಿ...


ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ................................................ 5–16
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ................................................ 18–28
ನಿಮ್ಮ ಪ್ರಶ್ನೆ – ನಿಮ್ಮ ಉತ್ತರ .......... 29–30
ಲೇಖನ........................................ 31–32
ಕಲ್ಯಾಣ ಕರ್ನಾಟಕದಲ್ಲಿ ಎಲೆಮರೆಕಾಯಿಯಾಗಿ ಸೇವೆ ಸಲ್ಲಿಸುತ್ತಿರುವ ಸಹಕಾರಿ ಆಸ್ಪತ್ರೆ...33–35
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–5) .................................. 36–38


# ಸಂಪಾದಕೀಯ

## ಯುವಕರಿಗೆ ಸಹಕಾರ ಕ್ಷೇತ್ರ ಪರಿಚಯಿಸುವ ವೇದಿಕೆ ನಿರ್ಮಾಣ ಕಾರ್ಯದ ಅಗತ್ಯ

ಅಂತರರಾಷ್ಟ್ರೀಯ ಯುವ ದಿನಾಚರಣೆಯ ಸಂದರ್ಭದಲ್ಲಿ ಕೇರಳದ ಅಪೆಕ್ಸ ಬ್ಯಾಂಕ್ ಸಿಬ್ಬಂದಿ ತರಬೇತಿ ಸಂಸ್ಥೆಯವರು ಸಹಕಾರ ಕ್ಷೇತ್ರದಲ್ಲಿ ಯುವಕರನ್ನು ಉದ್ಯಮಶೀಲರನ್ನಾಗಿಸಬೇಕೆಂಬ ಮಹತ್ವಾಕಾಂಕ್ಷೆ ವಿಚಾರಗೋಷ್ಠಿಯನ್ನು ಆನ್‌ಲೈನ್ ಮೂಲಕ ನಡೆಸಿರುವುದು ಅದರಲ್ಲಿ ಅನೇಕ ಸಹಕಾರಿ ತಜ್ಞರು ಸಹಕಾರಿಗಳು ಭಾಗವಹಿಸಿ ತಮ್ಮ ವಿಚಾರಗಳನ್ನು ಮಂಡಿಸಿರುವುದು ಸ್ವಾಗತಾರ್ಹ. ಸಹಕಾರ ಕ್ಷೇತ್ರಕ್ಕೆ ವಿಶ್ವದಲ್ಲಿ ಹಾಗೂ ನಮ್ಮ ದೇಶದಲ್ಲಿ ಶತಮಾನಗಳ ಇತಿಹಾಸವಿದೆ. ಸಹಕಾರಿ ತತ್ವದ ಆಶಯ. ಸಹಬಾಳ್ವೆ **"ತಾನು ಎಲ್ಲರಿಗಾಗಿ ಎಲ್ಲೂರೂ ತನಗಾಗಿ"** ಈ ಕ್ಷೇತ್ರದಲ್ಲಿ ಇಂದಿನ ಯುವಕರು ಹೆಚ್ಚಾಗಿ ತೊಡಗಿಸಿಕೊಳ್ಳುವಂತೆ ಮಾಡುವುದು ಅಗತ್ಯ.

ಜನಸಂಖ್ಯೆಯ ಪ್ರಮಾಣದಲ್ಲಿ ಭಾರತ ವಿಶ್ವದ 2ನೇ ರಾಷ್ಟ್ರ. ದೇಶದಲ್ಲಿ 138 ಕೋಟಿ ಜನರಿದ್ದಾರೆ. ಇದರಲ್ಲಿ ಶೇಕಡಾ 65% ಯುವಕರಿದ್ದಾರೆ. ವಿಶ್ವದ ಎಲ್ಲ ರಾಷ್ಟ್ರಗಳಿಗಿಂತ ನಮ್ಮ ದೇಶದಲ್ಲಿ ಯುವಕರ ಜನಸಂಖ್ಯೆ ಇರುವುದು ನಮ್ಮ ಹೆಮ್ಮೆ. ಈ ಯುವಕರಿಗೆ ಉದ್ಯೋಗ ಒದಗಿಸುವುದು ಒಂದು ದೊಡ್ಡ ಸವಾಲು. ಈ ನಿಟ್ಟಿನಲ್ಲಿ ಸರಕಾರ ಹಾಗೂ ಸಂಘ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಿದೆ.

ನಮ್ಮ ದೇಶದಲ್ಲಿರುವ ಸ್ವಾಭಾವಿಕ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಂಡು ಆಧುನಿಕ ತಂತ್ರಜ್ಞಾನ ಉಪಯೋಗಿಸಿಕೊಂಡು ಉದ್ಯೋಗ ಶೀಲತೆಯನ್ನು ಹೆಚ್ಚಿಸಿ ಈ ಮಾನವ ಸಂಪನ್ಮೂಲವನ್ನು ಸಂಪತ್ಭರಿತವನ್ನಾಗಿಸುವುದು ಇಂದಿನ ಸವಾಲು.

ನಮ್ಮ ದೇಶದಲ್ಲಿ 8 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 30 ಕೋಟಿಗೂ ಹೆಚ್ಚು ಸದಸ್ಯರಿದ್ದಾರೆ. ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರದ ಕೊಡುಗೆ ಅಪಾರ. ನಿರುದ್ಯೋಗ ನಿವಾರಣೆಯಲ್ಲಿಯೂ ಸಹಕಾರ ಸಂಸ್ಥೆಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿವೆ. ಇಫ್ಕೋ, ಕ್ರಿಬ್ಕೋ, ಅಮೂಲ್, ಕ್ಯಾಂಪ್ಕೋ, ನಂದಿನಿ, ಮ್ಯಾಂಕ್ಕೋ, ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳು, ಕ್ರೆಡಿಟ್ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿಗಳು ಮತ್ತು ಮಾರಾಟ ಗ್ರಾಹಕರ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತ ಬಂದಿವೆ. ಆದರೆ ಇದು ಸಾಲದು. ಇನ್ನೂ ಹೆಚ್ಚಿನ ಕೆಲಸಗಳನ್ನು ನಿರೀಕ್ಷಿಸಲಾಗಿದೆ. ಸಹಕಾರ ಕ್ಷೇತ್ರದ ವ್ಯಾಪ್ತಿಗೆ ಒಳಪಡುವವರ ಜನಸಂಖ್ಯೆ ಹೆಚ್ಚಿದೆ. ಈ ಜನರನ್ನು ಸಹಕಾರ ಕ್ಷೇತ್ರದ ವ್ಯಾಪ್ತಿಗೆ ಕರೆತರಬೇಕು. ಅವರನ್ನು ಆಕರ್ಷಿಸುವಂತಹ ಉದ್ಯೋಗ ಸೃಷ್ಟಿಗೆ ಆದ್ಯತಾವಲಯ ಸೃಷ್ಟಿಯಾಗಬೇಕಿದೆ. ಈ ಕಾರ್ಯಚಟುವಟಿಕೆಗಳ ಬಗ್ಗೆ ಯುವಕರಲ್ಲಿ ಆಕರ್ಷಣೆ ಹಾಗೂ ಆಸಕ್ತಿ ಮೂಡಿಸಬೇಕಿದೆ. ಈ ಕ್ಷೇತ್ರದ ಬಗ್ಗೆ ಯುವಕರಲ್ಲಿ ವಿಶ್ವಾಸಾರ್ಹತೆ ಹೆಚ್ಚಿಸಬೇಕಿದೆ.

**"ಆಡು ಮುಟ್ಟದ ಸೊಪ್ಪಿಲ್ಲ ರವಿಕಾಣದ ಸೊಬಗಿಲ್ಲ"** ಎಂಬಂತೆ ಸಹಕಾರ ಕ್ಷೇತ್ರ ಜೀವನ ಎಲ್ಲ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆಯಾದರೂ ಕೆಲವೇ ಕ್ಷೇತ್ರಗಳಲ್ಲಿ ಮಾತ್ರ ಯಶಸ್ಸು ಕಂಡಿದೆ. ಕೆಲವು ಕ್ಷೇತ್ರಗಳು ನಿಷ್ಕ್ರೀಯವಾಗಿವೆ. ಇವುಗಳೆಲ್ಲ ಸಕ್ರೀಯವಾಗಬೇಕು. ಸೌಹಾರ್ದ ಸಹಕಾರಿಗಳು ಕೇವಲ ಕ್ರೆಡಿಟ್ ಕಾರ್ಯಗಳನ್ನು ನಿರ್ವಹಿಸುತ್ತೀವೆ. ಇನ್ನೂ ಬೇರೆ ಬೇರೆ ವಿಧದ ಸಹಕಾರಿಗಳೊಂದಿಗೆ ಸೇರಿ ಕಾರ್ಯನಿರ್ವಹಿಸಲು ಅವಕಾಶಗಳಿವೆ. ಸಹಕಾರ ಜನರ ಜೀವನ ಪದ್ಧತಿಯಾಗಿರುವ ವ್ಯವಸ್ಥೆ ಸಕ್ರೀಯವಾಗಬೇಕಿದೆ. ಈ ವ್ಯವಸ್ಥೆ ಇನ್ನೂ ಸಕ್ರೀಯವಾಗಬೇಕಾದರೆ ಯುವಕರು / ಮಹಿಳೆಯರ ಸಹಭಾಗಿತ್ವ ಅಗತ್ಯವಾಗಿದೆ. ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣ ಅರ್ಥವ್ಯವಸ್ಥೆಗಳನ್ನು ಅರ್ಥ ಮಾಡಿಕೊಂಡು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಯುವಕರನ್ನು ಆಕರ್ಷಿಸುವ ಯೋಜನೆಗಳನ್ನು ಜಾರಿಮಾಡುವುದರಲ್ಲಿ **Platform Cooperative for Youth Entrepreneurship** ವಿಷಯಕ್ಕೆ ಹೆಚ್ಚಿನ ಮಹತ್ವ ಬರುತ್ತದೆ.

ಶ್ರೇಣಿ 53



## ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

### "ಪ್ರಕೃತಿ ಮಹಾತ್ಯಾಗಿ"

ಜನ್ಮತಃ ತನ್ನಸಂರಕ್ಷಣೆಗಾಗಿ ಸೂರ್ಯದೇವನಿಂದ ಕೊಡಮಾಡಲ್ಪಟ್ಟ ಕವಚ ಕುಂಡಲಗಳನ್ನೇ ದಾನಗೈದು ಇಂದ್ರದೇವನನ್ನು ತೃಪ್ತಿಗೊಳಿಸಿದ ಕೀರ್ತಿ ದಾನಶೂರ ಕರ್ಣನಿಗೆ ಸಲ್ಲುತ್ತದೆ. ಮಹಾಬಲಿ ರಾಜನು ತನ್ನ ದಾನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ವಾಮನಾವತಾಲಿಯಾದ ಶ್ರೀ ವಿಷ್ಣುವಿನ ಪಾದವನ್ನೇ ತನ್ನ ತಲೆಯ ಮೇಲಿರಿಸಿಕೊಂಡು ಪ್ರಾಣವನ್ನು ತೆತ್ತ ಅಮರ ಖ್ಯಾತಿಯ ವಿಷಯವನ್ನು ಅಂತಿದ್ದೇವೆ. ಈ ಪ್ರಕ್ರಿಯೆಗಳಲ್ಲಿ ಸ್ವಾರ್ಥದ ಲವಲೇಶವೂ ಇಲ್ಲದೇ ಸ್ವಯಂ ಘೋಷಿತವಾದ ತಮ್ಮ ಬದುಕಿನ ಪರಿಶುದ್ಧತೆಯನ್ನು ನಿರ್ವಹಿಸಿರುವ ಪರಿಯಾಗದೆ ಇಂಥಹವರನ್ನು ತ್ಯಾಗಜೀವಿಗಳೆನ್ನುತ್ತೇವೆ.

ಆದರೆ ಇಂದಿನ ನಮ್ಮ ಕಥೆಯೇ ಬೇರೆ, ನೋಡಿದ, ಮಾಡಿದ ಪ್ರತಿಯೊಂದು ಕ್ರಿಯೆಗಳಲ್ಲೂ ನನಗೇನು ಬರುತ್ತದೆ. ಎಂಬ ಸ್ವಾರ್ಥದ ರಸಾಯನ ಉಕ್ಕಿಬರುವುದನ್ನು ನಮ್ಮ ನಡೆನುಡಿಗಳಲ್ಲಿ ಕಾಣುತ್ತೇವೆ. ಇಷ್ಟಕ್ಕೇ ಸದಾ ನಮ್ಮ ಹಪಹಪಿ ನಿಲ್ಲದೇ ಬೇರೆಯವರ ಗಂಟನ್ನು ಲಪಟಾಯಿಸುವ ಕಪಟತಂತ್ರಗಾರಿಕೆ ಹೆಚ್ಚಾಗಿರುತ್ತದೆ. ಬಹುಗಾತ್ರದ ಲಾಭಬೇಡಿಕೆ, ಕಾರ್ಯದಕ್ಷತೆಯಲ್ಲದೇ ಸ್ಥಾನ ಗಿಟ್ಟಿಸುವಿಕೆ, ಸುಳ್ಳು ಆಶ್ವಾಸನೆಗಳ ಮೇಲೆ ಬದುಕನೂಕುವುದೇ, ಕಲಬೆರಕೆ ಆಹಾರ ವಸ್ತು ವಿತರಣೆ ಹಾಗೂ ಸುಳ್ಳು ಔಷಧಿಗಳನ್ನು ದುಬಾರಿ ಬೆಲೆಗೆ ಮಾರುವುದು ಇತ್ಯಾದಿ ಪ್ರಕ್ರಿಯೆಗಳು ನಮ್ಮ ಸ್ವಾರ್ಥಕ್ಕೆ ಹಿಡಿದ ಕೈಗನ್ನಡಿಯಾಗಿವೆ.

ಆಧ್ಯಾತ್ಮ ಕವಿ ಡಿವಿಜಿಯವರು ಪ್ರಕೃತಿ ಮಾತೆಯನ್ನು ಉದಾಹರಿಸಿ ಆ ತಾಯಿಯ ಮಹಾತ್ಯಾಗದ ಸೃಷ್ಠಿ ಪ್ರಕ್ರಿಯೆಯನ್ನು ಅತ್ಯುತ್ಕೃಷ್ಟ ಹಾಗೂ ಉದಾಹರಣಾರ್ಥವೆಂದಿದ್ದಾರೆ. ಆಪದ್ಯದ ಓಟ ಈ ಕೆಳಗಿನಂತಿದೆ.

ಅರಣ್ಯಕದ ಪುಷ್ಪಗಳ ಮೂಸುವರಾರು?
ಆರಿಹರು ಪತಗಡುಪನು ಹುಡಿಕಿ ಮೆಚ್ಚಲ್?
ಬೇರೊಬ್ಬರಣೆಕೆಯಲ್ಲದೆ ಪ್ರಕೃತಿ ತನಗೆಂದೆ
ಸ್ವಾರಸ್ಯವೆಸಗುವಳೊ ॥ ಮಂಕುತಿಮ್ಮ॥

ಕಾಡಿನಲ್ಲಿನ ಪುಷ್ಪಗಳ ಸುಗಂಧವನ್ನು ಆಘ್ರಾಣಿಸುವವರು ಯಾರಿದ್ದಾರೆ? ಬಣ್ಣಬಣ್ಣದ ಆಕರ್ಷಣೆಯ ಪತಂಗಗಳನ್ನು ಹುಡುಕಿ ಮೆಚ್ಚುವರಾರಿದ್ದಾರೆ ನಾವುಗಳು ನಮ್ಮ ಹೂದೋಟದಲ್ಲಿ ಬೆಳೆದ ಒಂದು ಗುಲಾಬಿಯ ಮಾದರಿಯ ಉತ್ಕೃಷ್ಟತೆಯ ಬಗ್ಗೆ ಅನೇಕರನ್ನು ಕರೆಸಿ ತಾವೇ ಬೆಳೆದೆವೆಂಬಂತೆ ಜಂಬ ಕೊಚ್ಚಿಕೊಳ್ಳುತ್ತೇವೆ. ಆದರೆ ಸುಂದರವನ, ಸೂರ್ಯಕಿರಣ, ಸುಗಂಧ ಅಲೆಗಳ ಆಕರ್ಷಣೀಯ ನರ್ತನ, ಗಿಡಬಳ್ಳಿ ಬಳುಕು, ಮೇಘವರ್ಣಛ್ಛಾಯ ಇಂತೀ ಅತ್ಯಾತಿ ಸುಂದರ ದೃಶ್ಯಗಳನ್ನು ನಿರ್ಮಿಸಿದ ಪ್ರಕೃತಿ ಮಹಾಮಾತೆ ಯಾರಿಂದಲೂ ಮೆಚ್ಚುಗೆಯನ್ನು ನಿರೀಕ್ಷಿಸುವುದಿಲ್ಲ. ಇಂಥಹ ತ್ಯಾಗಮಯ ಕಾರ್ಯ ಸರ್ವೋತ್ಕೃಷ್ಟ ಭಗವಂತನಿಂದ ನಿತ್ಯನಿರಂತರವೂ ನಡೆಯುತ್ತಿರುವುದನ್ನು ಗಮನಿಸುತ್ತೇವೆ. ಅಣುರೇಣು ತೃಣಕಾಷ್ಟಗಳಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತ ನಿತ್ಯನೂತನ ಫಲಪುಷ್ಪ, ಬೆಳೆಗಳನ್ನು ನೀಡಿ ನಮ್ಮನ್ನು ಸಲಹುತ್ತಿರುವ ಪ್ರಕೃತಿ ಮಾತೆಗೆ ಭಯಭಕ್ತಿಗಳಿಂದ ವಂದಿಸುತ್ತಾ ನಮ್ಮತನದ ಸ್ವಾರ್ಥವನ್ನು ಬದಿಗೊತ್ತಿ, ಸಮಾಜದ ಪ್ರತಿ ಜೀವಿಯೂ ತನ್ನ ಸಹೋದರರೆಂಬ ಭಾವದಿಂದ ಬದುಕಿ ಮೇಲೆ ಉದಾಹರಿಸಲ್ಪಟ್ಟ ಕರ್ಣ, ಮಹಾಬಲಿಗಳಂತೆ ದಾನಶೀಲರಾಗಿ ಸಮಾಜದ ನಿರ್ಮಾಣಕ್ಕೆ ಸಹಕರಿಸೋಣವೆನ್ನುವುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 14,224 ಆಗಿರುತ್ತದೆ. ಇವುಗಳ ಪೈಕಿ 6,244 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,980.

**ಆಗಸ್ಟ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 82, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 21, ಮಧ್ಯಸ್ಥದಾರರಿಗೆ ವಹಿಸಿದ ಪ್ರಕರಣಗಳು 145.

**ಅಮಲ್ಜಾರಿ ಪ್ರಕರಣಗಳು :** ಒಟ್ಟು ಒಟ್ಟು 2,482 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 229 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,083 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 92 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 429 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಆಗಸ್ಟ್ ತಿಂಗಳಿನಲ್ಲಿ 21 ಪ್ರಕರಣಗಳು ದಾಖಲಾಗಿರುತ್ತವೆ.



## ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಶ್ರೀ ಹೆಚ್.ವಿ ರಾಜೀವ್ ಆಯ್ಕೆ

**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹಾಗೂ ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರು ಮತ್ತು ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ಹೆಚ್.ವಿ ರಾಜೀವ್ ಇವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (MUDA) ಅಧ್ಯಕ್ಷರಾಗಿ ಸರಕಾರ ನೇಮಿಸಿದೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.

## ಶ್ರೀ ಹೆಚ್.ವಿ. ರಾಜೀವ್ ಇವರು ಸಂಯುಕ್ತ ಸಹಕಾರಿಯ ಕಛೇರಿಗೆ ಭೇಟಿ ಅಧ್ಯಕ್ಷ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಇವರಿಂದ ಅಭಿನಂದನೆ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರು, ಪರಿಸರಪ್ರೇಮಿ, ಶಿಕ್ಷಣಪ್ರೇಮಿ ಹಾಗೂ ಉದ್ಯಮಿ ಶ್ರೀ ಹೆಚ್.ವಿ.ರಾಜೀವರವರನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಸರಕಾರ ನೇಮಕ ಮಾಡಿರುವುದು ಸಹಕಾರಿಗಳಿಗೆ ಸಂತಸ ತಂದಿದೆ. ಶ್ರೀಯುತರು ದಿನಾಂಕ 03-09-2020 ರಂದು ಸಂಯುಕ್ತ ಸಹಕಾರಿಯ ಕಛೇರಿಗೆ ಭೇಟಿ ನೀಡಿದಾಗ ಶ್ರೀಯುತರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಬಿ.ಹೆಚ್. ಕೃಷ್ಣಾರೆಡ್ಡಿಯವರು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಶ್ರೀಯುತರಿಗೆ ಶಾಲು ಹೊದಿಸಿ ಪುಷ್ಪಗುಚ್ಛನೀಡಿ ಫಲತಾಂಬೂಲ ನೀಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಶ್ರೀ ರಾಜೀವರವರಿಗೆ ದೊರೆತಿರುವ ಈ ಗೌರವ ನಮ್ಮೆಲ್ಲರಿಗೂ ಸಂತಸ ತಂದಿದೆ. ಅತ್ಯಂತ ಕ್ರಿಯಾಶೀಲರೂ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಕಳಕಳಿಯನ್ನು ಹೊಂದಿರುವ ಶ್ರೀಯುತರು ಅವರ ಸ್ನೇಹಿತರೊಂದಿಗೆ ಸ್ವಚ್ಛಭಾರತ ಅಭಿಯಾನದಲ್ಲಿ ನಂತರ ಈಗ ಲಕ್ಷ ವೃಕ್ಷ ಅಭಿಯಾನವನ್ನು ಹಮ್ಮಿಕೊಂಡು ಸದಾ ಕಾರ್ಯನಿರತರಾಗಿರುತ್ತಾರೆ. ಅವರು ಈ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಸಮರ್ಥರಾಗಿದ್ದಾರೆ. ಅವರಿಗೆ ದೊರೆತಿರುವ ಈ ಗೌರವ ನಮಗೆ ದೊರೆತಂತಾಗಿದೆ. ಶ್ರೀಯುತರಿಗೆ ಅವರ ಜೀವನದಲ್ಲಿ ಇನ್ನೂ ಹೆಚ್ಚಿನ ಶ್ರೇಯಸ್ಸು ಗೌರವಗಳು ದೊರಕಲಿ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ಶ್ರೀ ಹೆಚ್.ವಿ.ರಾಜೀವರವರು ಮಾತನಾಡಿ ನನಗೆ ದೊರೆತಿರುವ ಈ ಗೌರವ ಸಹಕಾರ ಕ್ಷೇತ್ರಕ್ಕೆ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ದೊರೆತ ಗೌರವವಾಗಿದೆ. ಸಹಕಾರ ಕ್ಷೇತ್ರದಿಂದಲೇ ನಾನು ಬೆಳೆದವನು. ಯಾವುದೇ ಹುದ್ದೆ ಬರಬಹುದು ಹೋಗಬಹುದು ಆದರೆ ಸಹಕಾರ ಕ್ಷೇತ್ರ ನಮ್ಮನ್ನು ಬಿಡುವುದಿಲ್ಲ ನಾವು ಅದನ್ನು ಬಿಡುವುದಿಲ್ಲ ಎಂದು ತಿಳಿಸಿದ ಶ್ರೀಯುತರು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆ ಅತ್ಯಂತ ಜವಾಬ್ದಾರಿ ಹುದ್ದೆಯಾಗಿದೆ. ದೀನ ದಲಿತರ ಸಾಮಾಜಿಕವಾಗಿ ಹಿಂದುಳಿದವರ ಮತ್ತು ಎಲ್ಲ ವರ್ಗದ ಜನರ ಅಭಿವೃದ್ಧಿಗೆ ಅವಕಾಶ ಲಭಿಸಿದೆ. ಇದನ್ನು ಯಶಸ್ವಿಯಾಗಿ ನಿರ್ವಹಿಸಲು ಸಹಕಾರ ಕೋರಿ ತಮ್ಮನ್ನು ಗೌರವಿಸಿರುವುಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ವಂದನಾರ್ಪಣೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ, ಶ್ರೀ ಪ್ರಸನ್ನಕುಮಾರ, ಸಹಕಾರ ಭಾರತಿಯ ಪದಾಧಿಕಾರಿಗಳಾದ ಶ್ರೀ ವೆಂಕಟೇಶ, ಶ್ರೀ ಶ್ರೀಧರ ಹಾಗೂ ಅನೇಕ ಸಹಕಾರಿಗಳು, ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



## ಅಭಿನಂದನೆ

**ಮೈಸೂರು :** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕವಾದ ಶ್ರೀಯುತ ಹೆಚ್.ವಿ. ರಾಜೀವ್ ಇವರಿಗೆ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ಇವರು ಅಭಿನಂದಿಸಿದರು.

## ಬಿ.ಟಿವಿ ಹಾಗೂ ಇತರೆ ಮಾಧ್ಯಮಗಳು ಸಹಕಾರಿ ಬ್ಯಾಂಕುಗಳ/ಸಹಕಾರಿ ಸಂಸ್ಥೆಗಳ ಅಸ್ತಿತ್ವಕ್ಕೆ ಧಕ್ಕೆಯಾಗುವ, ನಕಾರಾತ್ಮಕ ಹಾಗೂ ಅನಗತ್ಯ ವಿಷಯಗಳ ಪ್ರಸಾರಕ್ಕೆ Additional City Civil and Sessions Judge, Bangalore (CCH-36) ತಡೆಯಾಜ್ಞೆ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯು ದಿನಾಂಕ 10–8–2020ರಂದು ಬಿ.ಟಿವಿ ಹಾಗೂ ಇತರೆ 18 ಸುದ್ದಿ ಚಾನೆಲ್‌ಗಳಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಯ ಮೇಲೆ ನಕಾರಾತ್ಮಕ ಪ್ರಭಾವಬೀರುವ ಸುದ್ದಿಯನ್ನು ಪದೇ ಪದೇ ಪ್ರಸಾರ ಮಾಡಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹಾಗೂ ಸಹಕಾರ ಸಂಸ್ಥೆಗಳಲ್ಲಿ ಠೇವಣಿಗಳನ್ನು ತಕ್ಷಣಕ್ಕೆ ವಾಪಸ್ಸು ಪಡೆಯಿರಿ ಎಂಬುದಾಗಿ ಪ್ರಸಾರ ಮಾಡಿರುವುದನ್ನು ಗಮನಿಸಿ ರಾಜ್ಯದ Additional City Civil and Sessions Judge, Bangalore (CCH-36) ಈ ಬಗ್ಗೆ ಸಂಯುಕ್ತ ಸಹಕಾರಿಯ ಅರ್ಜಿಯನ್ನು ಸಲ್ಲಿಸಿ ಈ ಮಾಧ್ಯಮಗಳ ವಿನಾಕಾರಣ ಅಪಪ್ರಚಾರದಿಂದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಹಿನ್ನಡೆಯಾಗುವ ಸಾಧ್ಯತೆ ಇದ್ದು ಈ ಬಗ್ಗೆ ಸದರಿ ಮಾಧ್ಯಮಗಳ ಮೇಲೆ ಸೂಕ್ತ ಕ್ರಮ ಜರುಗಿಸಲು ಹಾಗೂ ಈ ರೀತಿ ಪ್ರಚಾರ ಮಾಡದಿರಲು ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಲಾಗಿತ್ತು. ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಾಲಯ ದಿನಾಂಕ 28–08–2020 ರಂದು ಬಿ.ಟಿವಿ, ಪವರ್ ಟಿವಿ ಸೇರಿದಂತೆ 18 ಮಾಧ್ಯಮಗಳನ್ನು ಉಲ್ಲೇಖಿಸಿ ಮುಂದಿನ ಆದೇಶದವರೆಗೆ ಈ ರೀತಿ ಪ್ರಚಾರ ಮಾಡದಂತೆ ತಡೆಯಾಜ್ಞೆ ನೀಡಿದ್ದಾರೆ.



## ಶ್ರೀ ಪ್ರಮೋದ ಹೆಗಡೆಯವರಿಗೆ ಅಭಿನಂದನೆ

**ಉತ್ತರ ಕನ್ನಡ :** ಉತ್ತರ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರು ಹಾಗೂ ಯು.ಕೆ ಸೌಹಾರ್ದ ಸಹಕಾರಿಯ ಅಧ್ಯಕ್ಷ ಹಿರಿಯ ಸಹಕಾರಿ ಶ್ರೀ ಪ್ರಮೋದ ಹೆಗಡೆ ಇವರು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾಗಿ ಸರಕಾರ ನೇಮಿಸಿದೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಹಾಗೂ ಸಿಬ್ಬಂದಿಯವರು ಅಭಿನಂದಿಸಿದ್ದಾರೆ.

## ಅಭಿನಂದನೆ



**ಮೈಸೂರು :** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀಯುತ ಹೆಚ್.ವಿ.ರಾಜೀವ್ ಇವರಿಗೆ ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಅಭಿನಂದಿಸಿದರು.



**ಮೈಸೂರು :** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀಯುತ ಹೆಚ್.ವಿ.ರಾಜೀವ್ ಇವರಿಗೆ ಮೈಸೂರು ಕುರುಹಿನಶೆಟ್ಟಿ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಅಭಿನಂದಿಸಿದರು.

# ಸಂಯುಕ್ತ ಸಹಕಾರಿಯ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳು

## ಮೈಸೂರು ವಿಭಾಗ

## "ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು" ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು ಮತ್ತು ಕೊಡಗು :** ಮೈಸೂರು ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಗಾಗಿ "ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 05.08.2020 ಬುಧವಾರ ಮಧ್ಯಾಹ್ನ 03:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸ್ವಾಗತ ಭಾಷಣವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ನಂತರ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ಮತ್ತು ಆಡಳಿತ ಮಂಡಲಿ ಸದಸ್ಯರ ಜವಾಬ್ದಾರಿಗಳು ಹಾಗೂ ಸಹಕಾರಿಯ ಅಭಿವೃದ್ಧಿಯ ಕುರಿತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಮಾರ್ಗದರ್ಶನ ಮಾಡಿದರು. ಶ್ರೀ ಯಶವಂತ ಡೋಂಗ್ರೆ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಇವರು "ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು" ಕುರಿತು ಉಪನ್ಯಾಸ ನೀಡಿದರು. ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 42 ಸೌಹಾರ್ದ ಸಹಕಾರಿಗಳಿಂದ 50 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಉಡುಪಿ :** ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಗಾಗಿ "ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 06.08.2020 ಗುರುವಾರ ಬೆಳಿಗ್ಗೆ 11:30 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಹಾಗೂ ಆಡಳಿತ ಮಂಡಲಿ ಸದಸ್ಯರ ಜವಾಬ್ದಾರಿಗಳು ಹಾಗೂ ಸಹಕಾರಿಯ ಅಭಿವೃದ್ಧಿಯ ಕುರಿತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಮಾರ್ಗದರ್ಶನ ಮಾಡಿದರು.

"ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು" ಕುರಿತು ಶ್ರೀ ಯಶವಂತ ಡೋಂಗ್ರೆ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಇವರು ಉಪನ್ಯಾಸ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ಮತ್ತು ಉಡುಪಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಒಟ್ಟು 110 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಗಾಗಿ "ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 07.08.2020 ಶುಕ್ರವಾರ ಬೆಳಿಗ್ಗೆ 11:30 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಹಾಗೂ ಆಡಳಿತ ಮಂಡಲಿ ಸದಸ್ಯರ ಜವಾಬ್ದಾರಿಗಳು ಹಾಗೂ ಸಹಕಾರಿಯ ಅಭಿವೃದ್ಧಿಯ ಕುರಿತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಮಾರ್ಗದರ್ಶನ ಮಾಡಿದರು.

"ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು" ಕುರಿತು ಶ್ರೀ ಯಶವಂತ ಡೋಂಗ್ರೆ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಇವರು ಉಪನ್ಯಾಸ ನೀಡಿದರು. ಹಿರಿಯ ವ್ಯವಸ್ಥಾಪಕರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾದ್ ಬಂಗೇರರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಒಟ್ಟು 106 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಲಬುರಗಿ ವಿಭಾಗ

## ಚುನಾವಣಾ ಪೂರ್ವ ತಯಾರಿ ತರಬೇತಿ ಕಾರ್ಯಕ್ರಮ

**ಬಳ್ಳಾರಿ :** ದಿನಾಂಕ 24.08.2020ರ ಸೋಮವಾರದಂದು ಬಳ್ಳಾರಿ ಜಿಲ್ಲೆಯ 2021-22ನೇ ಸಾಲಿನಲ್ಲಿ ನಡೆಯಬೇಕಿರುವ 27 ಸೌಹಾರ್ದ ಸಹಕಾರಿಗಳ "ಚುನಾವಣಾ ಪೂರ್ವ ತಯಾರಿ" ತರಬೇತಿಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವಿಶ್ವನಾಥ್ ಹಿರೇಮಠ, ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿ ಪ್ರಸ್ತಾವಿಕವಾಗಿ ಮಾತನಾಡಿದರು.

ಶ್ರೀ ಲಿಯಾಕತ್ ಅಲಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹೊಸಪೇಟೆ ಇವರು ಚುನಾವಣೆ ನಡೆಯುವ ಪೂರ್ವ ಆರು ತಿಂಗಳು 13(ಡ) ನಮೂನೆಯನ್ನು ಭರ್ತಿ ಮಾಡಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಮತ್ತು ಸಂಬಂಧಿಸಿದ ನಿಬಂಧಕರಿಗೆ ಚುನಾವಣೆ ನಡೆಸಿ ಕೊಡುವಂತೆ ಪತ್ರ ಬರೆಯುವುದು ಕಡ್ಡಾಯವಾಗಿದ್ದು ತಪ್ಪಿದಲ್ಲಿ ಚುನಾವಣೆಯನ್ನು ಸರಿಯಾದ ಸಮಯಕ್ಕೆ ಮಾಡಲು ಆಗುವುದಿಲ್ಲ ಈ ಎಲ್ಲಾ ಕೆಲಸವನ್ನು ಸಹಕಾರಿಯ ಮುಖ್ಯಕಾರ್ಯನಿವಾಹಕರು ನಿರ್ವಹಿಸಬೇಕು, ಮುಂದಿನ 50 ದಿನಗಳಲ್ಲಿ ಕರಡು ಮತದಾರ ಪಟ್ಟಿ ಸಿದ್ದಪಡಿಸಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಮತ್ತು ಮತದಾರ ಪಟ್ಟಿ ಪರಿಶೀಲಾನಾಧಿಕಾರಿಗಳಿಗೆ ತಲುಪಿಸುವುದು ಅಂತಿಮ ಮತದಾರರ ಪಟ್ಟಿ ಸಿದ್ದಪಡಿಸುವುದು, ಚುನಾವಣಾಧಿಕಾರಿಗಳು ಚುನಾವಣೆ ನಡೆಸುವ ದಿನಾಂಕ, ನಾಮಪತ್ರ ಪರಿಶೀಲಿಸುವುದು, ಅವಿರೋಧ ಆಯ್ಕೆ ಆಗದಿದ್ದ ಸಂದರ್ಭದಲ್ಲಿ ಆಡಳಿತ ಮಂಡಳಿಯ ಚುನಾವಣೆ ನಡೆಸಿ ಕೊಡುವುದು, ಪದಾಧಿಕಾರಿಗಳ ಚುನಾವಣೆಯ ಸವಿವರವಾದ ಮಾಹಿತಿಯನ್ನು ನೀಡಿದರು.

ಬೆಳಗಾವಿ ವಿಭಾಗ

## ವಿಶೇಷಾಧಿಕಾರಿ ನೇಮಕದ ಕುರಿತು ಸಮಾಲೋಚನಾ ಸಭೆ

ಕರ್ನಾಟಕ ಸರ್ಕಾರದ ದಿನಾಂಕ 14.07.2020 ರ ಆದೇಶದಂತೆ 2020 ರ ಡಿಸೆಂಬರ ಕೊನೆಯ ದಿನಾಂಕದವರೆಗೆ ಚುನಾವಣೆಯನ್ನು ಮುಂದೂಡಿರುವ ಕಾರಣ ಬೆಳಗಾವಿ ವಿಭಾಗದಲ್ಲಿ ಆಡಳಿತ ಮಂಡಳಿ ಅವಧಿ ಮುಗಿಯುವ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸುವ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 11.08.2020 ರಂದು ಸಮಾಲೋಚನಾ ಸಭೆಯನ್ನು ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಯಿತು. ಸಭೆಯಲ್ಲಿ ಶ್ರೀ ಬಿ.ಎಚ್.ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಶ್ರೀ ಜಗದೀಶ ಕವಟಗಿಮಠ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ನಿರ್ದೇಶಕರುಗಳಾದ ಶ್ರೀ ಮಾರುತಿ ಕಲಾಲ, ಶ್ರೀ ರಂಗಪ್ಪಯ್ಯ ದೇಶಪಾಂಡೆ, ಶ್ರೀ ಗುರುನಗೌಡಾ ಪಾಟೀಲ, ಶ್ರೀ ಸಿದ್ರಾಮಪ್ಪಾ ಉಪ್ಪಿನ, ಶ್ರೀ ಚಂದ್ರಕಾಂತ ಪಡಚಣ್ಣವರ, ಶ್ರೀಮತಿ ಸರಸ್ವತಿ, ಮತ್ತು ಶ್ರೀ ಶರಣಗೌಡ ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಶ್ರೀಕಾಂತ ಬರುವೆ, ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಹಾಗೂ ಬೆಳಗಾವಿ ವಿಭಾಗದ ಎಲ್ಲಾ ಜಿಲ್ಲಾ ಸಂಯೋಜಕರು ಸಭೆಯಲ್ಲಿ ಹಾಜರಿದ್ದರು. ವಿಶೇಷಾಧಿಕಾರಿ ನೇಮಕವಾಗುವ ಸಹಕಾರಿಗಳ ಒಟ್ಟು 64 ಜನ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ಭಾಗವಹಿಸಿದ್ದರು.

## ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ತರಬೇತಿ ಕಾರ್ಯಕ್ರಮ

**ಧಾರವಾಡ ಮತ್ತು ಗದಗ ಜಿಲ್ಲೆ :** ಧಾರವಾಡ ಮತ್ತು ಗದಗ ಜಿಲ್ಲೆಯ ಸೌಹಾರ್ದ ಸಹಕರಿಗಳ ಅಧ್ಯಕ್ಷರು ಹಗೂ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಪಡಚಣ್ಣವರ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗಡೆ ರವರು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಬಸವರಾಜ ಎಸ್, ಮತ್ತು ತರಬೇತಿ ವಿಭಾಗದಿಂದ ಶ್ರೀಮತಿ ಪ್ರತಿಭಾ ಮಠ ಇವರು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಧಾರವಾಡ ಮತ್ತು ಗದಗ ಜಿಲ್ಲೆಯ 41 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಗ್ರಾಹಕ ಸಂಬಂಧ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ

**ಗದಗ, ಧಾರವಾಡ, ಹಾವೇರಿ ಹಾಗೂ ಉತ್ತರ ಕನ್ನಡ** : ದಿನಾಂಕ 05.08.2020 ರಂದು ಗದಗ, ಧಾರವಾಡ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಗ್ರಾಹಕ ಸಂಬಂಧ ನಿರ್ವಹಣೆ ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರುಗಳಾದ ಶ್ರೀ ಚಂದ್ರಕಾಂತ ಪಡಚಣ್ಣವರ, ಶ್ರೀಮತಿ ಸರಸ್ವತಿ ಎನ್. ರವಿ, ಶ್ರೀ ಎಂ.ಬಿ. ಕಲಾಲ, ಶ್ರೀ ಆರ್.ಎನ್.ದೇಶಪಾಂಡೆ ಹಾಗೂ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಸಂಯುಕ್ತ ಸಹಕಾರಿ ಮಾಜಿ ನಿರ್ದೇಶಕರು ಮತ್ತು ಕೆ.ಡಿ.ಸಿ.ಸಿ ಬ್ಯಾಂಕ್ ಉಪಾಧ್ಯಕ್ಷರು, ಶ್ರೀ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ ಬೆಳಗಾವಿ, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ.ಕುಲಕರ್ಣಿ, ಮಾನ್ಯ ನಿವೃತ್ತ ಐ.ಟಿ ಮುಖ್ಯಸ್ಥರು, ಅಪೆಕ್ಸ್ ಬ್ಯಾಂಕ್ ಬೆಂಗಳೂರು ಹಾಗೂ ಜಿಲ್ಲಾ ಸಂಯೋಜಕರುಗಳಾದ ಶ್ರೀ ಗಂಗಾರಾಮ ಕೋಳಾಪ್ಪೆ, ಶ್ರೀ ಬಸವರಾಜ ಎಸ್, ಶ್ರೀ ಕಲ್ಮೇಶ ಮುಂಡೆಕ್ಕನವರ ಮತ್ತು ತರಬೇತಿ ವಿಭಾಗದಿಂದ ಶ್ರೀಮತಿ ಪ್ರತಿಭಾ ಮಠ ಇವರು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ನಾಲ್ಕು ಜಿಲ್ಲೆಗಳಿಂದ 140 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟ ಹಾಗೂ ವಿಜಯಪುರ** : ದಿನಾಂಕ 06.08.2020 ರಂದು ಬಾಗಲಕೋಟ ಹಾಗೂ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಗ್ರಾಹಕ ಸಂಬಂಧ ನಿರ್ವಹಣೆ ವಿಷಯದ ಕುರಿತು ಆನಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರುಗಳಾದ ಶ್ರೀ ಜಿ.ಎನ್.ಪಾಟೀಲ, ಶ್ರೀ ಸಿದ್ರಾಮಪ್ಪ ಉಪ್ಪಿನ, ಹಾಗೂ ಶ್ರೀ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ, ಬೆಳಗಾವಿ, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ.ಕುಲಕರ್ಣಿ, ಮಾನ್ಯ ನಿವೃತ್ತ ಐ.ಟಿ ಮುಖ್ಯಸ್ಥರು, ಅಪೆಕ್ಸ್ ಬ್ಯಾಂಕ್ ಬೆಂಗಳೂರು ಹಾಗೂ ಜಿಲ್ಲಾ ಸಂಯೋಜಕರುಗಳಾದ ಶ್ರೀ ನಾಗರಾಜ ಜಿ.ಎಚ್, ಶ್ರೀ ಶಿವಕಾಂತ ಟೆಂಗಳಿ ಮತ್ತು ತರಬೇತಿ ವಿಭಾಗದಿಂದ ಶ್ರೀಮತಿ ಪ್ರತಿಭಾ ಮಠ ಇವರು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಎರಡು ಜಿಲ್ಲೆಗಳಿಂದ 245 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಳಗಾವಿ** : ದಿನಾಂಕ 07.08.2020 ರಂದು ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಗ್ರಾಹಕ ಸಂಬಂಧ ನಿರ್ವಹಣೆ ವಿಷಯದ ಕುರಿತು ಆನಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಜಗದೀಶ ಕವಟಗಿಮಠ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಶ್ರೀ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ.ಕುಲಕರ್ಣಿ, ಮಾನ್ಯ ನಿವೃತ್ತ ಐ.ಟಿ ಮುಖ್ಯಸ್ಥರು, ಅಪೆಕ್ಸ್ ಬ್ಯಾಂಕ್ ಬೆಂಗಳೂರು ಹಾಗೂ ಕಿರಿಯ ವ್ಯವಸ್ಥಾಪಕರಾದ ಶ್ರೀ ಸಂತೋಷ ಬಸಣ್ಣವರ, ಜಿಲ್ಲಾ ಸಂಯೋಜಕರುಗಳಾದ ಶ್ರೀ ಬಸವರಾಜ ಹೊಂಗಲ, ಶ್ರೀ ವೃಷಭನಾಥ ಪರಪ್ಪನ್ನವರ, ಶ್ರೀ ಸುಜಯ ಬೆಳವಿ, ಶ್ರೀ ಜವಾಹರ ಮುಗ್ಗನವರ ಮತ್ತು ತರಬೇತಿ ವಿಭಾಗದಿಂದ ಶ್ರೀಮತಿ ಪ್ರತಿಭಾ ಮಠ ಇವರು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಬೆಳಗಾವಿ ಜಿಲ್ಲೆಯ 252 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಮೈಸೂರು** : ಮೈಸೂರು ಜಿಲ್ಲಾ ಛಾಯಾಸ್ನೇಹ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರ ಪರವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾಗಿ (ಮುಡಾ) ಆಯ್ಕೆಯಾಗಿರುವ ಶ್ರೀ ಹೆಚ್. ವಿ. ರಾಜೀವ್ ಇವರಿಗೆ ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ರಾಜೇಂದ್ರ, ಉಪಾಧ್ಯಕ್ಷರಾದ ಶ್ರೀ ಅಭಿನಂದನ್ ಹಾಗೂ ಶ್ರೀ ಶ್ರೀನಿಧಿ, ಶ್ರೀ ಸುದರ್ಶನ್, ಶ್ರೀ ವಿಘ್ನೇಶ್ ಮೋಹನ್, ಶ್ರೀ ಜಿ.ಟಿ. ಸುರೇಶ್, ಶ್ರೀ ಅರ್.ಕೆ. ಉಮೇಶ್, ಶ್ರೀ ಎಂ. ವಿಜಯಕುಮಾರ್, ಶ್ರೀ ಸುರೇಶ್ ಮೈತ್ರಿ, ಉಪಸ್ಥಿತರಿದ್ದರು.

**ಮೈಸೂರು ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಏರ್ಪಡಿಸಿದ್ದ ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಶ್ರೀ ಯಶವಂತ ಡೊಂಗ್ರೆಯವರು ನೀಡಿದ ಉಪನ್ಯಾಸದ ವಿಷಯವನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರಯೋಜನಕ್ಕಾಗಿ ಪ್ರಕಟಿಸಿದೆ.**

# ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು

ಯಾವುದೇ ವ್ಯವಹಾರ ಸಂಸ್ಥೆಗೆ ಸವಾಲುಗಳು ಮತ್ತು ಅನಿಶ್ಚಿತತೆಗಳು ಸರ್ವೇ ಸಾಮಾನ್ಯ. ಹಾಗೆಯೇ ಹೊಸ ಅವಕಾಶಗಳು ಮತ್ತು ಬೆಳವಣಿಗೆಯ ಸಾಧ್ಯತೆಗಳೂ ಇರುತ್ತವೆ. ಸವಾಲುಗಳನ್ನು ಎದುರಿಸಿ, ಸಂಕಷ್ಟದ ಪರಿಸ್ಥಿತಿಯನ್ನು ನಿಭಾಯಿಸಿ, ಅಗತ್ಯತೆಗಳನ್ನು ಗಮನಿಸುತ್ತಾ ಅವಕಾಶಗಳ ಸದುಪಯೋಗಪಡಿಸಿಕೊಳ್ಳುವುದೇ ಉತ್ತಮ ವ್ಯವಹಾರ ಸಂಸ್ಥೆಯ ಗುಣ. ಸಹಕಾರಿ ಸಂಘಗಳು ಜಗತ್ತಿನಾದ್ಯಂತ ಆರ್ಥಿಕ, ಸಾಮಾಜಿಕ ಮತ್ತು ಪ್ರಾಕೃತಿಕ ಸವಾಲುಗಳನ್ನು ಎದುರಿಸಿ ಎಂತಹ ಕಷ್ಟದ ಸಮಯದಲ್ಲಿಯೂ ಸ್ಥಿರವಾಗಿ ನಿಲ್ಲಬಹುದಾದ ಸಂಸ್ಥೆಗಳೆಂದು ಹೆಸರು ಪಡೆದಿವೆ. ಈ ಹಿನ್ನೆಲೆಯಲ್ಲಿ ನಾವು ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳನ್ನು ಪರಾಮರ್ಷಿಸಬೇಕಾಗಿದೆ.

**ಸಮಕಾಲೀನ ಪರಿಸ್ಥಿತಿಯ ವಿವಿಧ ಆಯಾಮಗಳು :**

ಜಗತ್ತಿನಾದ್ಯಂತ ಹರಡಿರುವ ಸಾಂಕ್ರಾಮಿಕ ರೋಗದಿಂದಾಗಿ ಎಲ್ಲೆಡೆ ಅನಿಶ್ಚಿತತೆ ವ್ಯಾಪಿಸಿದೆ. ಆರ್ಥಿಕ ಚಟುವಟಿಕೆಗಳು ಮಂದಗತಿಯಲ್ಲಿದ್ದು ಮಾರುಕಟ್ಟೆಯು ಅಸ್ಥಿರತೆಯನ್ನು ಅನುಭವಿಸುತ್ತಿದೆ. ಬೇಡಿಕೆಯಲ್ಲಿ ವ್ಯತ್ಯಯಾಸಗಳಾಗುತ್ತಿದ್ದು ಒಂದೆಡೆ ಕೆಲವು ಬಗೆಯ ಸೇವೆಗಳಿಗೆ ಬೇಡಿಕೆ ಕುಸಿದಿದ್ದು (ನಿರ್ಮಾಣ, ಪ್ರವಾಸೋದ್ಯಮ, ಪ್ರಯಾಣ ಇತ್ಯಾದಿ) ಇನ್ನೊಂದೆಡೆ ಇತರೆ ಕೆಲವು ಸೇವೆ (ಆರೋಗ್ಯ) ಮತ್ತು ಸರಕುಗಳಿಗೆ (ಗೃಹೋಪಯೋಗಿ, ಸ್ವಚ್ಛತೆ ಇತ್ಯಾದಿ) ಬೇಡಿಕೆ ಹೆಚ್ಚಿದೆ. ಇವೆಲ್ಲ ಒಂದೆಡೆ ಹೊಸ ಬಗೆಯ ವ್ಯವಹಾರಗಳ ಸಾಧ್ಯತೆಗಳನ್ನು ತೆರೆಯುತ್ತಿದ್ದು ಜೊತೆಗೆ, ತಗ್ಗಿದ ಅನಗತ್ಯ ವೆಚ್ಚದಿಂದಾಗಿ ಗೃಹ ಮಟ್ಟದ ಉಳಿತಾಯ ವೃದ್ಧಿಯಾಗುವಂತೆ ಮಾಡಿದೆ. ಸಾಮಾಜಿಕ ನೆಲೆಯಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಕಡಿಮೆಯಾಗಿದೆ ಆದರೆ ಕುಟುಂಬದೊಂದಿಗೆ ಸಮಯ ಕಳೆಯುವ ಸಾಧ್ಯತೆ, ಪರಿಸರದ ಮೇಲಿನ ಉತ್ತಮ ಪರಿಣಾಮ ಹೀಗೆ ಒಳ್ಳೆಯ ಬೆಳವಣಿಗೆಗಳೂ ಸಾಧ್ಯವಾಗಿವೆ. ಆದರೆ, ಒಟ್ಟಾರೆಯಾಗಿ ನೋಡಿದಾಗ ಸದ್ಯದ ಪರಿಸ್ಥಿತಿಯ ಸವಾಲುಗಳು ತಾತ್ಕಾಲಿಕವಾದುದು, ಅಲ್ಪಾವಧಿಯಲ್ಲೇ ಈ ಸಮಸ್ಯೆಗೆ ಪರಿಹಾರ ದೊರೆಯುವ ಸಾಧ್ಯತೆ ಇದೆ. ಆದುದರಿಂದ ಈಗಿನ ಸಮಸ್ಯೆಗೆ ಸ್ಪಂದಿಸುವುದು ಅಗತ್ಯವಾದರೂ ಪಾರಂಪರಿಕವಾಗಿ ಸಹಕಾರಿ ಸಂಸ್ಥೆಗಳು ಎದುರಿಸುತ್ತಿರುವ ಸವಾಲುಗಳು ಮತ್ತು ಅವುಗಳಿಗಿರುವ ಅವಕಾಶಗಳು ಇಂದಿಗೂ ಮುಖ್ಯ. ಆದುದರಿಂದ ಅವುಗಳ ಕಡೆಗೆ ಗಮನ ಹರಿಸುವುದು ಮುಖ್ಯ.

**ಸಹಕಾರಿ ಅನನ್ಯತೆ (ಕೋಆಪರೇಟಿವ್ ಐಡೆಂಟಿಟಿ) :**

ಸವಾಲುಗಳು ಮತ್ತು ಅವಕಾಶಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಮೊದಲಾಗಿ ನಾವೆಲ್ಲರೂ ಸಹಕಾರಿ ಸಂಸ್ಥೆಯ ಭಿನ್ನತೆ, ಅದರ ತತ್ವಗಳು ಮತ್ತು ಮೌಲ್ಯಗಳು, ಸದಸ್ಯರ ಅಗತ್ಯಗಳ ಪೂರೈಕೆಯ ಮೇಲಿರುವ ಒತ್ತು, ಪ್ರಜಾಸತ್ತಾತ್ಮಕ ನೆಲೆಗಟ್ಟಿನ ಮುಖಗಳು, ಸಾಮಾಜಿಕ ಬದ್ಧತೆ, ಸ್ಥಳೀಯತೆ ಇವುಗಳನ್ನು ಅರ್ಥಮಾಡಿಕೊಳ್ಳಬೇಕು. ನಾವು ಬೇರೆ ವ್ಯವಹಾರ ಸಂಸ್ಥೆಗಳಂತೆ ಲಾಭಗಳಿಸುವುದಕ್ಕಾಗಿಯೇ ಇರುವ ಸಂಸ್ಥೆಗಳಲ್ಲ. ಲಾಭಗಳಿಸುವುದು ಅಗತ್ಯ ಮತ್ತು ಅನಿವಾರ್ಯ. ಆದರೆ ಸಹಕಾರಿ ನಾಯಕತ್ವದ ಮಹತ್ವ ಕೇವಲ ಲಾಭಗಳಿಕೆಯಿಂದ ಕೃತಪಡುವುದಿಲ್ಲ. ಸಹಕಾರಿ ನಾಯಕತ್ವದ ಭಿನ್ನತೆಯು ಸಾಮೂಹಿಕ ನಿರ್ಧಾರಗಳ ಪ್ರಕ್ರಿಯೆ, ಅಗತ್ಯಗಳನ್ನು ವ್ಯವಹಾರವನ್ನಾಗಿ ಪರಿವರ್ತಿಸುವ ಕಲೆ, ಹೊಸ ನಾಯಕತ್ವದ ಬೆಳವಣಿಗೆಗೆ ಮಾದರಿಯಾಗಬೇಕಾದ ಅಗತ್ಯ ಈ ಎಲ್ಲ ಗುಣಗಳನ್ನು ಅವಲಂಬಿಸಿರುತ್ತದೆ. ಜೊತೆಗೆ ಸಾಂಸ್ಥಿಕ ರಚನೆಯ ಬಗ್ಗೆ ಅರಿವಿರುವುದೂ ಮುಖ್ಯ. ಉದಾಹರಣೆಗೆ ಸಂಯುಕ್ತ ಸಹಕಾರಿ, ಸರಕಾರ, ಇತರೆ ಸಂಸ್ಥೆಗಳೊಂದಿಗಿನ ಸಂಬಂಧ, ಅಂತಾರಾಷ್ಟ್ರೀಯ ನೆಲೆಗಟ್ಟಿನ ದೃಷ್ಟಿಕೋನ ಇವುಗಳೂ ಸಹಕಾರಿ ಅನನ್ಯತೆಯ ಭಾಗವೆನ್ನುವುದನ್ನು ಅರಿಯಬೇಕು.

**ಸಹಕಾರಿಗಳ ಮುಂದಿರುವ ಸವಾಲುಗಳು :**

ಸಹಕಾರಿ ಸಂಸ್ಥೆಯು ಸಾಮಾಜಿಕ ಬದ್ಧತೆಯ, ಪ್ರಜಾಸತ್ತಾತ್ಮಕ ನೆಲೆಯ ವ್ಯವಹಾರ ಸಂಸ್ಥೆಯಾಗಿರುವುದರಿಂದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹೀಗೆ ಎಲ್ಲ ಬಗೆಯ ಸವಾಲುಗಳನ್ನೂ ಎದುರಿಸಬೇಕಾಗುತ್ತದೆ

ಸವಾಲುಗಳು ಕಾಲಕಾಲಕ್ಕೆ ಬದಲಾಗುತ್ತವೆ ಮತ್ತು ಹಲವು ಊಹಿಸಲಾಗದ ಸವಾಲುಗಳು ಹುಟ್ಟಿಕೊಳ್ಳುತ್ತವೆ. ಸಹಕಾರಿಗಳು ಎದುರಿಸುತ್ತಿರುವ ಸವಾಲುಗಳನ್ನು ಆಂತರಿಕ ಮತ್ತು ಬಾಹ್ಯ ಸವಾಲುಗಳೆಂದು ವರ್ಗೀಕರಿಸಬಹುದು.

ಸದಸ್ಯರಲ್ಲಿ ತಮ್ಮ ಹಕ್ಕು ಮತ್ತು ಜವಾಬ್ದಾರಿಗಳ ತಿಳುವಳಿಕೆ ಇಲ್ಲದಿರುವುದು ಮತ್ತು ಭಾಗವಹಿಸುವಿಕೆ ಸಾಕಷ್ಟಿಲ್ಲದಿರುವುದು ಇದರಿಂದಾಗಿ ಸಹಕಾರಿ ಸಂಘಗಳು ಹೆಚ್ಚು ಮಾರುಕಟ್ಟೆ ಕೇಂದ್ರಿತ ಸಂಸ್ಥೆಗಳಂತಾಗುವುದು ಒಂದು ಮುಖ್ಯ ಸಮಸ್ಯೆ. ಜೊತೆಗೆ ನಾಯಕತ್ವದಲ್ಲಿ ವೃತ್ತಿಪರತೆ ಇಲ್ಲದಿರುವುದು ಮತ್ತು ವೈಯಕ್ತಿಕ ಆಸಕ್ತಿಗಳಿರುವುದು ಕೂಡ ಸಹಕಾರಿಗಳು ತತ್ವಗಳ ನೆಲೆಯಲ್ಲಿ ಕಾರ್ಯನಿರ್ವಹಿಸುವುದು ಕಷ್ಟವಾಗುವಂತೆ ಮಾಡುತ್ತಿವೆ. ಹೀಗೆಯೇ ಉದ್ಯೋಗಿಗಳಲ್ಲಿ ವೃತ್ತಿಪರತೆ,

ತಾಂತ್ರಿಕ ಮತ್ತು ವ್ಯವಸ್ಥಾಪನಾ ವಿಷಯಗಳಲ್ಲಿ ಪರಿಣಿತೆಯ ಕೊರತೆಯೂ ಕೂಡ ಸಹಕಾರಿಗಳನ್ನು ಬಾಧಿಸುತ್ತಿದೆ. ಸಹಕಾರಿ ಮಾದರಿಯ ಬಗ್ಗೆ ನಂಬಿಕೆಯ ಕೊರತೆ, ಕೆಲಸಗಳಲ್ಲಿ ಆಸಕ್ತಿಯ ಕೊರತೆ, ವ್ಯವಹಾರ ಅಭಿವೃದ್ಧಿ ಮತ್ತು ವೈವಿಧ್ಯತೆಯ ಬಗ್ಗೆ ಗಮನ ಹರಿಸದಿರುವುದು, ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವ ಕಾನೂನಿನ ಅಂಶಗಳು, ಸಹಕಾರಿ ಸಾಧ್ಯತೆಗಳು ಇವುಗಳನ್ನು ಸರಿಯಾಗಿ ತಿಳಿದುಕೊಳ್ಳದಿರುವು ಮತ್ತು ಸಂಸ್ಥೆಯ ನಿರ್ದೇಶಕರು, ಸದಸ್ಯರು ಹಾಗೂ ಕೆಲಸಗಾರರ ನಡುವಿನ ಸಂಬಂಧಗಳ ಸಮಸ್ಯೆಗಳು ಇವೆಲ್ಲ ಸಹಕಾರಿಗಳನ್ನು ದೀರ್ಘಾವಧಿಯಿಂದ ಬಾಧಿಸುತ್ತಿರುವ ಆಂತರಿಕ ಸಮಸ್ಯೆಗಳು.

ಹೀಗೆಯೇ, ಕ್ಷಿಪ್ರವಾಗಿ ಬದಲಾಗುತ್ತಿರುವ ಸರಕಾರಿ ನೀತಿಗಳು ಮತ್ತು ಕಾನೂನುಗಳು (ಉದಾಹರಣೆಗೆ ಖಾಸಗಿ ವಲಯಕ್ಕೆ ಹೆಚ್ಚಿನ ಪ್ರಾಶಸ್ತ್ಯನೀಡುವ ನೀತಿಗಳು, ತೆರಿಗೆಗಳಿಗೆ ಸಂಬಂಧಿಸಿದ ಕಾನೂನುಗಳು ಇತ್ಯಾದಿ), ಭೌಗೋಳಿಕ ನೆಲೆಯಲ್ಲಿ ಹಾಗೂ ಕಾರ್ಯಚಟುವಟಿಕೆಗಳ ನೆಲೆಯಲ್ಲಿ ಸೀಮಿತ ಪರಿಧಿಯೊಳಗೆ ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆ, ಖಾಸಗೀ ವಲಯದ ಸ್ಪರ್ಧೆ, ಸರಕಾರದ ಮಧ್ಯಪ್ರವೇಶ, ರಾಜಕೀಯ ಹಸ್ತಕ್ಷೇಪ, ಮತ್ತು ಕೆಲವು ಸಹಕಾರಿ ಸಂಸ್ಥೆಗಳ ತಪ್ಪಿನಿಂದಾಗಿ ಇಡೀ ಸಹಕಾರಿ ವಲಯವು ಸಾರ್ವಜನಿಕರ ವಿಶ್ವಾಸದ ಕೊರತೆಯನ್ನು ಅನುಭವಿಸುವಂತಾಗಿರುವುದು ಮುಂತಾದ ಬಾಹ್ಯ ಸವಾಲುಗಳನ್ನು ಸಹಕಾರಿಗಳು ಎದುರಿಸಬೇಕಾಗಿದೆ.

**ಸಹಕಾರಿಗಳಿಗಿರುವ ಅವಕಾಶಗಳು :**

ಇಷ್ಟೆಲ್ಲ ಸವಾಲುಗಳಿದ್ದರೂ ಸಹಕಾರಿ ಸಂಘಟನೆಗಳಿಗೆ ಹಲವು ಉತ್ತಮ ಮತ್ತು ಬೇರೆ ಹಲವು ವ್ಯವಹಾರ ಸಂಸ್ಥೆಗಳಿಗೆ ಕಷ್ಟಸಾಧ್ಯವಾದ ಅವಕಾಶಗಳಿರುವುದನ್ನು ಗಮನಿಸಬೇಕಿದೆ. ಸ್ಥಳೀಯ ಸಂಪನ್ಮೂಲಗಳ ಮೂಲಕ ಸ್ಥಳೀಯ ಅಗತ್ಯಗಳನ್ನು ಪೂರೈಸುವ ಸಾಧ್ಯತೆಗಳು ಮತ್ತು ಲೋಕಲ್ ಬ್ರಾಂಡ್‌ಗಳ ಅಭಿವೃದ್ಧಿಯ ಅವಕಾಶಗಳು (ಸರಕಾರವೂ ಪ್ರೋತ್ಸಾಹ ನೀಡುತ್ತಿರುವುದನ್ನು ಗಮನಿಸಿ) ಸಹಕಾರಿ ಸಂಘಗಳಿಗೆ ಅಪಾರವಾಗಿವೆ. ಸಂಸ್ಥೆಗೆ ಬದ್ಧರಾಗಿರುವ ಗ್ರಾಹಕ ವರ್ಗದ (ಕ್ಯಾಪ್ಟಿವ್ ಕಸ್ಟಮರ್ಸ್) ಲಭ್ಯತೆಯಿಂದಾಗಿ ಖಂಡಿತ ಎನ್ನುವ ಒಂದು ಮೊತ್ತದ ವ್ಯವಹಾರ ಸಾಧ್ಯವಾಗುತ್ತದೆ ಮತ್ತು ಸದಸ್ಯರ ಅಗತ್ಯಗಳನ್ನು ಅರಿತು ನೆಲೆಯಲ್ಲಿ ವ್ಯವಹಾರ ವೃದ್ಧಿಸಲು ಸಾಕಷ್ಟು ಅವಕಾಶಗಳು ಲಭ್ಯವಿವೆ. ಸಹಕಾರಿ ಸಂಘಟನೆಗಳು ಕಡಿಮೆ ರಿಸ್ಕ್ ಹಾಗೂ ಸುಲಭ ವ್ಯವಸ್ಥಾಪನೆಯ ಸಂಸ್ಥೆಗಳುಗಳು. ಹಾಗೆಯೇ ಕೆಲಸದ ರೀತಿ, ಸಮಯ ಹಾಗೂ ವ್ಯವಹಾರ ಸಂಘಟನೆಯಲ್ಲಿ ಸುಲಭವಾಗಿ ಹೊಂದಿಕೊಳ್ಳಬಹುದಾದ ಸಾಧ್ಯತೆಗಳು (ಫ್ಲೆಕ್ಸಿಬಿಲಿಟಿ) ಸಹಕಾರಿ ಸಂಸ್ಥೆಗಳಿಗಿದೆ. ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಕಾರ್ಯ ಸ್ವಾತಂತ್ರ ಮತ್ತು ಸಂಯುಕ್ತ ಸಹಕಾರಿಯ ಮಟ್ಟದಲ್ಲೇ ಹಲವು ಸಮಸ್ಯೆಗಳ ಇತ್ಯರ್ಥದ ಸಾಧ್ಯತೆಗಳು ಇರುವುದು ಕೂಡ ಒಂದು ಉತ್ತಮ ಅವಕಾಶ. ಈ ಎಲ್ಲ ಅವಕಾಶಗಳನ್ನು ಸಮರ್ಥವಾಗಿ ಬಳಸಬೇಕಾದುದು ಇಂದಿನ ಅಗತ್ಯ.

**ಸಹಕಾರಿಗಳು ಅನುಸರಿಸಬೇಕಾದ ಕಾರ್ಯತಂತ್ರಗಳು :**

ಸವಾಲುಗಳನ್ನು ಎದುರಿಸಿ ಅವಕಾಶಗಳನ್ನು ಬಳಸಬೇಕಾದರೆ ಸಹಕಾರಿ ನಾಯಕತ್ವವು ಹಲವು ಕಾರ್ಯತಂತ್ರಗಳನ್ನು ಅನುಸರಿಸಬೇಕು. ಮೊದಲನೆಯದಾಗಿ, ಸಹಕಾರಿ ಮಾದರಿಯಲ್ಲಿ ಪೂರ್ಣ ವಿಶ್ವಾಸವಿಡಿ ಮತ್ತು ಈ ಮಾದರಿಯ ಕುರಿತು ಪೂರ್ಣ ತಿಳುವಳಿಕೆ ಪಡೆಯಿರಿ. ಈ ಮೂಲಕ ಸದಸ್ಯರು ಹೆಚ್ಚು ಸಕ್ರಿಯರಾಗುವಂತೆ ಮಾಡಿ. ಈ ದಿಸೆಯಲ್ಲಿ ಸಾಮಾನ್ಯ ಮಾನದಂಡವೆಂದರೆ – ಕನಿಷ್ಠ ಶೇ. 30ರಷ್ಟು ಸದಸ್ಯರು ಸಾಮಾನ್ಯ ಸಭೆಗೆ ಹಾಜರಾಗಬೇಕು ಹಾಗೂ ಕನಿಷ್ಠ ಶೇ.10ರಷ್ಟು ಸದಸ್ಯರು ವಿವಿಧ ಸಮಿತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತಬೇಕು.

ಸದಸ್ಯರ ವಿವಿಧ ಅಗತ್ಯಗಳನ್ನು ಪೂರೈಸುವುದು ಸಾಧ್ಯವಾಗುವಂತೆ ವ್ಯವಹಾರ ವ್ಯವಿಧ್ಯತೆ ಸಾಧಿಸುವತ್ತ ಗಮನಕೊಡಿ. ಒಂದೇ ಬಗೆಯ ವ್ಯವಹಾರವನ್ನು ನಂಬಿರುವುದು ಒಳ್ಳೆಯದಲ್ಲ. ಮಾನದಂಡ –ಯಾವುದೇ ಸಹಕಾರಿ ಸಂಘಕ್ಕೆ ಕನಿಷ್ಟ ಮೂರು ಆದಾಯದ ಮೂಲಗಳಿರಬೇಕು (3 ವಿವಿಧ ವ್ಯವಹಾರಗಳಿರಬೇಕು) ಮತ್ತು ಒಟ್ಟು ಆದಾಯದ ಶೇ. 30ರಷ್ಟು ಮುಖ್ಯ ವ್ಯವಹಾರಕ್ಕೆ ಹೊರತಾದ ಮೂಲದಿಂದ ಬರುವಂತಾಗಬೇಕು.

ಸಹಕಾರಿಗಳ ನಡುವಿನ ಸಹಕಾರ ವೃದ್ಧಿಸುವುದು ಮತ್ತು ಇದನ್ನು ವ್ಯವಹಾರಾಭಿವೃದ್ಧಿಗೆ ಬಳಸುವುದು ಅತಿ ಮುಖ್ಯ. ಹಲವು ಸಹಕಾರಿ ಸಂಘಗಳು ಒಟ್ಟಾಗಿ ವ್ಯವಹಾರ ನಡೆಸುವುದು ಮತ್ತು ಸಂಪನ್ಮೂಲಗಳನ್ನು ಬಳಸುವುದು ಮಾಡಿದಾಗ ಸಗಟು ಖರೀದಿಯ ಉಪಯೋಗಗಳು, ವೆಚ್ಚ ಕಡಿಮೆ ಮಾಡುವುದು ಮತ್ತು ಹೆಚ್ಚಿನ ಕ್ಷಮತೆ ಸಾಧಿಸುವುದು ಸಾಧ್ಯವಾಗುತ್ತದೆ. ಉದಾಹರಣೆಗೆ ಸಹಕಾರಿ ಬ್ರಾಂಡ್ ಅಭಿವೃದ್ಧಿ ಪಡಿಸುವುದು, ಸಾಗಣೆ, ಗೋದಾಮು ಮುಂತಾದ ಸೌಕರ್ಯಗಳನ್ನು ಒಟ್ಟಾಗಿ ಬಳಸುವುದು ಮತ್ತು ಉತ್ತಮ ಪರಿಣಿತರ ಸೇವೆಗಳನ್ನು ಪಡೆಯುವುದು ಸಾಧ್ಯವಾಗುತ್ತದೆ.

ಇಂದಿನ ಅನಿಶ್ಚಿತ ಪರಿಸ್ಥಿತಿಯಿಂದಾಗಿ ಜನರ ಅಗತ್ಯಗಳಲ್ಲಾಗಿರುವ ಬದಲಾವಣೆಗಳನ್ನು ಗಮನಿಸಿ ಅವುಗಳಿಗನುಸಾರವಾಗಿ ಹೊಸ ವ್ಯವಹಾರವನ್ನು ಸಂಘಟಿಸಿ. ಕೆಲಸ ಅರಸಿ ಪಟ್ಟಣಗಳಿಗೆ, ವಿದೇಶಗಳಿಗೆ ಹೋದ ಸಾವಿರಾರು ಜನರು ತಮ್ಮ ಊರುಗಳಿಗೆ ಮರಳುತ್ತಿರುವುದರಿಂದ ಅವರುಗಳು ಹೊಸ ವ್ಯವಹಾರಗಳನ್ನು ಆರಂಭಿಸುವ, ಕೃಷಿಯನ್ನು ಉತ್ತಮ ಪಡಿಸಲು ಪ್ರಯತ್ನಿಸುವ ಮತ್ತು ಹೊಸ ಪರಿಣಿತಿಗಳನ್ನು ಪಡೆದು ಬಂದಿರುವ ಸಾಧ್ಯತೆಗಳಿವೆ. ಆದುದರಿಂದ ಅವರುಗಳನ್ನು ಕೇಂದ್ರವಾಗಿಟ್ಟುಕೊಂಡು ವ್ಯವಹಾರಾಭಿವೃದ್ಧಿ ಮಾಡಬಹುದಾಗಿದೆ.

ಕೊನೆಯದಾಗಿ ಮತ್ತು ಮುಖ್ಯವಾಗಿ ರಾಜಕೀಯ ತಟಸ್ಥತೆ, ವೃತ್ತಿಪರತೆ ಮತ್ತು ತಂತ್ರಜ್ಞಾನ ಅಳವಡಿಕೆಯ ಕಡೆಗೆ ಹೆಚ್ಚಿನ ಒತ್ತು ನೀಡಿ. ಪ್ರತಿ ಸಮಸ್ಯೆಯೂ ಒಂದು ಅವಕಾಶ ಎನ್ನುವುದನ್ನು ಅರ್ಥಮಾಡಿಕೊಂಡು ಚಟುವಟಿಕೆಗಳನ್ನು ಸಂಘಟಿಸಿರಿ. ಈ ಎಲ್ಲ ಕಾರ್ಯನೀತಿಗಳಿಂದಾಗಿ ಅವಕಾಶಗಳನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳುವುದು ಸಾಧ್ಯವಾಗುತ್ತದೆ.

# ಎರಡನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್ (ದೂರ ಶಿಕ್ಷಣ) ಆನ್‌ಲೈನ್ ಪರೀಕ್ಷೆಯ ವೇಳಾಪಟ್ಟಿ ಹಾಗೂ ಸೂಚನೆಗಳು

# Diploma in Cooperation and Banking Management (Distance Education) Course - 2nd Batch Online Examination Time Table & Instruction

**ಆನ್‌ಲೈನ್ ಪರೀಕ್ಷಾ ವೇಳಾಪಟ್ಟಿಯ ವಿವರ :**

| ಕ್ರಮ ಸಂಖ್ಯೆ | ವಿಷಯ | ದಿನಾಂಕ | ಸಮಯ |
|---|---|---|---|
| 1 | ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ<br>**Cooperative Environment and General management** | 12.09.2020 ಶನಿವಾರ | ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.00ರ ವರೆಗೆ |
| 2 | ಸಹಕಾರಿ ಪತ್ತು ನಿರ್ವಹಣೆ<br>**Cooperative Credit System** | 12.09.2020 ಶನಿವಾರ | ಮಧ್ಯಾಹ್ನ 12.30 ರಿಂದ 02.00ರ ವರೆಗೆ |
| 3 | ಬ್ಯಾಂಕಿಂಗ್ ಮೂಲ ಮಾಹಿತಿ<br>**Basics of Banking Operation** | 12.09.2020 ಶನಿವಾರ | ಮಧ್ಯಾಹ್ನ 03.00 ರಿಂದ 04.30ರ ವರೆಗೆ |
| 4 | ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು<br>**Cooperative Laws, Banking Laws and Other Allied Laws** | 13.09.2020 ಭಾನುವಾರ | ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.00ರ ವರೆಗೆ |
| 5 | ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ<br>**Accounting and Audit** | 13.09.2020 ಭಾನುವಾರ | ಮಧ್ಯಾಹ್ನ 12.30 ರಿಂದ 02.00ರ ವರೆಗೆ |
| 6 | ಮಾಹಿತಿ ತಂತ್ರಜ್ಞಾನ<br>**Information Technology** | 13.09.2020 ಭಾನುವಾರ | ಮಧ್ಯಾಹ್ನ 03.00 ರಿಂದ 04.30ರ ವರೆಗೆ |

**ಸೂಚನೆಗಳು :**

1. ಪರೀಕ್ಷಾರ್ಥಿಗಳು ಕನ್ನಡ ಅಥವಾ ಇಂಗ್ಲೀಷ್ ಮಾಧ್ಯಮ ಆಯ್ಕೆಮಾಡಿಕೊಳ್ಳಬಹುದು.
2. ಪ್ರತಿ ವಿಷಯಕ್ಕೆ 80 ಅಂಕಗಳಿಗೆ ಆನ್‌ಲೈನ್ ಪರೀಕ್ಷೆಯು ಸೀಮಿತವಾಗಿರುತ್ತದೆ.
3. ವಿಷಯವಾರು ಬರವಣಿಗೆಯ ಅಸೈನ್‌ಮೆಂಟ್‌ಗೆ 20 ಅಂಕಗಳನ್ನು ಮೀಸಲಿರಿಸಿದೆ.
4. ಆನ್‌ಲೈನ್ ಪರೀಕ್ಷೆಯ 80 ಅಂಕಗಳು – ಬಹು ಆಯ್ಕೆಯ ಪ್ರಶ್ನೆಗಳು, ಬಿಟ್ಟ ಸ್ಥಳ ತುಂಬಿರಿ, ಸರಿ ತಪ್ಪು ಬರೆಯಿರಿ ಇವುಗಳನ್ನು ಒಳಗೊಂಡಿರುತ್ತದೆ. ಅಂದಾಜು 40:20:20 ಪ್ರಮಾಣದಲ್ಲಿ ಪ್ರಶ್ನೆಗಳಿರುತ್ತವೆ.
5. ಆನ್‌ಲೈನ್ ಪರೀಕ್ಷೆಯ ಬಗ್ಗೆ ದಿನಾಂಕ 05.09.2020ರಂದು ತರಬೇತಿ ಆಯೋಜನೆ ಮಾಡಲಾಗಿದ್ದು, ಭಾಗವಹಿಸುವುದು ಹಾಗೂ ಪ್ರಶ್ನೆಗಳಿದ್ದಲ್ಲಿ ಪರಿಹರಿಸಿಕೊಳ್ಳುವುದು.
6. ತರಬೇತಿ ವಿವರ :

- ಬೆಂಗಳೂರು, ಶಿವಮೊಗ್ಗ ಹಾಗೂ ರಾಯಚೂರು ಕೇಂದ್ರಗಳ ಪರೀಕ್ಷಾರ್ಥಿಗಳಿಗೆ ದಿನಾಂಕ 05.09.2020ರಂದು ಬೆಳಿಗ್ಗೆ 11 ರಿಂದ 12ರ ವರೆಗೆ ತರಬೇತಿ ನಡೆಯುತ್ತದೆ.
- ಬೆಳಗಾವಿ ಹಾಗೂ ಮುಧೋಳ ಕೇಂದ್ರದ ಪರೀಕ್ಷಾರ್ಥಿಗಳಿಗೆ ದಿನಾಂಕ 05.09.2020ರಂದು ಮಧ್ಯಾಹ್ನ 03 ರಿಂದ 04ರ ವರೆಗೆ ತರಬೇತಿ ನಡೆಸಲಾಗುತ್ತದೆ.

7. **ಪ್ರಾಯೋಗಿಕ ಪರೀಕ್ಷೆ (ಮಾಕ್ ಪರೀಕ್ಷೆ)** : ದಿನಾಂಕ 08.09.2020ರಂದು ಮಧ್ಯಾಹ್ನ 03.00 ರಿಂದ 03.30ರ ವರೆಗೆ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗುವುದು. ನಂತರದಲ್ಲಿ ಪ್ರಶ್ನೋತ್ತರದ ಮೂಲಕ ಅಗತ್ಯ ಮಾರ್ಗದರ್ಶನ ಮಾಡಲಾಗುವುದು.
8. ಪರೀಕ್ಷಾರ್ಥಿಗಳಿಗೆ ನೀಡಿರುವ ಮೇಲ್ ಐಡಿ ಹಾಗೂ ದೂರವಾಣಿ ಸಂಖ್ಯೆಗೆ ಸಕಾಲಿಕವಾಗಿ ಅಗತ್ಯ ಸೂಚನೆಗಳನ್ನು ನೀಡಲಾಗುವುದು.
9. ಪ್ರತಿ ವಿಷಯದ ಆನ್‌ಲೈನ್ ಪರೀಕ್ಷೆಗಾಗಿ ಪ್ರತ್ಯೇಕ ಲಿಂಕನ್ನು ತಾವು ನೀಡಿರುವ ಇ ಮೇಲ್ ಐಡಿಗೆ ಕಳುಹಿಸಲಾಗುವುದು. ಸದರಿ ಲಿಂಕನ್ನು ಬಳಸಿ ಆನ್‌ಲೈನ್ ಪರೀಕ್ಷೆಗೆ ಹಾಜರಾಗುವುದು.
10. ಪರೀಕ್ಷಾ ಸಮಯದಲ್ಲಿ ಸಂಯುಕ್ತ ಸಹಕಾರಿಯು ನೀಡಿರುವ ಸೂಚನೆಗಳನ್ನು ಉಲ್ಲಂಘಿಸಿದಾಗ ನಿಮಗೆ ವಾರ್ನಿಂಗ್‌ಗಳು ಬರುತ್ತದೆ. ವಾರ್ನಿಂಗ್‌ಗಳ ಸಂಖ್ಯಾಧಾರದಲ್ಲಿ, ಪರೀಕ್ಷೆಯಲ್ಲಿ ನಿಮಗೆ ದೊರಕುವ ಅಂಕಗಳಲ್ಲಿ ಕಡಿತ ಮಾಡುವ ಅಧಿಕಾರ ಸಂಯುಕ್ತ ಸಹಕಾರಿಗೆ ಸಕ್ಷಮವಾಗಿದೆ.
11. ನಿಮ್ಮ ಮೊಬೈಲ್ ಫೋನ್/ಕಂಪ್ಯೂಟರ್/ಲಾಪ್‌ಟಾಫ್‌ಗಳ ತಾಂತ್ರಿಕ ನಿರ್ವಹಣೆ ಹಾಗೂ ಆನ್‌ಲೈನ್ ಪರೀಕ್ಷೆಯ ಸಿದ್ಧತೆ, ಪಾಲಿಸಬೇಕಾದ ನಿಯಮಗಳ ಬಗ್ಗೆ ಪ್ರತ್ಯೇಕ ಸೂಚನೆಗಳನ್ನು ಲಗತ್ತಿಸಲಾಗಿದೆ. ಗಮನಿಸುವುದು.
12. ವಿಷಯವಾರು ಬರವಣಿಗೆಯ ಪರೀಕ್ಷೆ (Subjective Assigment) ವಿವರ :

- ಪ್ರತಿ ವಿಷಯಕ್ಕೆ ಪ್ರತ್ಯೇಕವಾಗಿ 20 ಅಂಕಗಳ ವಿವರವಾದ ಅಸೈನ್‌ಮೆಂಟ್ ಬರೆಯಬೇಕು.
- ಪ್ರತೀ ವಿಷಯಕ್ಕೆ 7 ಪ್ರಶ್ನೆಗಳನ್ನು ಕೊಡಲಾಗುವುದು, ಇದರಲ್ಲಿ 4ನ್ನು ಮಾತ್ರ ಆಯ್ಕೆ ಮಾಡಿಕೊಂಡು ಉತ್ತರರಿಸಬೇಕು.
- ಬರವಣಿಗೆ ಕನ್ನಡ ಅಥವಾ ಇಂಗ್ಲೀಷಿನಲ್ಲಿರಬಹುದು, ಕಡ್ಡಾಯವಾಗಿ ಕೈಬರಹದಲ್ಲಿರಬೇಕು.
- ಪರೀಕ್ಷಾರ್ಥಿಗಳು "ಎ4" ಕಾಗದವನ್ನು ಉಪಯೋಗಿಸಬೇಕು.
- ಉತ್ತರ ಪತ್ರಿಕೆಯನ್ನು ಸರಿಯಾಗಿ ಪಿನ್ ಮಾಡಿರಬೇಕು ಮತ್ತು ಪ್ರತಿ ಪುಟಕ್ಕೆ ಪುಟ ಸಂಖ್ಯೆ ಹಾಕಿರಬೇಕು.
- ಅಸೈನ್‌ಮೆಂಟ್ ಉತ್ತರ ಪತ್ರಿಕೆಗಳನ್ನು ಕಳುಹಿಸುವ ಕೊನೆಯ ದಿನಾಂಕ: 22.09.2020.
- ಅಸೈನ್‌ಮೆಂಟ್ ಉತ್ತರ ಪತ್ರಿಕೆಗಳನ್ನು ಸಂಯುಕ್ತ ಸಹಕಾರಿಯು ನೀಡಿರುವ ಮಾದರಿ ಮುಖಪುಟದಲ್ಲಿಯ ವಿವರಗಳನ್ನು ಭರ್ತಿಮಾಡಿ "DCBM A ssignement - Confidential" ಎಂದು ಕವರ್ ಮೇಲ್ ನಮೂದಿಸಿ – "ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, ರಾಜಾಜಿನಗರ, ಬೆಂಗಳೂರು–560010" ಇವರಿಗೆ ಕಳುಹಿಸಬೇಕು. 6 ಉತ್ತರ ಪತ್ರಿಕೆಗಳನ್ನು ಒಂದೇ ಕವರಿನಲ್ಲಿ ಹಾಕಿರಬೇಕು.

**Instructions :**

1. The candidates may select Kannada or English language.
2. This online examination will be for 80 marks each, for all 6 subjects.
3. The rest 20 marks will be subjective Assignment.
4. The 80 marks questions on online exam will cover Multiple choice questions (MCQs), fill in the blanks, true or false i.e.,40:20:20 approximately.
5. Training for online examination process will be conducted on 05.09.2020 with question and answer session.
6. The below is the details of online training programme i.e. on 05.09.2020.

- For Bangalore, Shivamogga and Raichur candidates will have to attend training on 05.09.2020 at 11 am to 12 pm.
- For Belgavi and Mudhol candidates will have to attend training programme on 05.09.2020 at 03 pm to 04 pm

7. Regarding Mock Examination: Mock examination will be conducted on 08.09.2020 at 03.00 to 03.30 pm.
8. A separate link for all the online examination will be sent to your mail id. You have to appear online examination by

using that link.

9. Communication are made through Mails and SMS to all candidates to the given phone numbers and mail ids.
10. During examination - minimizing of window or any other undesired activities will be viewed seriously and marks will be deducted out of the taken marks depending upon the number of system warnings.
11. The technical instructions for appearing online exam is enclosed please go through thoroughly.
12. Instructions for subjective assignment 20 marks for each subjects
    - Every paper has to be answered in a descriptive form, 04 questions has to attend out of 07 question. Each question carries 05 Marks.
    - Assignments Should be write in Kannada or in English. Assignment should be in written.
    - Candidates has to use A4 size paper.
    - The front paper of assignment should be as per the format given by KSSFCL.(format is attached below)
    - The paper should be properly pinned and pages should be numbered.
    - Last date of submission of subjective assignment is 22.09.2020.
    - This assignment will have to send to KSSFCL directly in closed cover addressed to Managing Director, Karnataka State Souharda Fdereal Coopeartive Ltd., Nirmanbhavan, Dr. Rajukumar Road, Rajajinagar 1st block, Bangalore – 560010.
    - All the 6 assignments to be in one cover and the top of the cover should contain : DCBM 2nd batch subjective assignment. **Confidential**

## ಉತ್ತರ ಪತ್ರಿಕೆಯ ಮುಖಪುಟ / Coverpage of Answer Paper

**ಎರಡನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್ (ದೂರ ಶಿಕ್ಷಣ)**

**ವಿಷಯವಾರು ಪರೀಕ್ಷೆ (ಆಫ್‌ಲೈನ್) / Subjective Examination (Off line)**

**ಉತ್ತರ ಪತ್ರಿಕೆ / Answer paper (1st Page)**

ಹೆಸರು / **Name of Candidate** :

ನೋಂದಣಿ ಸಂಖ್ಯೆ / **Reg. No** :

ವಿಷಯ / **Subject** :

ಪುಟಗಳ ಸಂಖ್ಯೆ / **Number of pages** :

ದಿನಾಂಕ / **Date** :

ಸ್ಥಳ / **Place** : ಸಹಿ / **Signature**

# ಅವ್ಯವಹಾರ ಮಾಡಿರುವ ಸಹಕಾರಿಗಳ ಮೇಲೆ ಕಾನೂನು ಕ್ರಮ

**1. ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು (ಬಿಜಿಯು–0056)**

ಸೌಹಾರ್ದ ಸಹಕಾರಿಯಲ್ಲಿ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿಗಳು ಭಾಗಿಯಾಗಿ ಅಧಿಕಾರ ದುರುಪಯೋಗದಿಂದ ಹಣ ದುರುಪಯೋಗವಾಗಿರುವ ಬಗ್ಗೆ ಪರಿವೀಕ್ಷಣೆಯಲ್ಲಿ ಕಂಡುಬಂದ ಹಿನ್ನಲೆಯಲ್ಲಿ ಸಹಕಾರಿಯ ವಿರುದ್ಧ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 25(2)(ಎ–2), ಹಾಗೂ ಕಲಂ 25(2)(ಡಿ) ರಲ್ಲಿ ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ವಿಶೇಷಾಧಿಕಾರಿಯನ್ನು ನೇಮಕ ಮಾಡಲಾಗಿದೆ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ನಿರ್ಣಯದಂತೆ ಠೇವಣಿದಾರರ ಹಣವನ್ನು ದುರುವಿನಿಯೋಗ ಮಾಡಿದ ಹಿನ್ನಲೆಯಲ್ಲಿ ಸಕ್ಷಮ ಪ್ರಾಧಿಕಾರವನ್ನು (Competent Authority under KPID Act) ನೇಮಕ ಮಾಡುವಂತೆ ಕೋರಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸಹಕಾರ ಇಲಾಖೆ, ಮಾನ್ಯ ಸಹಕಾರಿಗಳ ನಿಬಂಧಕರು ಇವರುಗಳಿಗೆ ಪತ್ರ ಬರೆದು ಕ್ರಮವಿಡಲಾಗಿರುತ್ತದೆ. ಅದರಂತೆ ಸರ್ಕಾರವೂ ಸಕ್ಷಮ ಪ್ರಾಧಿಕಾರ ನೇಮಕಮಾಡಿ ಆದೇಶ ಹೊರಡಿಸಿರುತ್ತಾರೆ. ಸದರಿಯವರು ಸಹಕಾರಿಯ ಆಸ್ತಿಗಳ ಶೋಧನೆ ಮತ್ತು ಜಪ್ತಿ ಕಾರ್ಯಗಳಿಗೆ ಕ್ರಮವಿಟ್ಟಿರುತ್ತಾರೆ.

ಅಲ್ಲದೇ ಸಂಯುಕ್ತ ಸಹಕಾರಿಯಿಂದ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಸಹಕಾರಿಯ 10 ಆಸ್ತಿಗಳಿಗೆ ಸಂಬಂಧಿಸಿದಂತೆ ಆದೇಶ ಪೂರ್ವ ಜಪ್ತಿ (ಎಬಿಜೆ) ಮಾಡಿ ಕ್ರಮವಿಟ್ಟಿರುತ್ತದೆ.

**2. ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿ., ಬೆಂಗಳೂರು (ಬಿಜಿಯು–0280)**

ಸೌಹಾರ್ದ ಸಹಕಾರಿಯಲ್ಲಿ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿಗಳು ಭಾಗಿಯಾಗಿ ಅಧಿಕಾರ ದುರುಪಯೋಗದಿಂದ ಹಣ ದುರುಪಯೋಗವಾಗಿರುವ ಬಗ್ಗೆ ಪರಿವೀಕ್ಷಣೆಯಲ್ಲಿ ಕಂಡುಬಂದ ಹಿನ್ನಲೆಯಲ್ಲಿ ಸಹಕಾರಿಯ ವಿರುದ್ಧ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 25(2)(ಎ–2)ರಲ್ಲಿ ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ವಿಶೇಷಾಧಿಕಾರಿಯನ್ನು ನೇಮಕ ಮಾಡಲಾಗಿದೆ, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯದಂತೆ ಠೇವಣಿದಾರರ ಹಣವನ್ನು ದುರುವಿನಿಯೋಗ ಮಾಡಿದ ಹಿನ್ನಲೆಯಲ್ಲಿ ಸಕ್ಷಮ ಪ್ರಾಧಿಕಾರವನ್ನು ನೇಮಕ ಮಾಡುವಂತೆ ಕೋರಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸಹಕಾರ ಇಲಾಖೆ, ಮಾನ್ಯ ಸಹಕಾರಿಗಳ ನಿಬಂಧಕರು ಇವರುಗಳಿಗೆ ಪತ್ರ ಬರೆದು ಕ್ರಮವಿಡಲಾಗಿರುತ್ತದೆ.

ಮುಂದುವರೆದು ತಮಿಳುನಾಡಿನ ಧರ್ಮಪುರಿ ಜಿಲ್ಲೆಯಲ್ಲಿನ ಪೆನ್ನಾಗರಮ್ ಉಪನೋಂದಣಾಧಿಕಾರಿ ವ್ಯಾಪ್ತಿಯಲ್ಲಿ ಬರುವ ಪೆನ್ನಾಗರಮ್‌ನಲ್ಲಿ 22 ಎಕರೆ ಜಮೀನನ್ನು ಸಹಕಾರಿಯ ಹೆಸರಿನಲ್ಲಿ ಅಧ್ಯಕ್ಷರಾಗಿದ್ದ ಶ್ರೀ ರಾಮಕೃಷ್ಣ ಇವರು ಖರೀದಿಸಲಾಗಿರುತ್ತದೆ ಎಂದು ಸಹಕಾರಿ ಮುಖ್ಯ ಕಾರ್ಯನಿರ್ವಾಹಕರ ಮೌಖಿಕ ಮಾಹಿತಿಯ ಹಿನ್ನೆಲೆಯಲ್ಲಿ ಪೆನ್ನಾಗರಮ್ ಉಪ ನೋಂದಣಾಧಿಕಾರಿಗಳಿಗೆ ಸದರಿ ಸಹಕಾರಿಯ ಆಸ್ತಿಯನ್ನು ಪರಭಾರೆಯನ್ನು ಮಾಡಬಾರದೆಂದು ಪತ್ರ ಬರೆದು ಕ್ರಮವಿಡಲಾಗಿದೆ. ಸಹಕಾರಿಗಳ ಮನವಿ ಮೇರೆಗೆ ಸದರಿ ಸಹಕಾರಿಗೆ ಸಕ್ಷಮ ಪ್ರಾಧಿಕಾರವನ್ನು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**3. ಎಸ್. ಎಮ್. ಎನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ, (ಬಿಜೆಪಿ–0075)**

ಸಹಕಾರಿಯ ವಿಚಾರಣಾ ವರದಿಯನ್ನು ಪರಿಶೀಲಿಸಿ ಸಹಕಾರಿಯಲ್ಲಿ ನಡೆದ ಅಧಿಕಾರ ದುರುಪಯೋಗ, ಹಣ ದುರುಪಯೋಗಳಿಗೆ ಸಂಬಂಧಪಟ್ಟಂತೆ ವಿಜಯಪುರ ನಗರ ಪೊಲೀಸ್ ಠಾಣೆಯಲ್ಲಿ ಸಂಬಂಧಿಸಿದವರ ವಿರುದ್ಧ ದೂರು ದಾಖಲಿಸಲು ಕ್ರಮವಿಡಲಾಗುತ್ತಿದೆ. ಸೌಹಾರ್ದ ಸಹಕಾರಿ ಆಡಳಿತ ಮಂಡಳಿ ಸದಸ್ಯರ ಹೆಸರಿನಲ್ಲಿ ಇರುವ ಯಾವುದೇ ಆಸ್ತಿಗಳು ತಿಳಿದುಬಂದಲ್ಲಿ, ಸಂಯುಕ್ತ ಸಹಕಾರಿಗೆ ಒದಗಿಸಿದಲ್ಲಿ ಆ ಆಸ್ತಿಗಳನ್ನು ಆದೇಶ ಪೂರ್ವ ಜರ್ಪಿಗಾಗಿ (ಎಬಿಜೆ) ಮಾಡಿಸಲು ಕ್ರಮವಿಡಲಾಗುವುದು.

ರಾಜ್ಯದ ಯಾವುದೇ ಸೌಹಾರ್ದ ಸಹಕಾರಿಗಳಲ್ಲಿ ಠೇವಣಿದಾರರು ವಿಶ್ವಾಸದಿಂದ ಇಟ್ಟಿರುವ ಠೇವಣಿ ಹಣವನ್ನು ದುರುಪಯೋಗ ಮಾಡಿದಲ್ಲಿ, ಮೋಸ ಅಥವಾ ವಂಚನೆ ಮಾಡಿದ ಪ್ರಕರಣಗಳು ಕಂಡುಬಂದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.



# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆ

74ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



ಕೇಂದ್ರ ಕಛೇರಿ



ಕಲಬುರಗಿ ಪ್ರಾಂತೀಯ ಕಛೇರಿ



ಮೈಸೂರು ಪ್ರಾಂತೀಯ ಕಛೇರಿ



ಬೆಳಗಾವಿ ಪ್ರಾಂತೀಯ ಕಛೇರಿ



ಬೀದರ ಜಿಲ್ಲಾ ಸಂಪರ್ಕ ಕಛೇರಿ



ಕೋಲಾರ ಜಿಲ್ಲಾ ಸಂಪರ್ಕ ಕಛೇರಿ



ಬಾಗಲಕೋಟ ಜಿಲ್ಲಾ ಸಂಪರ್ಕ ಕಛೇರಿ



ಬಳ್ಳಾರಿ : ಶ್ರೀ ನಂದೀಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆ




**ಶಿವಮೊಗ್ಗ :** ದಿನಾಂಕ 15.08.2020 ಸಾರಸ್ವತ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ ಸಹಕಾರಿ ವತಿಯಿಂದ 74ನೇ ಸಾತಂತ್ರ್ಯ ದಿನಾಚರಣೆಯ ಧ್ವಜರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಪಂಡಿತ್ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಾಮರಾಜನಗರ :** ನವ್ಯ ಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಚಿತ್ರದುರ್ಗ :** ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ಎಂ.ಹೆಚ್. ಪ್ರಾಣೇಶ್ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀಯುತ ಎಲ್.ಬ್ರಹ್ಮಾನಂದ ಗುಪ್ತ ಮತ್ತು ಶ್ರೀಮತಿ ಎಲ್.ಆರ್. ಅನಿತರಾಜ್, ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಎಸ್. ಶೈಲಜ ರವರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ :** ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಮಂಡ್ಯ :** ಶ್ರೀ ಎಸ್ ಡಿ ಮಾಸ್ತಮ್ಮ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಚಾಮರಾಜನಗರ :** ಶ್ರೀ ಪಾರ್ವತಿ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಚಾಮರಾಜನಗರ :** ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಚಾಮರಾಜನಗರ :** ಸಂಗಮ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಬಳ್ಳಾರಿ :** ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಬಳ್ಳಾರಿ :** ಶ್ರೀ ಶಕ್ತಿ ಪಂಚಮಿತ್ರ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಹಾವೇರಿ :** ಶ್ರೀ ಪುಟ್ಟರಾಜ ಸೌಹಾರ್ದ ಸಹಕಾರಿ ನಿಯಮಿತ ಬಂಕಾಪೂರ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹನುಮಂತಪ್ಪ. ಯು.ವ್ಹಿ ಇವರು ನೇರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಲಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರನ್ನು ಸನ್ಮಾನಿಸಿ 3000 ಸಾವಿರ ಪ್ರೋತ್ಸಾಹ ಧನ ನೀಡಲಾಯಿತು.



**ಬಳ್ಳಾರಿ :** ಅರಸೀಕೆರೆ ಯೋಗ ನರಸಿಂಹ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಬಳ್ಳಾರಿ :** ಶ್ರೀ ಮಟ್ಟೆಪ್ಪ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.




**ಶಿವಮೊಗ್ಗ :** ದಿವ್ಯ ಚೇತನ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿ ವತಿಯಿಂದ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಮಂಡ್ಯ :** ಸಮೃದ್ಧಿ ಭಾರತಿನಗರ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



**ಶಿವಮೊಗ್ಗ :** ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ನಿರ್ದೇಶಕರು ಹಾಗೂ ನಿವೃತ್ತ ತಹಸೀಲ್ದಾರ್ ಕುಲಕರ್ಣಿ ಸಿ. ಎಂ. ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಎಸ್. ಎ. ನಾರಾಯಣಮೂರ್ತಿ, ನಿರ್ದೇಶಕರುಗಳಾದ ಶ್ರೀ ರತ್ನಾಕರ. ಎಸ್. ಶ್ರೀ ಹರಿಕೃಷ್ಣ. ಯು, ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಮಾಲತಿ ಎಂ ಪಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಳಗಾವಿ :** ಅರಿಹಂತ ಅಲ್ಪಸಂಖ್ಯಾತರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಧೂಪದಾಳ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಜಿಲ್ಲಾ ಸಯೋಜಕರಾದ ಸುಜಯ್ ಡಿ. ಬೆಳವಿ ಇವರು ಉಪಸ್ಥಿತರಿದ್ದರು.



**ರಾಮನಗರ:** ಪಾವಗಡ ಸೌಹಾರ್ದ ಸಹಕಾರಿ ನಿ., ಶಾಖೆ ರಾಮನಗರ ಸಹಕಾರಿ ವತಿಯಿಂದ 74ನೇ ಸ್ವಾತಂತ್ರ್ಯ ದಿನಾಚರಣೆಯನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ. ಎಂ. ರವರು ಭಾಗವಹಿಸಿ ಧ್ವಜಾರೋಹಣ ನೇರವೇರಿಸಿದರು.



**ಕೊಪ್ಪಳ :** ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಿ, ಕೊಪ್ಪಳ ಸಹಕಾರಿಯು 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಹಕಾರಿಯ ಆವರಣದಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಹಾಗೂ ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಡಿ.ಎಮ್.ಪೂಜಾರ್, ವಕೀಲರು, ಕೊಪ್ಪಳ, ಶ್ರೀ ಶಿವಪುತ್ರಯ್ಯ ಹಳ್ಳಿಕೇರಿ ಮಠ, ಶ್ರೀ ರವಿ ಇಟಗಿ, ಶ್ರೀ ಸುರೇಶ ಬಂಗಾರ ಅಂಗಡಿ, ಶ್ರೀ ಮಾರುತಿ ಕಾಸನಕಂಡಿ, ಶ್ರೀ ಮಾರುತಿ ಜಾನ ಶರಣಪ್ಪ ಪಲ್ಲೇದ್ ಮತ್ತು ಊರಿನ ಹಿರಿಯರು, ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ, ಸಹಕಾರಿಯ ಮಾನ್ಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು, ಪಿಗ್ಮಿ ಏಜೆಂಟರು ಮತ್ತು ಮುಖ್ಯಕಾರ್ಯನಿರ್ವಾಹಕಾರದ ಶ್ರೀ ಕೃಷ್ಣ ರವರು ಉಪಸ್ಥಿತರಿದ್ದರು.



**ಕೊಪ್ಪಳ :** ಶ್ರೀ ವೀರ ರಾಣಿ ಕಿತ್ತೂರು ಚೆನ್ನಮ್ಮ ಸೌಹಾರ್ದ ಪತ್ತಿನ ಸಹಕಾರಿ ನಿ., ಕೊಪ್ಪಳ ಸಹಕಾರಿಯಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಹಕಾರಿಯ ಆವರಣದಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಹಾಗೂ ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಎಲ್.ಎಮ್.ಪಾಟೀಲ್ ಹಾಗೂ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ವೀರಣ್ಣ ಭೃಂಗಿ, ಶ್ರೀ ರಾಜಶೇಖರ್ ತಳವಗೇರಿ, ಶ್ರೀ ಮಾರುತಿ ಜಾನ ಶರಣಪ್ಪ ಪಲ್ಲೇದ್, ಶ್ರೀ ಶರಭಯ್ಯ ರಾವಳಮಠ, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು, ಪಿಗ್ಮಿ ಏಜೆಂಟರು ಮತ್ತು ಮುಖ್ಯಕಾರ್ಯನಿರ್ವಾಹಕಾರದ ಶ್ರೀಮತಿ ಶೀಲಾ ರವರು ಉಪಸ್ಥಿತರಿದ್ದರು.

## ಸನ್ಮಾನ



**ಕೊಪ್ಪಳ :** ದಿನಾಂಕ : 30.08.2020 ರಂದು ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಕೊಪ್ಪಳ ಸದರಿ ಸಹಕಾರಿಯ ನೂತನ ಕಛೇರಿಯ ಸ್ಥಳಾಂತರ ಮಳಿಗೆಯ ಉದ್ಘಾಟನಾ ಸಮಾರಂಭದಲ್ಲಿ ರಾಯಚೂರು ವಿಜ್ಞಾನ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾಗಿ ಆಯ್ಕೆಯಾದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶ್ರೀಧರ್ ಕೆಸರಟ್ಟಿ ಹಾಗೂ ಶ್ರೀ ಮಹಾಂತೇಶ ಗೌಡ ಪಾಟೀಲ್ ಇವರುಗಳನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಅಮರೇಶ ಕರಡಿ, ಸಹಕಾರಿಯ ಅದ್ಯಕ್ಷರು, ಉಪಾಧ್ಯಕ್ಷರು ನಿರ್ದೇಶಕ ವೃಂದದವರು, ಸಿಬ್ಬಂದಿಗಳು ಹಾಗೂ ಪಿಗ್ಮಿ ಸಂಗ್ರಾಹಕರು ಉಪಸ್ಥಿತರಿದ್ದರು.

## ಉದ್ಘಾಟನೆ



**ದಕ್ಷಿಣ ಕನ್ನಡ :** ಶ್ರೀ ಗುರು ಶಕ್ತಿ ಸೌಹಾರ್ದ ಕೋ-ಆಪರೇಟಿವ್ ನಿ., ಮಂಗಳೂರಿನ ಕಾವೂರಿನಲ್ಲಿ ನೂತನವಾಗಿ ನೋಂದಣಿಗೊಂಡ ಸಹಕಾರಿಯ ಉದ್ಘಾಟನಾ ಸಮಾರಂಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಹರೀಶ್ ಕುಮಾರ್, ಮಹಾನಗರ ಪಾಲಿಕೆಯ ಮೇಯರ್ ಶ್ರೀ ದಿವಾಕರ್ ಪಾಂಡೇಶ್ವರ, ಮುಡಾ ಅಧ್ಯಕ್ಷರಾದ ಶ್ರೀ ರವಿಶಂಕರ್ ಮಿಜಾರ್, ಸ್ಥಳೀಯ ಮಹಾನಗರ ಪಾಲಿಕೆಯ ಸದಸ್ಯರುಗಳು ಉಪಸ್ಥಿತರಿದ್ದರು.

## 2ನೇ ವಾರ್ಷಿಕೋತ್ಸವ



**ಕೊಪ್ಪಳ :** ದಿನಾಂಕ 11.07.2020 ರಂದು ಶ್ರೀ ಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಗಿಣಿಗೇರಾ ತಾ॥ ಜಿ॥ ಕೊಪ್ಪಳ 2ನೇ ವಾರ್ಷಿಕೋತ್ಸವನ್ನು ಕಾರ್ಯಕ್ರಮವನ್ನು ಸಹಕಾರಿಯ ಅಧ್ಯಕ್ಷರಾದ ಸುರೇಶರಾವ್ ಕುಲಕರ್ಣಿ ಉದ್ಘಾಟಿಸಿದರು. ಸಹಕಾರಿಯ ಕಿರು ಪರಿಚಯವನ್ನು ಸಹಕಾರಿಯ ಉಪಾಧ್ಯಕ್ಷರಾದ ಗಾಳೆಪ್ಪ ಗೊರವರ ಸವಿಸ್ತಾರವಾಗಿ ತಿಳಿಸಿದರು. ವೇದಿಕೆಯ ಮೇಲೆ ಶ್ರೀ ಶರಣಪ್ಪ ಹ್ಯಾಟಿ, ಅಧ್ಯಕ್ಷರು, ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ, ಶ್ರೀ ಶರಣಪ್ಪ ವಡಿಗೇರಿ, ಅಧ್ಯಕ್ಷರು, ಉದಯೋನ್ಮಕ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ, ಶ್ರೀ ಹನುಮರಡ್ಡಿ, ಮುಖ್ಯ ಕಾರ್ಯನಿರ್ವಾಹಕರು, ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ, ಶ್ರೀ ಆನಂದ, ಮುಖ್ಯ ಕಾರ್ಯನಿರ್ವಾಹಕರು, ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹುಲಿಗಿ, ಶ್ರೀ ಸುಬ್ಬಣ್ಣ ಆಚಾರ್ಯರು, ಹಿರಿಯ ಮುಂಖಡರು, ಗಿಣಿಗೇರಾ, ಸಹಕಾರಿಯ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಳಿಯವರು, ಸಹಕಾರಿ ಸದಸ್ಯರು ಮತ್ತು ಸಿಬ್ಬಂದಿವರ್ಗ, ನಿತ್ಯ ನಿಧಿ ಸಂಗ್ರಹಕಾರರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಸಹಕಾರಿಯ ಸಿಬ್ಬಂದಿವರ್ಗಕ್ಕೆ ನಿತ್ಯ ನಿಧಿ ಸಂಗ್ರಹಕಾರರು ಬೇರೆ ಸಹಕಾರಿಗಳಿಗೆ ಸನ್ಮಾನಿಸಿ ಅಭಿನಂಧನಾ ಪತ್ರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕರಾದ ಶಿವಕುಮಾರ ಏಣಗಿ ನೆರವೇರಿಸಿಕೊಟ್ಟರು ವಂದನಾರ್ಪಣೆಯನ್ನು ಶಿವಕುಮಾರ ಕಾಕಿ ಇವರು ನಡೆಸಿಕೊಟ್ಟರು.

# ಸರಸ್ವತಿ ಸೌಹಾರ್ದ ಸಹಕಾರಿಯ ಶಾಖೆ ಉದ್ಘಾಟನೆ



**ಉಡುಪಿ :** ಪುತ್ತೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿ ರಾಜ್ಯಾದ್ಯಂತ 17 ಶಾಖೆಗಳನ್ನು ಹೊಂದಿ ಕಾರ್ಯಾಚರಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಇದರ ಮೂಡಬಿದಿರೆ ಶಾಖೆಯು ಸ್ಥಳಾಂತರಗೊಂಡು ಗುರುಪುರ–ಕೈಕಂಬದಲ್ಲಿ ದಿನಾಂಕ 21–08–2020ನೇ ಶುಕ್ರವಾರದಂದು ಉದ್ಘಾಟನೆಗೊಂಡಿತು.

ಮಂಗಳೂರು ನಗರ ಉತ್ತರದ ಶಾಸಕರಾದ ಡಾ। ಭರತ್ ಶೆಟ್ಟಿಯವರು ಶಾಖೆಯನ್ನು ಉದ್ಘಾಟಿಸಿ ಗ್ರಾಹಕರಿಗೆ ಅತ್ಯುತ್ತಮ ಸೇವೆಯನ್ನು ನೀಡಿ ಯಶಸ್ವಿಯಾಗಿ ಮುನ್ನಡೆಯಲಿ ಎಂದು ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ಯು.ಪಿ. ಇಬ್ರಾಹಿಂರವರು ಮಾತನಾಡುತ್ತಾ ಸಹಕಾರಿಯು ತನ್ನ ಸದಸ್ಯ ಗ್ರಾಹಕರಿಗೆ ನಗು ಮೊಗದ ಸೇವೆಯನ್ನು ನೀಡುವುದರೊಂದಿಗೆ ಮತ್ತಷ್ಟು ಶಾಖೆಗಳನ್ನು ತೆರೆಯುವಂತಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಹಾಗೂ ಕ್ಯಾಂಪ್ಕೋ ಲಿಮಿಟೆಡ್ ಮಂಗಳೂರು ಇದರ ಅಧ್ಯಕ್ಷರೂ ಆಗಿರುವ ಶ್ರೀ ಎಸ್. ಆರ್. ಸತೀಶ್ಚಂದ್ರರವರು ಸಹಕಾರಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಹಾಗೂ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ ಸೇವಾ ಕಾರ್ಯಗಳ ಬಗ್ಗೆ ಮಾಹಿತಿಯನ್ನು ನೀಡಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಅತಿಥಿಗಳನ್ನು ಸ್ವಾಗತಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಮಂಗಳೂರು ತಾಲ್ಲೂಕು ಪಂಚಾಯತ್ ಸದಸ್ಯರಾದ ಶ್ರೀ ಸಚಿನ್ ಅಡಪ, ಆದಿತ್ಯ ಟವರ್ಸ್ ಕಟ್ಟಡ ಮಾಲಿಕರಾದ ಶ್ರೀ ಅಶೋಕ್ ಪೈ, ಮಾತೃಭೂಮಿ ಸೌಹಾರ್ದ ಸಹಕಾರಿ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೀ ಕೃಷ್ಣ ಕೊಂಪದವು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಹಕಾರಿಯ ಸೇವೆಯನ್ನು ಶ್ಲಾಘಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಸರಸ್ವತಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ವಿನಯ ಕುಮಾರ್ ಕಂದಡ್ಕ, ನಿರ್ದೇಶಕರಾದ ಶ್ರೀ ಅನಂತಕೃಷ್ಣ ನಾಯಕ್, ಶ್ರೀ ಮುಕುಂದ ನಾಯಕ್ ಎಸ್. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀ ವಸಂತ ನಾಯಕ್ ಎ., ಗುರುಪುರ–ಕೈಕಂಬ ಶಾಖೆಯ ವ್ಯವಸ್ಥಾಪಕರಾದ ಶ್ರೀ ಸುಧೀರ್ ಬಿ., ಹಿರಿಯ ವ್ಯವಸ್ಥಾಪಕರಾದ ಶ್ರೀ ಧನಂಜಯ ಕುಮಾರ್ ಉಪಸ್ಥಿತರಿದ್ದರು. ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.), ಪುತ್ತೂರು ಇದರ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಬಿಪಿನ್ ಚಂದ್ರ ಇವರು ವಂದಿಸಿದರು.

# ಕುಂದಾಪುರ ಸೌಹಾರ್ದ ಸಹಕಾರಿಯಿಂದ ಸ್ವಯಂಚಾಲಿತ ಹ್ಯಾಂಡ್ ಸ್ಯಾನಿಟೈಸರ್ ಡಿಸ್ಪೆಂಸರ್ ಮಾರುಕಟ್ಟೆಗೆ ಬಿಡುಗಡೆ



**ಉಡುಪಿ :** ಕುಂದಾಪುರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಕುಂದಾಪುರ ಇವರಿಂದ ಸ್ವಯಂಚಾಲಿತ ಹ್ಯಾಂಡ್ ಸ್ಯಾನಿಟೈಸರ್ ಡಿಸ್ಪೆಂಸರ್ ಮಾರುಕಟ್ಟೆಗೆ ದಿನಾಂಕ 01–07–2020 ರಂದು ಸಹಕಾರಿಯ ಪ್ರಧಾನ ಕಛೇರಿಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಮಂಜುನಾಥ ಎಸ್.ಕೆ ಇವರು ಬಿಡುಗಡೆ ಮಾಡಿದರು. ಈ ಸಂಧರ್ಭದಲ್ಲಿ ಕೋವಿಡ್ ಕಠಿಣ ಪರಿಸ್ಥಿತಿಯಲ್ಲಿಯು ಜೀವದ ಹಂಗು ತೊರೆದು ಕೆಲಸ ಮಾಡುತ್ತಿರುವ ವೈದ್ಯರ ಕಾರ್ಯ ನಿಜಕ್ಕೂ ಶ್ಲಾಘನೀಯ ಪ್ರತಿಯೊಬ್ಬ ನಾಗರಿಕನು ಸ್ವಯಂ ಜಾಗರೂಕತೆ ಹೊಂದಿದಲ್ಲಿ ಕೊರೋನಾ ವೈರಸ್‌ನಿಂದ ಮುಕ್ತಿ ಹೊಂದಲು ಸಾಧ್ಯ. ವಿವಿಧತೆಯಲ್ಲಿ ಏಕತೆ ಎನ್ನುವ ಧ್ಯೇಯದಡಿಯಲ್ಲಿ ವಿಭಿನ್ನ ಸಾಮಾಜಮುಖಿ ಕಾರ್ಯಕ್ರಮಗಳನ್ನು ಸೌಹಾರ್ದ ಸಹಕಾರಿಗಳು ಮಾಡುತ್ತಿದ್ದು, ಅದರಲ್ಲೂ ಕುಂದಾಪುರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಕುಂದಾಪುರ ವತಿಯಿಂದ ಕೋವಿಡ್–19 ಇದರ ಸಾಮಾಜಿಕ ಕಳಕಳಿ ಪ್ರಯುಕ್ತ ಸ್ವಯಂಚಾಲಿತ ಹ್ಯಾಂಡ್ ಸ್ಯಾನಿಟೈಸರ್ ಡಿಸ್ಪೆಂಸರ್ ಮಾರುಕಟ್ಟೆಗೆ ಬಿಡುಗಡೆಗೊಳಿಸಿರುವುದು ಗಮನಾರ್ಹ ಹಾಗೂ ಶ್ಲಾಘನೀಯ. ಕಾರ್ಯಕ್ರಮದ ಅಧ್ಯಕ್ಷತೆಯನ್ನು, ಶ್ರೀರಾಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಇದರ ಅಧ್ಯಕ್ಷರಾದ ಎಸ್. ರಾಜು ಪೂಜಾರಿಯವರು ವಹಿಸಿದ್ದರು. ವೈದ್ಯಕೀಯ ದಿನಾಚರಣೆ ಪ್ರಯುಕ್ತ ಡಾ. ಉಮೇಶ್ ಪುತ್ರನ್ ಆಡಳಿತ ನಿರ್ದೇಶಕರು ಚಿನ್ಮಯಿ ಆಸ್ಪತ್ರೆ, ಕುಂದಾಪುರ ಇವರನ್ನು ಸನ್ಮಾನಿಸಲಾಯಿತು. ಕುಂದಾಪುರದ ಖ್ಯಾತ ನ್ಯಾಯವಾದಿ ರವಿಕಿರಣ್ ಮುರ್ಡೇಶ್ವರ್, ಕುಂದಾಪುರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಇದರ ಉಪಾಧ್ಯಕ್ಷರಾದ ಸುಧಾಕರ ಖಾರ್ವಿ, ಕುಂದಾಪುರದ ರೋಜರಿ ಕ್ರೆಡಿಟ್ ಕೋ–ಆಪರೇಟಿವ್ ಅಧ್ಯಕ್ಷ ಜಾನ್ಸನ್ ಡಿ'ಅಲ್ಮೇಡಾ ಉಪಸ್ಥಿತರಿದ್ದರು. ಕುಂದಾಪುರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶಿವಾನಂದ ಪೂಜಾರಿ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು.

## ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ವಿನೂತನ ವಾಹನ ವಿಮಾ ಯೋಜನೆ ಮತ್ತು ಕೋವಿಡ್-19ನಿಂದಾಗಿ ಸಂಕಷ್ಟದಲ್ಲಿರುವ ಆಟೋ ರಿಕ್ಷಾ ಚಾಲಕ/ಮಾಲೀಕರಿಗೆ ರೂ. 25,000/- ತುರ್ತು ಜಾಮೀನು ಸಾಲ.

**ದಕ್ಷಿಣ ಕನ್ನಡ :** ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಗಳವರು ಮುಂದಿನ 8ನೇ ಆಗಸ್ಟ್ – 2021ರಂದು 60ನೇ ವರ್ಷಕ್ಕೆ ಪಾದಾರ್ಪನೆ ಮಾಡುವ ಸುಸಂದರ್ಭದಲ್ಲಿ ಶ್ರೀಗಳವರ ಷಷ್ಠ್ಯಬ್ಧಿ ಆಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವ ಸದುದ್ದೇಶದಿಂದ ಸಾರ್ವಜನಿಕ ರಂಗದಲ್ಲಿ ತಮ್ಮ ವೈಯಕ್ತಿಕ ಜೀವನದ ನೋವುಗಳನ್ನು ಮರೆತು ಸಾರ್ವಕನಿಕರಿಗೆ ನಗುಮುಖದ ಸೇವೆಯನ್ನು ನೀಡುತ್ತಿರುವ ಆಟೋ ರಿಕ್ಷಾ ಚಾಲಕರಿಗಾಗಿ, ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ವಿವಿಧ ಸೌಲಭ್ಯದೊಂದಿಗೆ ಯಾವುದೇ ರೀತಿಯ ಅಪಘಾತ ಚಿಕಿತ್ಸೆಗೆ ಆಸ್ಪತ್ರೆಯ ಖರ್ಚಿನ ಬಾಬ್ತು ರೂ.50,000/- ಮತ್ತು ಯಾವುದೇ ರೀತಿಯ ಅಪಘಾತದಲ್ಲಿ ಮರಣ ಹೊಂದಿದಲ್ಲಿ ರೂ.15,00,000/- ವೈಯಕ್ತಿಕ ಅಪಘಾತ ವಿಮೆಯನ್ನು ಜಾರಿಗೆ ತರಲಾಗಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಆಟೋ ಇನ್ಸುರೆನ್ಸ್ ಪಾಲಿಸಿಗಳು ಆಟೋದಲ್ಲಿ ಅವಘಡ ಸಂಭವಿಸಿದರೆ ಮಾತ್ರ ಲಭ್ಯ. ಆದರೆ ಈ ವಿನೂತನ ಪಾಲಿಸಿಯು ಯಾವುದೇ ಅಪಘಾತಕ್ಕೂ ಸೌಲಭ್ಯ ಲಭ್ಯ ಎನ್ನುವುದು ವಿಶೇಷವಾಗಿರುತ್ತದೆ.

**ರೂ.25,000/- ಕೋವಿಡ್ -19 ತುರ್ತು ಸಾಲ :** ಕೋವಿಡ್-19 ಸಂಕಷ್ಟ ಮತ್ತು ಆರ್ಥಿಕ ತಲ್ಲಣದಿಂದ ಆಟೋ ರಿಕ್ಷಾ ಬಾಡಿಗೆಯನ್ನು ನಂಬಿ ಜೀವನ ಸಾಗಿಸುವ ಆಟೋರಿಕ್ಷಾ ಚಾಲಕ/ಮಾಲೀಕರ ಸಮಸ್ಯೆಯನ್ನು ಮನಗಂಡು ಸಹಕಾರಿಯ ಆಡಳಿತ ಮಂಡಳಿಯು ಆಟೋ ರಿಕ್ಷಾ ಚಾಲಕ ಮಾಲಿಕರಿಗೆ ರೂ.25,000/- ತುರ್ತು ಕೋವಿಡ್-19 ಜಾಮೀನು ಸಾಲವನ್ನು ಒಂದು ವರ್ಷದ ಅವಧಿಗೆ ಜಾರಿಗೆ ತಂದಿರುತ್ತದೆ. ಸಾಲ ಪಡೆದ ದಿನಾಂಕದ ಮೊದಲ ಮೂರು ತಿಂಗಳ ಇ.ಎಂ.ಐ ರಿಯಾಯಿತಿಯೊಂದಿಗೆ ಮುಂದಿನ ಸಮಾನ 12 ಮಾಸಿಕ ಕಂತುಗಳು ಸಾಲದ ಅವಧಿಯಾಗಿರುತ್ತದೆ. ಈಗಾಗಲೇ 1500 ಆಟೋರಿಕ್ಷಾ ಚಾಲಕ/ಮಾಲೀಕರ ಸದಸ್ಯರು ಇದರ ಪ್ರಯೋಜನವನ್ನು ಪಡೆದಿರುತ್ತಾರೆ. ಕೊರೊನಾ ಸಮಸ್ಯೆಯ ಈ ಸಂದರ್ಭದಲ್ಲಿ ಬಾಡಿಗೆ ಇಲ್ಲದೆ ಹತಾಶರಾಗಿರುವ ಆಟೋ ರಿಕ್ಷಾ ಚಾಲಕ/ಮಾಲೀಕರು ಸಹಕಾರಿಯ ಈ ವಿಶೇಷ ಪ್ಯಾಕೇಜನ್ನು ಅನುಭವಿಸಿ ಒಡಿಯೂರು ಪೂಜ್ಯ ಶ್ರೀಗಳವರ ಮತ್ತು ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಧನ್ಯತಾಭಾವನೆಯನ್ನು ಹೊಂದಿರುತ್ತಾರೆ.

## 22ನೇ ವಾರ್ಷಿಕ ಸಾಮಾನ್ಯ ಸಭೆ




**ಹೊಸದುರ್ಗ :** ದಿನಾಂಕ 30.07.2020 ರಂದು ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರ ಉಪಸ್ಥಿತಿಯಲ್ಲಿ ನಡೆಯಿತು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



**ಮೈಸೂರು :** ದಿನಾಂಕ 24.08.2020 ರಂದು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಮೈಸೂರು ಇದರ ಪದಾಧಿಕಾರಿಗಳ ಚುನಾವಣೆ ನಡೆದಿದ್ದು ಸಹಕಾರಿಯ ಅಧ್ಯಕ್ಷರಾಗಿ ಶ್ರೀ ನಾರಾಯಣ್ ರಾವ್ ಎಸ್.ಆರ್ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಜಗದೀಶ್ ಹೆಬ್ಬಾರ್ ಕೆ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.

**ಕಲಬುರಗಿ :** ಗುಲ್ಬರ್ಗಾ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಆಶಾ ಕಾರ್ಯಕರ್ತರಿಗೆ ಪರಿಹಾರ ನಿಧಿ ರೂ. 20.000/- ಕಲಬುರಗಿ ಜಿಲ್ಲೆಯ ಸಹಕಾರಿಗಳ ಸಂಘಗಳ ಉಪ ನಿಬಂಧಕರ ಕಛೇರಿಗೆ ಸಲ್ಲಿಸಲಾಯಿತು.

## ವಾರ್ಷಿಕ ಸಾಮಾನ್ಯ ಸಭೆ




**ಶಿವಮೊಗ್ಗ :** ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯ 2019–20ನೇ ಸಾಲಿನ ಸರ್ವ–ಸದಸ್ಯರ ಸಭೆಯು ದಿನಾಂಕ 27/08/2020 ರಂದು ಎ.ಪಿ.ಎಂ.ಸಿ. ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕಟ್ಟೇಗದ್ದೆ ಹಾಲಪ್ಪನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು.

ಶಿವಮೊಗ್ಗ ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಸಂಸ್ಥೆಗಳಲ್ಲಿ ಒಂದಾದ ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯು ದಿನಾಂಕ 23/11/2010 ರಂದು ಉದ್ಘಾಟನೆಗೊಂಡು ಸಹಕಾರಿಯ ಗೌರವಾಧ್ಯಕ್ಷರಾದ ರಾಜಗುರು ಡಾ|| ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕಟ್ಟೇಗದ್ದೆ ಹಾಲಪ್ಪನವರ ನೇತೃತ್ವದಲ್ಲಿ ಆಡಳಿತ ಮಂಡಳಿಯವರ ಶ್ರಮದಿಂದಾಗಿ ಇಂದು ಪ್ರತಿಷ್ಠಿತ ಸಹಕಾರ ಸಂಸ್ಥೆಯಾಗಿ ಹೊರಹೊಮ್ಮಿದೆ. ಬ್ಯಾಂಕಿಂಗ್ ವ್ಯವಹಾರದ ಜೊತೆಗೆ ಅಡಿಕೆ, ಇ–ಸ್ಟಾಂಪಿಂಗ್, ಬಿ.ಎಸ್.ಎನ್.ಎಲ್. ಕರೆನ್ಸಿ, ಅರೇಕಾ ಟೀ, ಸುಪ್ರೀಂ ಟಾರ್ಪಲ್ಸ್‌ಗಳ ಮಾರಾಟ ಸೌಲಭ್ಯವನ್ನು ನೀಡುತ್ತಿದ್ದು, ಜೊತೆಗೆ ಶಿಫಿನ್ ಸಂಸ್ಥೆಯ ಸಹಯೋಗದಲ್ಲಿ ಈಜಿಮನಿ ಎಂಬ ಆರ್ಥಿಕ ಯೋಜನೆಯನ್ನು ಕಾರ್ಯಗತಗೊಳಿಸಿದ್ದು ಸದಸ್ಯರು ಇದರ ಸದುಪಯೋಗ ಪಡೆಯುತ್ತಿದ್ದಾರೆ.

ಈ ಎಲ್ಲಾ ಸಮಾಜಮುಖಿ ಸೇವೆಗಳ ನಡುವೆಯೇ 38 ಕೋಟಿಗೂ ಹೆಚ್ಚು ವಹಿವಾಟು ನಡೆಸಿ ರೂ 11,26,464.03 ಗಳ ನಿವ್ವಳ ಲಾಭ ಗಳಿಸಿರುವುದು ಸಂತೋಷದಾಯಕ ವಿಚಾರ. ಇದೇ ಸಂದರ್ಭದಲ್ಲಿ ಸಹಕಾರಿಯ ಗೌರವಾಧ್ಯಕ್ಷರಾದ ರಾಜಗುರು ಡಾ.ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಜಿಯವರಿಗೆ ತುಮಕೂರು ವಿಶ್ವವಿದ್ಯಾನಿಲಯದಿಂದ ಡಿ.ಇಡ್ ಪದವಿ ದೊರೆತಿರುವ ಬಗ್ಗೆ ಅಭಿನಂದಿಸಲಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಕಟ್ಟೇಗದ್ದೆ ಹಾಲಪ್ಪನವರು ಸಮಾಜದ ಅಭಿವೃದ್ಧಿಗೆ ನಮ್ಮ ಸಂಸ್ಥೆಯು ಏನಾದರೂ ಕೊಡುಗೆ ನೀಡಬೇಕು ಎಂಬ ಸದುದ್ದೇಶದಿಂದ ಸಂಸ್ಥೆಯನ್ನು ಮುನ್ನಡೆಸುತ್ತಿದ್ದೇವೆ ಎಂದು ತಿಳಿಸಿ, ಮುಂದಿನ ದಿನಗಳಲ್ಲಿ ಸಹಕಾರಿಗೆ ಸ್ಥಿರಾಸ್ತಿ ಹೊಂದುವ ಯೋಜನೆ ಹೊಂದಿದ್ದೇವೆ ಎಂದು ತಿಳಿಸಿ ಸಾಲ ಪಡೆದ ಸದಸ್ಯರು ಸಕಾಲದಲ್ಲಿ ಸಾಲ ಮರುಪಾವತಿ ಮಾಡಬೇಕಾಗಿ ಮನವಿ ಮಾಡಿದರು. ಆಡಳಿತ ಮಂಡಳಿಯವರು ಹಾಗೂ ಷೇರುದಾರರ ಸಹಕಾರವನ್ನು ಸ್ಮರಿಸಿ ಕೃತಜ್ಞತೆಯನ್ನು ಅರ್ಪಿಸಿದರು ಹಾಗೂ ಸದಸ್ಯರು ಸಹಕಾರಿಯಲ್ಲಿ ದೊರೆಯುವ ಸೇವೆಗಳನ್ನು ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸದ್ದ ಡಾ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಜಿಯವರು ಆರ್ಶೀವಚನ ನೀಡಿ ಸಹಕಾರಿಯು ಲಾಭಗಳಿಸುವಲ್ಲಿ ಸಹಕರಿಸಿದ ಎಲ್ಲಾ ಸದಸ್ಯರಿಗೂ ಅಭಿನಂದನೆ ಸಲ್ಲಿಸಿದರು ಹಾಗೂ ನನಗೆ ಮಾತೃ ಸಂಸ್ಥೆ ನೀಡಿದ ಗೌರವ ಸಂತೋಷವನ್ನುಂಟುಮಾಡಿದೆ. ಇದನ್ನು ಪ್ರೀತಿಯಿಂದ ಸ್ವೀಕರಿಸಿದ್ದೇನೆ ಎಂದರು. ನನಗೆ ಕುವೆಂಪುರವರು ಪ್ರೇರಣೆ ಅವರ ಪ್ರೇರಣೆಯಿಂದಲೇ ನಾನು ಶೈಕ್ಷಣಿಕ ಕ್ಷೇತ್ರದಲ್ಲಿ ಇಷ್ಟು ಸಾಧನೆ ಮಾಡಲು ಸಾಧ್ಯ ಎಂದು ತಿಳಿಸಿದರು.

ಸಮಾರಂಭದಲ್ಲಿ ಶ್ರೀ ಬಿ ಗಣಪತಿಯವರು ಹಾಗೂ ಡಾ ಯುವರಾಜ ಹೆಗ್ಡೆಯವರು ಮಾತನಾಡಿ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿ ಉತ್ತಮ ಸಲಹೆಗಳನ್ನು ನೀಡಿದರು ಶ್ರೀಮತಿ ಜ್ಯೋತಿ ಮುರುಗೇಂದ್ರರವರ ಪ್ರಾರ್ಥನೆಯೊಂದಿಗೆ ಸಭೆಯನ್ನು ಪ್ರಾರಂಭಿಸಿ, ಶ್ರೀ ಡಿ.ಎಂ. ಮನುದೇವ್‌ರವರು ಸ್ವಾಗತಿಸಿ ಶ್ರೀ ಕೆ. ಜಯರಾಮಶೆಟ್ಟಿಯವರು ವಂದಿಸಿದರು. ಶ್ರೀ ಚನ್ನಬಸಪ್ಪನವರು ವರದಿ ಓದಿದರು, ಮುಖ್ಯಕಾರ್ಯನಿರ್ವಹಣಾಧಿಕಾರಿ ನೆಂಪೆ ಮಂಜುನಾಥ್ ಕಾರ್ಯಕ್ರಮವನ್ನು ನಿರೂಪಿಸಿದರು.

## ವನಮಹೋತ್ಸವ ಆಚರಣೆ




**ಅಂಕೋಲಾ :** ವಿವೇಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೇಲೇಕೇರಿ, ಲಾಯನ್ಸ್ ಕ್ಲಬ್ ಕರಾವಳಿ ಅಂಕೋಲಾ ಹಾಗೂ ಬೇಲೇಕೇರಿ ಊರ ನಾಗರಿಕರ ಸಂಯುಕ್ತಾಶ್ರಯದಲ್ಲಿ ಬೇಲೇಕೇರಿ ಬಂಗಲೆ ಹಾಗೂ ಶಾಂತಾದುರ್ಗಾ ದೇವಸ್ಥಾನದ ಎದುರುಗಡೆ ಗಿಡಗಳನ್ನು ನೆಟ್ಟು ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷ ಕೇಶವ ಬಿ. ನಾಯಕ ಇವರು ಮಾತನಾಡಿ ಪರಿಸರದ ಉಳಿವು ಮುಂದಿನ ಜನಾಂಗಕ್ಕೆ ಅತ್ಯಂತ ಅವಶ್ಯಕ. ನಮ್ಮ ನಡುವೆ ಇದ್ದು, ನಮ್ಮನ್ನಗಲಿದವರ ಹೆಸರಿನಲ್ಲಿ ಗಿಡಗಳನ್ನು ನೆಟ್ಟು ಅವರನ್ನು ಪ್ರೀತಿಸುವಂತೆ ಗಿಡಗಳನ್ನು ಪ್ರೀತಿಸಿ ಪಾಲನೆ ಪೋಷಣೆ ಮಾಡಿದಾಗ ಆ ಗಿಡ ಬೆಳೆದಾಗ ನಮಗೆ ಸಂತೋಷವಾಗುವುದರ ಜೊತೆಯಲ್ಲಿ ಅಗಲಿದವರ ಆತ್ಮಕ್ಕೂ ಶಾಂತಿ ಸಿಕ್ಕಂತಾಗುತ್ತದೆ ಎಂದು ತಿಳಿಸಿದರು.

ಲಾಯನ್ಸ್ ಕ್ಲಬ್ ಕರಾವಳಿಯ ಅಧ್ಯಕ್ಷ ಶಂಕರ ಹುಲಸ್ವಾರ ಮಾತನಾಡಿ ನಮ್ಮ ಲಾಯನ್ಸ ಕ್ಲಬ್ ಹಲವಾರು ವಿದಾಯಕ ಕಾರ್ಯಕ್ರಮಗಳನ್ನು ಈ ಹಿಂದಿನಿಂದಲೂ ನಡೆಸಿಕೊಂಡು ಬರುತ್ತಿದೆ. ಇಂದು ನಮ್ಮ ನಡುವೆ ಇದ್ದು ನಮ್ಮನ್ನಗಲಿದ ಯುವಕ ಸಂಘದ ಮಾಜಿ ಅಧ್ಯಕ್ಷ ಶ್ರೀನಿವಾಸ ಗೋವಿಂದ್ರಾಯದ ಗಿರೀಸ ಕುಚನಾಡ ಅವರ ತಾಯಿ ಲಕ್ಷ್ಮೀಬಾಯಿಯವರ ಆತ್ಮಕ್ಕೆ ಕೋರಿ ಈ ಗಿಡಗಳನ್ನು ನೆಡುತ್ತಿದ್ದೇವೆ ಎಂದು ತಿಳಿಸಿದರು.

# ಕೋರೊನಾ ವೈರಸ್ (ಕೋವೀಡ್-19) ವಿರುದ್ಧ ಹೋರಾಡಲು ರಾಜ್ಯದ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳು ಹಾಗೂ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಿರುವ ದೇಣಿಗೆ ಮತ್ತು ಆಶಾ ಕಾರ್ಯಕರ್ತೆಯರಿಗೆ ನೀಡಿದ ಗೌರವ ಧನ




**ಕೊಪ್ಪಳ :** ಶ್ರೀ ಗೌರಾ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ, ಕೊಪ್ಪಳ ಸಹಕಾರಿಯ ವತಿಯಿಂದ ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಹಾಗೂ ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಸಕ ಹಾಲಪ್ಪ ಆಚಾರ್ ಅವರ ಆಪ್ತ ಸಹಾಯಕ ಶ್ರೀ ಬಿ. ಶ್ರೀಕಾಂತ್, ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನೀಲನಗೌಡ ತಳವಗೇರಿ, ಮಾನ್ಯ ಉಪಾಧ್ಯಕ್ಷರಾದ ಸುರೇಶ್ ಬಡಿಗೇರ್, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು, ಪಿಗ್ಮಿ ಏಜೆಂಟರು, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ನಾಗವೇಣಿ ಕಮ್ಮಾರ ಇವರು ಉಪಸ್ಥಿತರಿದ್ದರು.



**ಕೊಪ್ಪಳ :** ನೇಸರ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ, ಕೊಪ್ಪಳ ಸಹಕಾರಿಯ ಮೂರನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಆರು ಜನ ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಹಾಗು ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಪೂಜಾರ, ಉಪಾಧ್ಯಕ್ಷರಾದ ಶ್ರೀ ಅಂದಪ್ಪ ಚಲವಾದಿ, ಆಡಳಿತ ಮಂಡಳಿಯ ನಿರ್ದೇಶಕರು, ಪಟ್ಟಣ ಪಂಚಾಯಿತಿಯ ಸದಸ್ಯರಾದ ಶ್ರೀ ರೇವಣಪ್ಪ ಹಿರೇಕುರಬರ, ಶ್ರೀ ವಸಂತಕುಮಾರ ಭಾವಿಮನಿ, ಶ್ರೀ ಕಳಕಪ್ಪ ತಳವಾರ, ಶ್ರೀ ಹನುಮಂತಪ್ಪ ಭಜಂತ್ರಿ, ಶ್ರೀ ಬಸವಲಿಂಗಪ್ಪ ಕೊತ್ತಲ, ಶ್ರೀ ರಿಯಾಜ ಖಾಜಿ. ಮುಖಂಡರಾದ ಶ್ರೀ ದೊಡ್ಡಯ್ಯ ಗುರುವಿನ, ಶ್ರೀ ಅಂದಪ್ಪ ಜಕ್ಕಲಿ, ಶ್ರೀ ಮಂಜಿನಾಥ ಗಟ್ಟೇಪ್ಪನವರ್, ಸಹಕಾರಿಯ ಸದಸ್ಯರು, ಸಿಬ್ಬಂದಿ ವರ್ಗದವರು, ಪಿಗ್ಮಿ ಏಜೆಂಟರು, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಹನುಮಪ್ಪ. ಬಿ ರವರು ಉಪಸ್ಥಿತರಿದ್ದರು.



**ಉತ್ತರ ಕನ್ನಡ:** ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ನಿ., ಕಮಟಾ, ಉತ್ತರ ಕನ್ನಡ ಸಹಕಾರಿ ವತಿಯಿಂದ ಕೊವೀಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.10000/– ಹಾಗೂ 5 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000 ಸಾವಿರ ದಂತೆ 15,000 ಗೌರವ ಧನ ನೀಡಲಾಯಿತು ಮತ್ತು 10 ಜನ ದಿನಗೂಲಿ ಕಾರ್ಮಿಕರಿಗೆ 25,000 ಹಾಗೂ 9 ಜನ ಹಮಾಲಿರಿಗೆ 13,500 ನೀಡಲಾಯಿತು.



**ರಾಯಚೂರು :** ದಿನಾಂಕ 12.06.2020 ರಂದು ಶ್ರೀ ಗುರು ರಾಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ರಾಯಚೂರು ಸದರಿ ಸಹಕಾರಿ ವತಿಯಿಂದ 10 ಜನ ಆಶಾ ಕಾರ್ಯಕರ್ತೆರಿಗೆ ತಲಾ 3000 ಸಾವಿರ ದಂತೆ ಒಟ್ಟು 30000 ಸಾವಿರ ಗೌರವ ಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ಮಸ್ಕಿ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಪ್ರತಾಪಗೌಡ ಪಾಟೀಲ್, ನಿರ್ದೇಶಕರುಗಳಾದ ಶ್ರೀ ಬಸ್ಸಪ್ಪ ಬ್ಯಾಳಿ, ಶ್ರೀ ರವಿಕುಮಾರ್ ಪಾಟೀಲ್, ಡಾ॥ ಬಿ.ಹೆಚ್. ದಿವಟರ, ಶ್ರೀ ಸುರೇಶ್ ಹರಸೂರು, ಶ್ರೀ ಅಬ್ದುಲ್ ರಜಾಕ್ ಇಲಕಲ್, ಶ್ರೀ ಅಮೇರೇಶ್ ಎಮ್, ಪಟೀಲ್, ಶ್ರೀ ಬಸನಗೌಡ ಪೋ, ಪಾಟೀಲ್ ಹಾಗೂ ಸಹಕಾರಿ ಇಲಾಖೆಯ ಅಧಿಕಾರಿಗಳಾದ ಶ್ರೀ ಶೇಖ್ ಹುಸೇನ್ ಸಿ.ಡಿ.ಓ ಮತ್ತು ಮೊಹಮ್ಮದ್ ಮುದಾಸ್ಸಿರ್, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸೋಮನಾಥ, ಶಾಖಾ ವ್ಯವಸ್ಥಾಪಕರಾದ ಶ್ರೀ ಬಸವಕುಮಾರ ಮೇಟಿ, ಸಿಬ್ಬಂದಿಗಳು, ಪಿಗ್ಮಿ ಏಜೆಂಟರು ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 30.08.2020 ರಂದು ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಕೊಪ್ಪಳ. ಸದರಿ ಸಹಕಾರಿಯ ನೂತನ ಕಛೇರಿಯ ಸ್ಥಳಾಂತರ ಮಳಿಗೆಯ ಉದ್ಘಾಟನಾ ಸಮಾರಂಭ ಹಾಗೂ ಕೊರೋನ (ಕೋವಿಡ್–19) ವಾರಿಯಸ್‌ಗಳ ಅವಿರಥ ಸೇವೆ ಪರಿಗಣಿಸಿ 5 ಜನ ಆಶಾ ಕಾರ್ಯಕರ್ತೆಯರಿಗೆ ಗೌರವ ಧನ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಅಮರೇಶ ಕರಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶ್ರೀಧರ್ ಕೆಸರಟ್ಟಿ, ಶ್ರೀ ಮಹಾಂತೇಶ ಗೌಡ ಪಾಟೀಲ್, ಆರ್.ಡಿ.ಸಿ.ಸಿ. ಬ್ಯಾಂಕಿನ ವ್ಯವಸ್ಥಾಪಕರಾದ ಜಯಶ್ರೀ, ಸುಕೋ ಬ್ಯಾಂಕಿನ ವ್ಯವಸ್ಥಾಪಕರಾದ ಜಯಶ್ರೀ, ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಳಿಯವರು, ಸಿಬ್ಬಂದಿಗಳು ಹಾಗೂ ಪಿಗ್ಮಿ ಸಂಗ್ರಾಹಕರು ಉಪಸ್ಥಿತರಿದ್ದರು.



**ಉತ್ತರ ಕನ್ನಡ :** ಸೈಂಟ್ ಮಿಲಾಗ್ರಿಸ್ ಕೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸದರಿ ಸಹಕಾರಿಯ ವತಿಯಿಂದ ಕೋವೀಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ. 5 ಲಕ್ಷಗಳನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ರೋಸಲಿನ್ ಫರ್ನಾಂಡಿಸ್ ಇವರು ಸನ್ಮಾನ್ಯ ಶ್ರೀ ಶಿವರಾಮ ಹೆಬ್ಬಾರ, ಕಾರ್ಮಿಕ ಮತ್ತು ಸಕ್ಕರೆ ಸಚಿವರು ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಿಗೆ ಚೆಕ್ ಮೂಲಕ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ರೂಪಾಲಿ ನಾಯ್ಕ, ಮಾನ್ಯ ಶಾಸಕರು, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರ ಹಾಗೂ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಾರ್ಜ ಫರ್ನಾಂಡಿಸ್, ಪ್ರಧಾನ ಕಛೇರಿಯ ವ್ಯವಸ್ಥಾಪಕರಾದ ಶ್ರೀಮತಿ ರಾಜೇಶ್ವರಿ ರಾಯ್ಕರ, ಸಾಲ ವಸೂಲಾತಿ ತಂತ್ರಜ್ಞಾನ ಅಧಿಕಾರಿಯಾದ ಶ್ರೀ ರೋಯನ್ ಫನಾಂಡಿಸ್ ಮತ್ತು ಅಂಕೋಲಾ ಹಾಗೂ ಕಾರವಾರದ ವಿವಿಧ ಮುಖಂಡರು ಉಪಸ್ಥಿತರಿದ್ದರು.



**ಉತ್ತರ ಕನ್ನಡ :** ಸೈಂಟ್ ಮಿಲಾಗ್ರಿಸ್ ಕೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸದರಿ ಸಹಕಾರಿಯ ವತಿಯಿಂದ ಕೋವಿಡ್–19 ಎಂಬ ಸಾಂಕ್ರಾಮಿಕ ರೋಗದಿಂದಾಗಿ ಜನ ಜೀವನ ನಡೆಸಲು ತುಂಬಾ ಕಷ್ಟಕರವಾದ ಪರಿಸ್ಥಿತಿ ಇದ್ದಂತಹ ಸಂದರ್ಭದಲ್ಲಿ ಸಹಕಾರಿಯಲ್ಲಿ ಕಾರ್ಯನಿರತರಾಗಿರುವ ಎಲ್ಲಾ ಪಿಗ್ಮಿ ಏಜೆಂಟ್‌ರುಗಳಿಗೆ ಹಾಗೂ ಶಾಖೆಯ ಸ್ವಚ್ಛತೆಯ ಕಾರ್ಯ ನಿರ್ವಹಿಸುತ್ತಿದ್ದವರಿಗೆ ಅಕ್ಕಿ, ಅಡುಗೆ ಎಣ್ಣೆ, ರವೆ, ಸಕ್ಕರೆ, ಗೋಧಿ ಹಿಟ್ಟು, ತೊಗರಿ ಬೇಳೆ, ಕಡಲೆ ಕಾಳು, ಶ್ಯಾವಿಗೆ, ಉಪ್ಪು, ಹಪ್ಪಳ, ಟೂತ್‌ಪೇಸ್ಟ್, ಸೋಪ್ ಮುಂತಾದ ಜೀವನಾವಶ್ಯಕ ಸಾಮಗ್ರಿಗಳ ಜೊತೆಗೆ ಅವರ ಆರೋಗ್ಯದ ಹಿತ ದೃಷ್ಟಿಯಿಂದಾಗಿ ಮಾಸ್ಕ್, ಸೈನಿಟೈಜರ್ ಹಾಗೂ ಮುಂಗಡವಾಗಿ ತಲಾ ರೂ 5,000/– ನಗದನ್ನು ಶಾಖಾ ವ್ಯವಸ್ಥಾಪಕರ ಹಾಗೂ ಸಿಬ್ಬಂದಿಗಳ ಸಮ್ಮುಖದಲ್ಲಿ ನೀಡಲಾಯಿತು ಮತ್ತು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಕಿರವತ್ತಿಯ ಹಾಂಗ್ಯೋ ಕಂಪನಿಯವರ ಸಹಭಾಗಿತ್ವದಲ್ಲಿ ಅಲ್ಲಿಯ ಸುಮಾರು 50 ಬಡ ಕುಟುಂಬದವರಿಗೆ ದಿನನಿತ್ಯದ ಬಳಕೆಯ ಜೀವನಾವಶ್ಯಕ ಸಾಮಾಗ್ರಿಗಳನ್ನು ನೀಡುವುದರ ಮೂಲಕ ಸಹಾಯ ಹಸ್ತ ನೀಡಲಾಯಿತು.



**ಶಿವಮೊಗ್ಗ :** ಪ್ರಾಥಮಿಕ ಶಿಕ್ಷಕರ ಪತ್ತಿನ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿ ವತಿಯಿಂದ ಕೊರೋನಾ ವಾರಿಯರ್ಸ್ ಆಗಿ ಈ ಮಹಾಮಾರಿ ಸಂಕ್ರಾಮಿಕ ರೋಗ ತಡೆಗೆ ಶ್ರಮಿಸುತ್ತಿದ್ದು, ಆಶಾ ಕಾರ್ಯಕರ್ತೆಯರ ಸೇವೆ ಅನನ್ಯವಾದುದು, ಇವರುಗಳ ಇಂತಹ ಸೇವಾ ಮನೋಭಾವವನ್ನು ಗುರುತಿಸಿ ಅಭಿನಂದಿಸುತ್ತಿರುವುದು ಸಹಕಾರಿಯ ಹೆಮ್ಮೆಯ ವಿಷಯವಾಗಿದೆವೆಂದು ಸಹಕಾರಿಯ ಅಧ್ಯಕ್ಷರಾದ ಮಹಾಬಲೇಶ್ವರ ಹೆಗ್ಡೆ ತಿಳಿಸಿದರು. ನಂತರ ಆಶಾ ಕಾರ್ಯಕರ್ತೆರನ್ನು ಸಹಕಾರಿಯ ವತಿಯಿಂದ ಗೌರವ ಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರಿಯ ಅಧ್ಯಕ್ಷರಾದ ಕೆ.ವಿ ಮಟ್ಟಪ್ಪ, ಕಾರ್ಯದರ್ಶಿಗಳಾದ ಶ್ರೀ ಹನುಮಂತಪ್ಪನವರು ಹಾಗೂ ನಿರ್ದೇಶಕರಾದ ಪ್ರಕಾಶ್ ನಾಯಕ್, ಸದಸ್ಯರು, ಸಿಬ್ಬಂದಿ ವರ್ಗದವರು ಭಾಗವಹಿಸಿದರು.



**ಶಿವಮೊಗ್ಗ** : ಇಡೀ ಜಗತ್ತು ಕೋವಿಡ್–19 ಮಹಾಮಾರಿಯಿಂದ ತತ್ತರಿಸಿರುವ ಈ ಸಂದರ್ಭದಲ್ಲಿ ರೋಗದ ವಿರುದ್ಧ ಹೋರಾಡಲು ತಮ್ಮ ಜೀವವನ್ನು ಪಣಕಿಟ್ಟು ವೀರಯೋಧರಂತೆ ಕಾರ್ಯೋನ್ಮುಖರಾಗಿ ಸೇವೆಯನ್ನು ಸಲ್ಲಿಸುತ್ತಿರುವ ಆಶಾಕಾರ್ಯಕರ್ತರಿಗೆ ಪ್ರೋತ್ಸಾಹಧನವನ್ನು ಕರ್ನಾಟಕ ಸರ್ಕಾರ ಘೋಷಿಸಿದ ಹಿನ್ನೆಲೆಯಲ್ಲಿ ಶಿವಮೊಗ್ಗ ನಗರದ ಸ್ತ್ರೀಬಂಧು ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿಯಮಿತದ ವತಿಯಿಂದ ಒಟ್ಟು 21 ಆಶಾ ಕಾರ್ಯಕರ್ತರಿಗೆ ತಲಾ 3000 ಸಾವಿರ ದಂತೆ 63000 ಸಾವಿರ ಪ್ರೋತ್ಸಾಹಧನವನ್ನು 2 ಹಂತಗಳಲ್ಲಿ ನೀಡಲಾಯಿತು. ಈ ಕಾರ್ಯಕ್ರಮವನ್ನು ಶಿವಮೊಗ್ಗದ ಎಸ್.ಎಂ.ಎಸ್.ಎಸ್. (ಶಿವಮೊಗ್ಗ ಮಲ್ಟಿಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ) ಸಹಯೋಗದಲ್ಲಿ ಆಯೋಜಿಸಲಾಯಿತು.

ದಿನಾಂಕ 11.07.2020 ರ ಶನಿವಾರದಂದು "ಚೈತನ್ಯ" ಎಸ್ ಎಂ ಎಸ್ ಎಸ್ ಸಂಸ್ಥೆಯ ಸಭಾಂಗಣದಲ್ಲಿ 14 ಆಶಾ ಕಾರ್ಯಕರ್ತರಿಗೆ ಸ್ತ್ರೀಬಂಧು ವಿವಿದೋದ್ಧೇಶ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾ–ರಿಗಳು ಹಾಗೂ ಎಸ್.ಎಂ.ಎಸ್.ಎಸ್. ಶಿವಮೊಗ್ಗ ಸಂಸ್ಥೆಯ ನಿರ್ದೇಶಕರಾದ ವಂದನೀಯ ಫಾದರ್ ಕ್ಲಿಫರ್ಡ್ ರೋಶನ್ ಪಿಂಟೊ ರವರು ತಲಾ 3,000 ರೂ.ಗಳ ಮೊತ್ತದ ಪ್ರೋತ್ಸಾಹ ಧನದ ಚೆಕ್‌ನ್ನು ವಿತರಿಸಿ ಮಾತನ್ನಾಡುತ್ತಾ, ಕೋವಿಡ್–19ಗೆ ಸಂಬಂಧಿಸಿದಂತೆ ಕಳೆದ 3–4 ತಿಂಗಳಿಂದ ಆಶಾ ಕಾರ್ಯಕರ್ತರು ತಮ್ಮ ಕಾರ್ಯಕ್ಷೇತ್ರದ ಜನರಿಗೆ ಅರಿವು ಕಾರ್ಯಕ್ರಮ, ಸೂಕ್ತ ಮಾರ್ಗದರ್ಶನ, ಕುಟುಂಬಗಳ ಸಮೀಕ್ಷೆ ಹಾಗೂ ಅಗತ್ಯ ಮಾಹಿತಿಗಳನ್ನು ಸಕಾಲಕ್ಕೆ ಸಂಗ್ರಹಿಸಿ ಇಲಾಖೆಗೆ ಮಾಹಿತಿ ನೀಡಿ ಜನರ ಸ್ವಾಸ್ಥ್ಯಕ್ಕಾಗಿ ಶ್ರಮಿಸುವ ಇವರ ಸೇವೆ ಅಮೋಘವಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಕಾಣದ ಕೈಗಳು ನಮ್ಮೆಲ್ಲರನ್ನು ಕಾಪಾಡುತ್ತಿವೆ. ದೇವರು ತಮ್ಮ ಸೇವೆಯನ್ನು ಆಶೀರ್ವದಿಸಲಿ ಇನ್ನೂ ಉತ್ತಮ ಕೆಲಸ ಕಾರ್ಯಗಳು ತಮ್ಮಿಂದ ಸಮುದಾಯದ ಜನರಿಗೆ ತಲುಪುವಂತಾಗಲಿ ಎಂದು ಎಂದು ಶುಭ ಹಾರೈಸಿದರು.

ಶ್ರೀಯುತ ಶಶಿಕುಮಾರ್, ಜಿಲ್ಲಾ ಸಂಯೋಜಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇವರು, ಗಾಂಧೀಜಿಯವರ ಕನಸು ಸೌಹಾರ್ದ ಸಹಕಾರಿ ಎಂಬ ನುಡಿಗಳೊಂದಿಗೆ ಪ್ರಾರಂಭಿಸಿ ಸಂಯುಕ್ತ ಸಹಕಾರಿ ನಡೆದು ಬಂದ ಹಾದಿ, ಬೆಳೆದು ನಿಂತ ರೀತಿಯನ್ನು ಪ್ರಶಂಸಿಸುತ್ತಾ, ಇಂದು ಹಲವಾರು ಜನರಿಗೆ ಆಧಾರವಾಗಿದೆ. ಭಗವಂತನ ಕೆಲಸವನ್ನು ಮಾಡುತ್ತಿರುವ ಆಶಾಕಾರ್ಯಕರ್ತರ ಶ್ರಮವನ್ನು ಶ್ಲಾಘಿಸಿ ಇವರಿಗೆ ಪ್ರೋತ್ಸಾಹಧನ ನೀಡುವುದು ನಮ್ಮ ಸೌಭಾಗ್ಯ ಎಂದು ನುಡಿದರು.

ಸ್ತ್ರೀಬಂಧು ವಿವಿದ್ದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಪ್ರೆಸಿಲ್ಲಾ ಮಾರ್ಟಿಸ್ ಹಾಗೂ ವ್ಯವಸ್ಥಾಪಕರಾದ ಶ್ರೀಯುತ ದೇವದಾನ್ ಹಾಗೂ ಸ್ತ್ರೀಬಂಧು ವಿವಿದೋದ್ಧೇಶ ಸೌಹಾರ್ದ ಸಹಕಾರಿ & ಎಸ್ ಎಂ ಎಸ್ ಎಸ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಇನ್ನೊಂದು ಕಾರ್ಯಕ್ರಮವನ್ನು ತೀರ್ಥಹಳ್ಳಿಯಲ್ಲಿ 30.07.2020 ರಂದು 4 ಆಶಾ ಕಾರ್ಯಕರ್ತರಿಗೆ ಚೆಕ್ ವಿತರಿಸಲಾಯಿತು.



**ಉತ್ತರ ಕನ್ನಡ:** ಪ್ರತಿಷ್ಠಿತ ಸಹಕಾರಿಗಳಲ್ಲಿ ಒಂದಾದ ಸೈಂಟ್ ಮಿಲಾಗ್ರಿಸ್ ಸಹಕಾರಿಯಿಂದ ಕೋವಿಡ್–19 ತಡೆಗಟ್ಟುವಲ್ಲಿ ಉತ್ತಮವಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿದ ನಗರದ ಆಶಾ ಕಾರ್ಯಕರ್ತರನ್ನು ಗುರುತಿಸಿ ಅವರಿಗೆ ತಲಾ 3 ಸಾವಿರ ರೂಪಾಯಿಯಂತೆ ಒಟ್ಟು 30.000 ಸಾವಿರ ರೂಗಳನ್ನು 10 ಆಶಾ ಕಾರ್ಯಕರ್ತರಿಗೆ ಕಾರವಾರದ ಸಹಕಾರಿ ಇಲಾಖೆಯ ಸಹಾಯಕ ನಿಬಂಧಕರ ಕಾರ್ಯಾಲಯದಲ್ಲಿ ಶ್ರೀಮತಿ ಸುಜಾತಾ ಬಂಟ್, ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಉಪಸ್ಥಿತಿಯಲ್ಲಿ ಸಹಕಾರಿಯ ಅಧ್ಯಕ್ಷೆಯಾದ ಶ್ರೀಮತಿ ರೋಸಲಿನ್ ಫರ್ನಾಂಡಿಸ್‌ರವರು ಚೆಕ್ ನೀಡುವ ಮೂಲಕ ಪ್ರೋತ್ಸಾಹ ಧನ ವಿತರಿಸಲಾಯಿತು.

ಪ್ರೋತ್ಸಾಹ ಧನ ವಿತರಿಸಿದ ಬಳಿಕ ಮಾತನಾಡಿದ ಶ್ರೀಮತಿ ರೋಸಲಿನ್ ಫರ್ನಾಂಡಿಸ್‌ರವರು ರಾಜ್ಯದಲ್ಲಿ ಕೋವಿಡ್–19 ತಡೆಗಟ್ಟುವ ನಿಟ್ಟಿನಲ್ಲಿ ಸರಕಾರ ಅನೇಕ ಪ್ರಯತ್ನ ನಡೆಸಿದ್ದು, ಅದರಲ್ಲಿ ಜೀವದ ಹಂಗನ್ನು ಬಿಟ್ಟು ಹಗಲಿರುಳು ಶ್ರಮಿಸಿದ ಆಶಾಕಾರ್ಯಕರ್ತರ ಕಾರ್ಯ ಅಭಿನಂದನೀಯ ಎಂದರು.

ಈ ಸಂದರ್ಭದಲ್ಲಿ ಸಹಕಾರಿ ಇಲಾಖೆಯ ಮಾರಾಟಾಧಿಕಾರಿ ಶ್ರೀಮತಿ ಮಮತಾ ನಾಯಕ ಪ್ರಧಾನ ಕಚೇರಿಯ ವ್ಯವಸ್ಥಾಪಕಿ ಶ್ರೀಮತಿ. ರಾಜೇಶ್ವರಿ ರಾಯ್ಕರ್ ಹಾಗೂ ಅಭಿವೃದ್ಧಿ ವ್ಯವಸ್ಥಾಪಕರಾದ ಶ್ರೀ ವಿನೋದ ಮಡಿವಾಳ ಉಪಸ್ಥಿತರಿದರು.

**ಬೆಳಗಾವಿ :** ಶ್ರೀ ರೇವಣಸಿದ್ಧೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ ಸಹಕಾರಿ ವತಿಯಿಂದ ಕೊರೊನಾ ವಾರಿಯರ್ಸ್‌ಗಳಾದ ಇಬ್ಬರು ಆಶಾ ಕಾರ್ಯಕರ್ತೆಯರಿಗೆ ತಲಾ 3000 ಸಾವಿರ ಒಟ್ಟು 6000 ಸಾವಿರ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಯಲಬುರ್ಗಾ :** ವಿಕಾಸಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ ಸಹಕಾರಿ ವತಿಯಿಂದ 4 ಜನ ಆಶಾ ಕಾರ್ಯಕರ್ತೆಯರಿಗೆ ಗೌರವ ಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಮಲ್ಲಿಕಾರ್ಜುನ ನರೇಗಲ, ನಿರ್ದೇಶಕರಾದ ಎಸ್.ಎಂ. ಹಿರೇಮಠ ಮಂಜುನಾಥ ಹಡಗಲಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಪಾಂಡುರಂಗ ದೇಸಾಯಿ ಅವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ದಿನಾಂಕ 19.08.2020 ರಂದು ದಿವ್ಯ ಚೇತನ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿ ವತಿಯಿಂದ ಕೋವಿಡ್–19 ಸಮಯದಲ್ಲಿ ಕಾರ್ಯನಿರ್ವಹಿಸಿದ ಇಬ್ಬರು ಆಶಾ ಕಾರ್ಯಕರ್ತೆಯರಿಗೆ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಜೀನಾ ಡಿಸೋಜಾ, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ಭದ್ರಾ ವೀರಶೈವ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಭದ್ರಾವತಿ ಸಹಕಾರಿ ವತಿಯಿಂದ ಆಶಾ ಕಾರ್ಯಕರ್ತೆಯಾದ ಶ್ರೀಮತಿ ಶಾಂತಿ ಇವರಿಗೆ 3000/– ರೂಗಳ ಪ್ರೋತ್ಸಾಹಧನ ನೀಡುವುದರ ಮೂಲಕ ಗೌರವ ಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.




**ಶಿವಮೊಗ್ಗ :** ಸಹ್ಯಾದ್ರಿ ರೈತಮಿತ್ರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಆಯನೂರು ಸಹಕಾರಿ ವತಿಯಿಂದ ಅಶಾ ಕಾರ್ಯಕರ್ತೆಯಾದ ಶ್ರೀಮತಿ ರೂಪ ಎಸ್, ರವರಿಗೆ 3000/– ರೂಗಳ ಪ್ರೋತ್ಸಾಹಧನ ನೀಡುವುದರ ಮೂಲಕ ಗೌರವ ಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಶಿವಮೊಗ್ಗ :** ಶ್ರೀ ಮಹಾದೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇಂದಿರಾನಗರ, ಶಿವಮೊಗ್ಗ ಸಹಕಾರಿಯ ಆಡಳಿತ ಮಂಡಳಿಯ ವತಿಯಿಂದ ಆಶಾಕಾರ್ಯಕರ್ತೆಯಾದ ಶ್ರೀಮತಿ ಚಂದ್ರಮ್ಮ ಇವರಿಗೆ 3000/– ರೂಗಳ ಪ್ರೋತ್ಸಾಹಧನ ನೀಡುವುದರ ಮೂಲಕ ಸನ್ಮಾನಿಸಲಾಯಿತು.



**ಶಿವಮೊಗ್ಗ :** ಶ್ರೀ ಸುದರ್ಶನ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಮತ್ತೂರು, ಶಿವಮೊಗ್ಗ, ಸಹಕಾರಿ ವತಿಯಿಂದ ಆಶಾ ಕಾರ್ಯಕರ್ತೆಯಾದ ಭಾರತೀಯ ಅವರಿಗೆ 3000/– ರೂಗಳ ಗೌರವಧನ ನೀಡಿ ಸನ್ಮಾನಿಸಲಾಯಿತು.



**ಚಿತ್ರದುರ್ಗ:** ಫ್ರಂಟ್ ಲೈನ್ ಕೋರೊನ ವಾರಿಯರ್ಸ್‌ಗಳಾದ ಆಶಾ ಕಾರ್ಯಕರ್ತರಿಗೆ ಚಿತ್ರದುರ್ಗದ ಪ್ರತಿಷ್ಠಿತ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಸಹಕಾರಿ ವತಿಯಿಂದ ದಿನಾಂಕ 28.08.2020ರಂದು ಪ್ರೋತ್ಸಾಹ ಧನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್. ಲಕ್ಷ್ಮೀಕಾಂತ ರೆಡ್ಡಿಯವರು, ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಕೆ. ಆರ್. ಮಲ್ಲಿಕಾರ್ಜುನ್ ರವರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 27.06.2020 ರಂದು ಶ್ರೀ ಸರ್ವಜನ ಪತ್ತಿನ ಸೌಹಾರ್ದ ಸಹಕಾರಿ ನಿ., ಕನಕಗಿರಿ, ಕೊಪ್ಪಳ ಸಹಕಾರಿಯ ವತಿಯಿಂದ ಕೋವಿಡ್–19 ಮಹಾಮಾರಿಯ ವಿರುದ್ಧ ಕಾರ್ಯ ನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಸಹಕಾರಿಯ ವತಿಯಿಂದ 3 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ದಂತೆ 9,000 ರೂ/– ಪ್ರೋತ್ಸಾಹ ಧನವನ್ನು ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕನಕಗಿರಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಬಸವರಾಜ್ ದಢೇಸುಗೂರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ. ಬಿ. ಪತ್ತಾರ, ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವನಗೌಡ ಪೊಲೀಸ್ ಪಾಟೀಲ್, ಶ್ರೀ ಸರ್ವಜನ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಪ್ಪ ಹುಗ್ಗಿ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಿವಾನಂದ ವಂಕಲಕುಂಟಿ, ಆಡಳಿತ ಮಂಡಳಿಯ ನಿರ್ದೇಶಕರು, ಸಹಕಾರಿಯ ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವಿನಾಯಕ ಭಾವಿಕಟ್ಟಿ ಇವರು ಉಪಸ್ಥಿತರಿದ್ದರು.

**ಕೊಪ್ಪಳ :** ದಿನಾಂಕ 24–04–2020 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸಿ.ಆರ್. ಸೌಹಾರ್ದ ಪತ್ತಿನ ಸಹಕಾರಿಯ ವತಿಯಿಂದ ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 11,000/– ರೂಗಳನ್ನು ನೆಫ್ಟ್ ಮೂಲಕ ಧೇಣಿಗೆ ನೀಡಲಾಯಿತು.



**ಶಿವಮೊಗ್ಗ :** ರಿಪ್ಪನಪೇಟೆ ಶ್ರೀ ನಾಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಹಕಾರಿ ವತಿಯಿಂದ ಆಶಾ ಕಾರ್ಯಕರ್ತೆಯರಾದ ಶ್ರೀಮತಿ ಸುರೇಖಾ ಗಣೇಶ್ ಹಾಗೂ ಶ್ರೀಮತಿ ಶ್ವೇತಾ ಸುರೇಶ್ ರವರಿಗೆ ತಲಾ 3000/– ರೂಪಾಯಿಗಳ ಗೌರವಧನ ನೀಡುವುದರ ಮೂಲಕ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 29–08–2020 ಶನಿವಾರದಂದು ಕನಕಗಿರಿ ತಾಲ್ಲೂಕಿನ ಮುಸಲಾಪುರ ಗ್ರಾಮದ ಎಲ್ಲಾ ಸೌಹಾರ್ದ ಸಹಕಾರಿಗಳು ಸೇರಿ 5 ಜನಕ್ಕೆ ಪ್ರೋತ್ಸಾಹ ಧನ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ, ಮುಸಲಾಪುರ ಆಸ್ಪತ್ರೆಯ ಸಿಬ್ಬಂದಿ ವರ್ಗದವರಿಗೂ ಮತ್ತು ಅದೇ ಕೇಂದ್ರಕ್ಕೆ ಬರುವ 28 ಜನ ಆಶಾ ಕಾರ್ಯಕರ್ತೆಯರಿಗೂ ಸನ್ಮಾನ ಹಾಗೂ ಪ್ರೋತ್ಸಾಹ ಧನವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್, ಗಂಗಾವತಿ, ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 9–07–2020 ರಂದು ಸಾಮ್ರಾಟ್ ಹೋಟಲ್‌ನಲ್ಲಿ ಶ್ರೀ ಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿ; ಗಿಣಿಗೇರಾ, ಕೊಪ್ಪಳ ಸಹಕಾರಿಯ ವತಿಯಿಂದ ವೈದ್ಯರಿಗೆ ಸನ್ಮಾನ ಸಮಾರಂಭ ಮತ್ತು ಅಭಿನಂದನಾ ಪತ್ರ ವಿತರಣೆ ಹಾಗು ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಸಮಾರಂಭ ಮತ್ತು ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

**ನಿಮ್ಮ ಪ್ರಶ್ನೆ**



**ನಮ್ಮ ಉತ್ತರ**

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ.

– ಸಂಪಾದಕರು

**ಪ್ರಶ್ನೆ 1: ಸಹಕಾರಿಯ ನಿರ್ದೇಶಕರು ನ್ಯಾಯವಾದಿಗಳಾಗಿದ್ದು, ತಾವು ನಿರ್ದೇಶಕರಾದ ಸಹಕಾರಿಯ ಕಾನೂನು ಸಲಹೆಗಾರರಾಗಬಹುದೇ.**

**ಉತ್ತರ :** ಸಹಕಾರಿಯ ನಿರ್ದೇಶಕರು ನ್ಯಾಯವಾದಿಗಳಾಗಿದ್ದಲ್ಲಿ ತಾವು ನಿರ್ದೇಶಕರಾದ ಸಹಕಾರಿಯ ಕಾನೂನು ಸಲಹೆಗಾರರಾಗಿ ಸೇವೆ ಸಲ್ಲಿಸುವುದು ಹಿತಾಸಕ್ತಿಯ ಸಂಘರ್ಷವಾಗುವ ಕಾರಣ ಕಾನೂನು ಸಲಹೆಗಾರರಾಗುವಂತಿಲ್ಲ.

**ಪ್ರಶ್ನೆ 2 : ನಿರ್ದೇಶಕರು ನಮ್ಮ ಸಹಕಾರಿಯಲ್ಲಿ ಠೇವಣಿ ಹೊಂದಿದ್ದು ಅಂತಹ ಠೇವಣಿಗಳ ಮೇಲೆ ಶೇ.80% ರಷ್ಟು ಸಾಲ ಪಡೆದಿರುತ್ತಾರೆ, ಈಗ ಅವರ ಸಂಬಂಧಿಕರು ಕೂಡ ಠೇವಣಿ ಹೊಂದಿದ್ದು, ಅವರು ಕೂಡ ಆ ಠೇವಣಿಗಳ ಮೇಲೆ ಸಾಲ ಪಡೆದಿರುತ್ತಾರೆ. ಇಂತಹ ಸಂದರ್ಭದಲ್ಲಿ, ನಿರ್ದೇಶಕರು ಮತ್ತು ಅವರ ಸಂಬಂಧಿಕರಿಗೆ ನೀಡಬಹುದಾದ ಸಾಲದ ಮೊತ್ತವು ಸಹಕಾರಿ ದುಡಿಯುವ ಬಂಡವಾಳದ ಶೇ.10% ರಷ್ಟು ಮೀರಿರುತ್ತದೆ. ಅಂತಹ ಸಮಯದಲ್ಲಿ ಉಳಿದ ನಿರ್ದೇಶಕರಿಗೆ ಅವರು ಹೊಂದಿರುವ ಠೇವಣಿಗಳ ಮೇಲೆ ಸಾಲದ ಅವಶ್ಯಕತೆವಿರುತ್ತದೆ. ಇಂತಹ ಸಮಯದಲ್ಲಿ ಯಾವ ರೀತಿ ಮಾಡಬಹುದು.**

**ಉತ್ತರ :** ಸಹಕಾರಿಯ ನಿರ್ದೇಶಕರು ಮತ್ತು ಅವರ ಸಂಬಂಧಿಗಳು ಪಡೆಯುವ ಸಾಲವು ದುಡಿಯುವ ಬಂಡವಾಳದ ಶೇಕಡಾ 10ನ್ನು ಮೀರುತ್ತಿದ್ದಲ್ಲಿ, ಠೇವಣಿ ಆಧಾರಿತ ಸಾಲವಾಗಿದ್ದರೂ ಸಹ ಸಹಕಾರಿಯ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಸಾಲವನ್ನು ನೀಡುವಂತಿಲ್ಲ. ಸಾಲವನ್ನು ನೀಡಲೇಬೇಕಾದ ಸಂದರ್ಭವು ಉದ್ಭವಿಸಿದಲ್ಲಿ ಸಹಕಾರಿಯ ದುಡಿಯುವ ಬಂಡವಾಳವನ್ನು ಹೆಚ್ಚಿಸಿಕೊಂಡು ಸಾಲವನ್ನು ನೀಡಬಹುದಾಗಿರುತ್ತದೆ.

**ಪ್ರಶ್ನೆ 3 : ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿಗಧಿಯಾಗಿರುವ ಲೆಕ್ಕಪರಿಶೋಧಕರ ಸಂಭಾವನೆಯ ಮೊತ್ತದ ಪ್ರಕಾರ ಪಾವತಿಸಬೇಕೋ ಅಥವಾ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯವರ ಸುತ್ತೋಲೆ ಪ್ರಕಾರ ನಿಗದಿಯಾಗಿರುವ ಮೊತ್ತದ ಪ್ರಕಾರ ಪಾವತಿಸಬೇಕು? ಇದರ ಆದೇಶ ಪ್ರತಿ ಇದ್ದರೆ ನೀಡಬೇಕಾಗಿ ವಿನಂತಿ.**

**ಉತ್ತರ :** ಸಹಕಾರಿಯು ಲೆಕ್ಕಪರಿಶೋಧಕರ ಸಂಭಾವನೆಯನ್ನು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿಗದಿಪಡಿಸಿರುವ ಮೊತ್ತದ ಪ್ರಕಾರ ಪಾವತಿಸಬೇಕು. ಏಕೆಂದರೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ನಿಯಮ 9ಡಿ ರನ್ವಯ ಲೆಕ್ಕಪರಿಶೋಧಕರ ಸಂಭಾವನೆಯನ್ನು ಸಾಮಾನ್ಯ ನಿಕಾಯವು ಸಹಕಾರ ಸಂಘಗಳ ಲೆಕ್ಕ ಪರಿಶೋಧಕರಿಂದ ನೀಡಲಾದ ಮಾರ್ಗಸೂಚಿಗೆ ಒಳಪಟ್ಟು ದುಡಿಯುವ ಬಂಡವಾಳ ಮತ್ತು ವಹಿವಾಟಿನ ಆಧಾರದ ಮೇಲೆ ನಿಗದಿಪಡಿಸತಕ್ಕದ್ದು ಎಂದು ಹೇಳಲಾಗಿರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಲೆಕ್ಕಪರಿಶೋಧನಾ ನಿರ್ದೇಶಕರು ಮಾರ್ಗಸೂಚಿಯನ್ನು ನೀಡಬಹುದಾಗಿದ್ದು, ಸದರಿ ಮಾರ್ಗಸೂಚಿಯು ಕಡ್ಡಾಯ ಸ್ವರೂಪದ್ದಾಗಿರುವುದಿಲ್ಲ. ಆದ್ದರಿಂದ ಲೆಕ್ಕಪರಿಶೋಧಕರ ಸಂಭಾವನೆಗೆ ಸಂಬಂಧಪಟ್ಟಂತೆ ಸಹಕಾರಿಯ ಸಾಮಾನ್ಯ ಸಭೆಯ ನಿರ್ಣಯವು ಅಂತಿಮವಾಗಿರುತ್ತದೆ.

**ಪ್ರಶ್ನೆ 4 : ಸದಸ್ಯ ಸಹಕಾರಿ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ಪ್ಯಾನಲ್ ಇದೆಯೋ ಅಥವಾ ಇಲ್ಲ?**

**ಉತ್ತರ :** ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಗಾಗಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯು ಲೆಕ್ಕಪರಿಶೋಧಕರ ಪಟ್ಟಿಯನ್ನು ಸಿದ್ಧಪಡಿಸಿರುತ್ತದೆ. ಸದರಿ ಪಟ್ಟಿಯು www.sahakardarpan.kar.nic.a ಇಲ್ಲಿ ಲಭ್ಯವಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 33(1) ರನ್ವಯ ಲೆಕ್ಕಪರಿಶೋಧನಾ ನಿರ್ದೇಶಕನು ರಾಜ್ಯದಲ್ಲಿರುವ ಸಹಕಾರಿಗಳ ಲೆಕ್ಕಪತ್ರಗಳನ್ನು ಪರಿಶೋಧಿಸಲು ನಿಗದಿಪಡಿಸುವ ವಿದ್ಯಾರ್ಹತೆ ಮತ್ತು ಅನುಭವಗಳನ್ನು ಹೊಂದಿರುವ ಹಾಗೂ ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸಲು ಹಾಗೂ ನಿರ್ವಹಿಸಲು ಸಕ್ಷಮನಾದ ಪ್ರಾಧಿಕಾರವಾಗಿರುತ್ತದೆ. ಅದೇ ರೀತಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ನಿಯಮ ಸಂಖ್ಯೆ 8ಎ(4) ರನ್ವಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಸಹಕಾರಿಯ ದುಡಿಯುವ ಬಂಡವಾಳ ಹಾಗೂ ವ್ಯಾಪಾರ ವಹಿವಾಟಿನ ಆಧಾರದ ಮೇಲೆ ಸಹಕಾರಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಿ ಆಯಾ ಪ್ರವರ್ಗಗಳ ಸಹಕಾರಿಗಳ ಲೆಕ್ಕಪರಿಶೋಧನೆಗಾಗಿ ಅನುಭವದ ಆಧಾರದ ಮೇಲೆ ಲೆಕ್ಕಪರಿಶೋಧಕರನ್ನು ಸಹ ಮೂರು ಗುಂಪುಗಳಾಗಿ ವರ್ಗೀಕರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 33(2) ರನ್ವಯ ಸದರಿ ಪಟ್ಟಿಯಲ್ಲಿರುವ ಲೆಕ್ಕಪರಿಶೋಧಕರನ್ನು ಸಹಕಾರಿಯ ದುಡಿಯುವ ಬಂಡವಾಳದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ.

**ಪ್ರಶ್ನೆ 5 : ಸಹಕಾರಿ ಅಧ್ಯಕ್ಷರ ಅಥವಾ ನಿರ್ದೇಶಕರ ಮಗ/ಮಗಳು/ಅಳಿಯ/ಹೆಂಡತಿ/ಸೊಸೆ ಆಗಿದ್ದು ಇಂತವರು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾಗಿ ಕಾರ್ಯನಿರ್ವಹಿಸಬಹುದೇ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 23(3)(ಕ್ಯೂ) ರನ್ವಯ ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಂಡು ಸಹಕಾರಿಯ ಅಧ್ಯಕ್ಷರು ಅಥವಾ ನಿರ್ದೇಶಕರ ಸಂಬಂಧಿಗಳನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾಗಿ ನೇಮಕಗೊಳ್ಳಬಹುದಾಗಿರುತ್ತದೆ.

**ಪ್ರಶ್ನೆ 6 : ನಮ್ಮ ಸಹಕಾರಿಯಲ್ಲಿ A ಎಂಬ ಹೆಸರಿನ ಸದಸ್ಯರು ಉಳಿತಾಯ ಖಾತೆಯನ್ನು ಹೊಂದಿರುತ್ತಾರೆ ಇವರು B ಎಂಬ ಹೆಸರಿನ ಸದಸ್ಯರ ಉಳಿತಾಯ**

**ಖಾತೆಗೆ ಹಣ ವರ್ಗಾಯಿಸಬಹುದೇ?**

**ಉತ್ತರ :** ಸಹಕಾರಿಯಲ್ಲಿ A ಎಂಬ ಹೆಸರಿನ ಸದಸ್ಯರು B ಎಂಬ ಹೆಸರಿನ ಸದಸ್ಯರ ಉಳಿತಾಯ ಖಾತೆಗೆ ಹಣವನ್ನು A ಸದಸ್ಯನಿಂದ ಒಪ್ಪಿಗೆ ಪಡೆದು ವರ್ಗಾಯಿಸುವಂತಿಲ್ಲ. ವರ್ಗಾವಣೆಯನ್ನು ಬ್ಯಾಂಕಿಂಗ್ ವ್ಯವಹಾರ ನಡೆಸಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿ ಪಡೆದುಕೊಂಡಿರುವ ಬ್ಯಾಂಕ್‌ಗಳು ಮಾತ್ರ ಹಕ್ಕುಳ್ಳವರಾಗಿರುತ್ತಾರೆ.

**ಪ್ರಶ್ನೆ 7 : ಒಂದು ಸಹಕಾರಿಯ ವ್ಯಾಪಾರಸ್ಥ ಸದಸ್ಯರು ವ್ಯಾಪಾರ ಮಾಡಿಕೊಂಡಿದ್ದು XYZ ಎಂಬ ಹೆಸರಿನಲ್ಲಿ ಒಂದು Firm ಹೊಂದಿರುತ್ತಾರೆ. ಈಗ ಇವರು ತಮ್ಮ Firm ಹೆಸರಿನಲ್ಲಿ ವ್ಯಾಪರಾಭಿವೃದ್ಧಿಗಾಗಿ ಆಸ್ತಿ ಅಡಮಾನ ಮಾಡಿಕೊಂಡು Over-Draft ಆಧಾರಿತ ಸಾಲ ಕೇಳಿರುತ್ತಾರೆ. ಇಂತಹ ವ್ಯಾಪಾರಸ್ಥ ಸದಸ್ಯರಿಗೆ ಅವರ Firm ಹೆಸರಿನಲ್ಲಿ Over Draft ಆಧಾರಿತ ಸಾಲ ವಿತರಿಸಬಹುದೇ?**

**ಉತ್ತರ :** ಸಹಕಾರಿಯ ಉಪವಿಧಿಯಲ್ಲಿ ಸಂಸ್ಥೆಗಳನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಪ್ರಾವಧಾನವಿದ್ದಲ್ಲಿ ಮತ್ತು ರೂಪಿಸಿಕೊಂಡಿರುವ ಸಾಲದ ನಿಯಮಾವಳಿಗಳಲ್ಲಿ ಉಚಾಪತಿ (over draft) ಸಾಲವನ್ನು ನೀಡಲು ಅವಕಾಶವಿದ್ದಲ್ಲಿ, ಉಚಾಪತಿ (over draft) ಸಾಲವನ್ನು ನೀಡಬಹುದಾಗಿರುತ್ತದೆ.

**– ರವಿಕುಮಾರ್ ವಿ, ಮುಖ್ಯ ಕಾರ್ಯನಿರ್ವಾಹಕರು, ವೀರಶೈವ ವಿಕಾಸ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು**

## ಉದ್ಘಾಟನೆ



**ಕೊಪ್ಪಳ :** ದಿನಾಂಕ : 10–08–2020 ರಂದು ಕಿಷ್ಕಿಂದ ಸಿರಿ ಪತ್ತಿನ ಸೌಹಾರ್ದ ಸಹಕಾರಿ ನಿ; ಗಂಗಾವತಿ ಸಹಕಾರಿಯ ನೂತನ ಪ್ರಾರಂಭೋತ್ಸವದ ಸಂದರ್ಭದಲ್ಲಿ ಪೂಜಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ್ ವೈದ್ಯ ಜೀ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಆರ್.ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ವಿರುಪಾಕ್ಷಪ್ಪ ಮುಷ್ಠಿ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ.ಬಿ. ಪತ್ತಾರ, ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜಿ. ಜವಳಿ, ಕಿಷ್ಕಿಂದ ಸಿರಿ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯ ಪ್ರವರ್ತಕರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಉಪಸ್ಥಿತರಿದ್ದರು.

## ಭೇಟಿ




**ಕೊಪ್ಪಳ :** ದಿನಾಂಕ 10–08–2020 ರಂದು ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ್ ವೈದ್ಯ ಜೀ, ಇವರು ಗಂಗಾವತಿ ತಾಲ್ಲೂಕಿನ ಋಷಿ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಆರ್.ಡಿ.ಸಿ.ಸಿ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶ್ರೀ ವಿರುಪಾಕ್ಷಪ್ಪ ಮುಷ್ಠಿ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜಿ. ಜವಳಿ, ಋಷಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಆನಂದ್ ಕುಮಾರ ಅಕ್ಕಿ, ಸಹಕಾರಿಯ ಮಾನ್ಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಮತ್ತು ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ್ ಉಪಸ್ಥಿತರಿದ್ದರು.

## 5ನೇ ವಾರ್ಷಿಕ ಸಾಮಾನ್ಯ ಸಭೆ

**ಚಾಮರಾಜನಗರ :** ದಿನಾಂಕ 24.07.2020 ರಂದು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2019–20ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಸಾಮಾಜಿಕ ಅಂತರ, ಸ್ಯಾನಿಟೈಜರ್ ಮತ್ತು ಮಾಸ್ಕ್ ಧರಿಸಿ ನಡೆಸಲಾಯಿತು. ಸದಸ್ಯರಿಗೆ ಶೇ.10% ಡಿವಿಡೆಂಡ್ ನೀಡಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಬಾಲಸುಬ್ರಮಣ್ಯ, ಉಪಾಧ್ಯಕ್ಷರಾದ ಶ್ರೀ ಸಿ.ಪಿ ಪದ್ಮಪ್ರಸಾದ್ ಮತ್ತು ನಿರ್ದೇಶಕರಾದ ಚಿದಾನಂದ ಗಣೇಶ್, ಆಡಳಿತ ಮಂಡಲಿ ಸದಸ್ಯರು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಂಕೀರ್ತನ್ ಉಪಸ್ಥಿತರಿದ್ದರು.

# ಹವಾಮಾನ ಬದಲಾವಣೆ ನಿರ್ವಹಣೆಯಲ್ಲಿ ಸಹಕಾರಿ ಕ್ಷೇತ್ರ ಸಮರ್ಥವಾಗಿದೆ



– ಶ್ರೀ ಸುರೇಶ ಪ್ರಭು, ಸಂಸದರು ಹಾಗೂ ಮಾಜಿ ಕೇಂದ್ರ ಸಚಿವರು

(ಮೂಲ : ದಿ ಕೋ ಆಪರೇಟರ್)

ಅಂತರ ರಾಷ್ಟ್ರೀಯ ಸಹಕಾರ ಮೈತ್ರಿಕೂಟ ಏಶಿಯ ಫೆಸಿಫಿಕ್ ಹಾಗೂ ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಸಂದರ್ಭದಲ್ಲಿ ಏರ್ಪಡಿಸಿದ್ದ ವೆಬಿನಾರನಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಕೇಂದ್ರದ ಮಾಜಿ ಸಚಿವ ಹಾಗು ಹಾಲಿ ಸಂಸದ ಶ್ರೀ ಸುರೇಶ ಪ್ರಭುರವರು ಸಹಕಾರ ಕ್ಷೇತ್ರ ದೇಶದ ಆರ್ಥಿಕ ಹಾಗು ಸಾಮಾಜಿಕ ಅಭಿವೃದ್ಧಿಯಲ್ಲಿ ಗಣನೀಯ ಸೇವೆ ಸಲ್ಲಿಸಿದೆ. ಈ ಕ್ಷೇತ್ರಕ್ಕೆ ಪರ್ಯಾಯ ವ್ಯವಸ್ಥೆ ಇರುವುದಿಲ್ಲ. ಈ ವರ್ಷದ ಅಂತರರಾಷ್ಟ್ರೀಯ ಸಹಕಾರ ದಿನದ ಅಂಗವಾಗಿ ಸಹಕಾರ ಕ್ಷೇತ್ರ ವಾತಾವರಣ ಬದಲಾವಣೆಯ ನಿರ್ವಹಣೆ ಬಗ್ಗೆ ಮಾತನಾಡುತ್ತ ಸುಸ್ಥಿರ ಅಭಿವೃದ್ಧಿ ಸಾಧನೆಯತ್ತ ಸಹಕಾರಿ ಕ್ಷೇತ್ರ 17 ಅಂಶಗಳನ್ನು ಗುರುತಿಸಿರುವ ಕ್ಷೇತ್ರದಲ್ಲಿ 13ನೇಯ ಅಂಶ ಹವಾಮಾನ ಬದಲಾವಣೆ ನಿರ್ವಹಣೆಯಲ್ಲಿ ಸಹಕಾರ ಕ್ಷೇತ್ರ ಸಮರ್ಥವಾಗಿದೆ. ಹವಾಮಾನ ಬದಲಾವಣೆಗೆ ಸಹಕಾರ ಕ್ಷೇತ್ರ ಉತ್ತಮ ಸಾರಥ್ಯವನ್ನು ವಹಿಸಿ ಅವಕಾಶಗಳ ಸದುಪಯೋಗದ ಮಾಡಿಕೊಳ್ಳುವತ್ತ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದ್ದಾರೆ.



ಹವಾಮಾನ ಬದಲಾವಣೆ ಕೊರೋನಾ ಮಹಾಮಾರಿಗಿಂತಲೂ ಅಪಾಯಕಾರಿಯಾಗಿದೆ. ಕೊರೋನಾಗೆ ಇವತ್ತಲ್ಲ ನಾಳೆ ಒಂದು ಔಷಧಿಯನ್ನು ಕಂಡು ಹಿಡಿಯುತ್ತಾರೆ. ಔಷಧಿಯಿಂದ ಕೊರೋನಾ ನಿಗ್ರಹಿಸಬಹುದು. ಆದರೆ ಹವಾಮಾನ ವೈಪರಿತ್ಯ, ಹೆಚ್ಚಿನ ಮಳೆಯಿಂದ ಆಗುವ ಹಾನಿಗಳು, ಪ್ರವಾಹಗಳು, ಸಾಂಕ್ರಮಿಕ ರೋಗಗಳು ಇತ್ಯಾದಿಗಳು ಹವಾಮಾನದಲ್ಲಿ ಜನರ ದೈನಂದಿನ ಜೀವನ ಕ್ರಮದಲ್ಲಿ ಬದಲಾವಣೆಗಳನ್ನು ತರುತ್ತವೆ. ಇಂತಹ ಕ್ರಮಗಳಿಗೆ ಯಾವ ಔಷಧಿಗಳು ಇರುವುದಿಲ್ಲ. ಇವುಗಳನ್ನು ಸಮಾಜ ಸಂಘ ಸಂಸ್ಥೆಗಳು ಹಾಗೂ ಸರಕಾರಗಳೆ ನಿರ್ವಹಿಸಬೇಕಾಗುತ್ತದೆ. ಈ ಕಾರ್ಯವನ್ನು ಸಹಕಾರ ಸಂಘಸಂಸ್ಥೆಗಳು ಕೂಡ ನಿರ್ವಹಿಸಲು ಸಮರ್ಥವಾಗಿವೆ. ಅನೇಕ ಸಂದರ್ಭಗಳಲ್ಲಿ ನಿರ್ವಹಿಸುತ್ತ ಬಂದಿವೆ. ಪ್ರಸ್ತುತ ಸುಸ್ಥಿರ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ಸಹಕಾರ ಕ್ಷೇತ್ರ ಈ ಹವಾಮಾನ ನಿರ್ವಹಣೆಯನ್ನು ಸಮರ್ಥವಾಗಿ ನಿರ್ವಹಿಸಬಲ್ಲದು ಎಂದು ಅಭಿಪ್ರಾಯ ತಿಳಿಸಿದರು.

ಸಹಕಾರ ಸಂಸ್ಥೆಗಳು ತಮ್ಮ ಉಪವಿಧಿಗಳಲ್ಲಿ ಸೂಚಿತವಾಗಿರುವ ಉದ್ದೇಶಗಳಂತೆ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸುವುದರ ಜೊತೆಗೆ ಕಾರ್ಯವ್ಯಾಪ್ತಿಯಲ್ಲಿ ಇರುವ ಸ್ವಾಭಾವಿಕ ಸಂಪನ್ಮೂಲಗಳನ್ನು ಕ್ರೂಢೀಕರಿಸುವುದರ ಜೊತೆಗೆ ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಪರಿಣಾಮಕಾ–ರಿಯಾಗಿ ನಿರ್ವಹಿಸಲು ಆದ್ಯತೆ ನೀಡುವಂತಾಗಬೇಕು. ನೈಸರ್ಗಿಕ ವಿಕೋಪದಿಂದ, ಜೀವ ಹಾನಿ ಪ್ರಾಣಿಗಳ ಸಂರಕ್ಷಣೆ, ಬೆಳೆಗಳ ಸಂರಕ್ಷಣೆ, ಸದಸ್ಯರ ಹಾಗೂ ಕಾರ್ಯವ್ಯಾಪ್ತಿಯಲ್ಲಿ ಆರೋಗ್ಯ ವ್ಯವಸ್ಥೆ ಪರಿಸರ ಸಂರಕ್ಷಣೆಯಿಂದ ಉತ್ತಮ ಪರಿಸರ ನಿರ್ಮಾಣ ಕಾರ್ಯಗಳನ್ನು ಹಮ್ಮಿಕೊಂಡು ಜನರಿಗೆ ಸಹಾಯಹಸ್ತವನ್ನು ವಿಸ್ತರಿಸುವಂತಾಬೇಕಿದೆ. ಕಾರ್ಯವ್ಯಾಪ್ತಿಯಲ್ಲಿ, ರೈತರ ಜಮೀನುಗಳಲ್ಲಿ, ಮಣ್ಣು ಪರೀಕ್ಷೆ, ಜಲಸಂಪನ್ಮೂಲಗಳ ಸದ್ಬಳಕೆ ಹಾಗು ಅಭಿವೃದ್ಧಿ, ಆರೋಗ್ಯ ಹಾಗೂ ಶಿಕ್ಷಣ ಅಭಿಯಾನ ಉದ್ಯೋಗ ಸೃಷ್ಟಿಯಲ್ಲಿ ಹೊಸ ಹೊಸ ಯೋಜನೆಗಳನ್ನು ಜಾರಿ ಮಾಡುವುದರಿಂದ ಹವಾಮಾನ ಬದಲಾವಣೆಯನ್ನು ಸಹಕಾರಿ ಸಂಸ್ಥೆಗಳು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಉತ್ತಮ ಕಾರ್ಯಯೋಜನೆ ಹಾಗೂ ಪರಿಣಾಮಕಾರಿ ಅನುಷ್ಠಾನವೂ ಅಷ್ಟೆ ಅಗತ್ಯ.

# ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಸಹಕಾರ



– ಶ್ರೀ ಶಶಿಧರ.ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು

ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಪ್ರಧಾನಿಗಳು ಮಾತನಾಡುತ್ತಾ ಮಕ್ಕಳು ಶಿಕ್ಷಣದಿಂದ ಕೇವಲ ಜ್ಞಾನ ಪಡೆಯುವುದಲ್ಲದೇ ಕ್ರಿಯಾತ್ಮಕ ಮತ್ತು ನೂತನ ಚಿಂತನಾ ಶಕ್ತಿಯನ್ನು ಬೆಳೆಸಿಕೊಳ್ಳುವಂತಾಗ ಬೇಕು ಮತ್ತು ಸಮೂಹ ಚಿಂತನೆ (herd mentality) ಬೆಳೆಸಿಕೊಳ್ಳಬೇಕೆಂದು ಆಶಯ ವ್ಯಕ್ತಪಡಿಸಿರುತ್ತಾರೆ.

ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳು ಕೇವಲ ಜ್ಞಾನ ಅಥವ ಮಾಹಿತಿ ಪಡೆಯುವುದಲ್ಲ. ಮಾಹಿತಿ ಸುಲಭವಾಗಿ ಎಲ್ಲೆಡೆ ಲಭ್ಯವಾಗುವ ಕಾಲ ಇದಾಗಿದೆ. ವಿದ್ಯಾರ್ಥಿಗಳು ಕ್ರಿಯಾಶೀಲರಾಗಿ ಸ್ವಂತ ಅಭಿರುಚಿ ಆಸಕ್ತಿ, ಸ್ವಂತ ಚಿಂತನೆ ಮಾಡುವ ಶಕ್ತಿ ಪಡೆಯುವಲ್ಲಿ ಮತ್ತು ಅವರನ್ನು ಸಶಕ್ತರನ್ನಾಗಿ ಮಾಡುವಲ್ಲಿ, ಪ್ರಯೋಗಾತ್ಮಕವಾಗಿ ತಾವೇ ಚಟುವಟಿಕೆಗಳನ್ನು ಕೈಗೊಂಡಾಗ ವ್ಯವಸ್ಥಾಪನೆ, ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ತೊಡಗಿಸಿಕೊಳ್ಳುತ್ತಾರೆ. ತಾವು ವಿದ್ಯಾರ್ಥಿ ದಿಸೆಯಿಂದ ಹೊರಬಂದನಂತರ ಈ ಸಶಕ್ತತೆ ಅವರನ್ನು ಸಕ್ರಿಯ ಕ್ರಿಯಾತ್ಮಕ ನಾಗರೀಕರಾಗಲು ಸಹಕಾರಿಯಾಗುತ್ತದೆ. ಈ ದಿಸೆಯಲ್ಲಿ ಆಲೋಚಿಸಿದಾಗ ಪ್ರಜಾಸತ್ತಾತ್ಮಕ ಆಡಳಿತ ಉಳ್ಳ ನಮ್ಮ ರಾಷ್ಟ್ರದಲ್ಲಿ ಪ್ರಜಾಸತ್ತಾತ್ಮಕ, ಆಡಳಿತ/ವ್ಯವಸ್ಥಾಪನೆ, ಸಮಾನತೆ, ಸಾಮಾಜಿಕನ್ಯಾಯ, ಆರ್ಥಿಕ ಪ್ರಗತಿಗೆ ದ್ಯೋತಕವಾದ ಸಹಕಾರದ ಕಲ್ಪನೆಯ ಬೀಜ ಬಿತ್ತುವ ಕಾರ್ಯ ವಿದ್ಯಾರ್ಥಿ ದಿಸೆಯಲ್ಲಿಯೇ ಆಗಬೇಕು. ಆದುದರಿಂದ ರಾಷ್ಟ್ರೀಯ ಶಿಕ್ಷಣ ನೀತಿ (National Educational Police NEP) ಯಲ್ಲಿ "ಸಹಕಾರ ಶಿಕ್ಷಣವನ್ನು ಅಳವಡಿಸಿಕೊಳ್ಳಬೇಕು. ಮಾಧ್ಯಮಿಕ ಹಂತದಲ್ಲಿ ಸಹಕಾರದ ಅರ್ಥ ಪ್ರಜಾಸತ್ತಾತ್ಮಕ ಆಡಳಿತ ನೀತಿ. ಆರ್ಥಿಕ ಪ್ರಗತಿಯೊಂದಿಗೆ ಸಾಮಾಜಿಕ ನ್ಯಾಯ ದೊರಕುವ ಮಾರ್ಗದ ಬಗ್ಗೆ, ಗ್ರಾಮೀಣ ಪ್ರಗತಿಯಲ್ಲಿ ಸಹಕಾರದ ಪಾತ್ರದ ಬಗ್ಗೆ ಪರಿಚಯಿಸಬೇಕು. ಸಹಕಾರ ಸಂಘದ ಪರಿಕಲ್ಪನೆ ಬಗ್ಗೆ 'ಅಣುಕು' ಪ್ರದರ್ಶನ 'ಮಾದರಿ' ಪ್ರದರ್ಶನಗಳ ಪ್ರಾಯೋಗಿಕ ಅನುಭವ ನೀಡಬೇಕು. ಉನ್ನತ ಮಟ್ಟದಲ್ಲಿ ವಿದ್ಯಾರ್ಥಿಗಳ ಸಹಕಾರ ಸಂಘಗಳನ್ನು ರಚಿಸಿಕೊಂಡು ತಮ್ಮ ಆಧುನಿಕ ಶಿಕ್ಷಣದ ಅಗತ್ಯತೆಗೆಬೇಕಾದ ಎಲ್ಲ ಪರಿಕರಗಳನ್ನು, ಆಧುನಿಕ ಗ್ರಂಥಾಲಯ, ಇ–ಕಲಿಕೆ ಪರಿಕರಗಳನ್ನು ಈ ಸಹಕಾರ ಸಂಘದ ಮೂಲಕ ನಡೆಸಿ ಸ್ವಯಂ ಆಡಳಿತದ ಅನುಭವವನ್ನು ಅವರು ಪಡೆಯುವಂತಾಗಬೇಕು. ಇದಕ್ಕೆ ಅಗತ್ಯ ಕಾರ್ಯ್ದಯಾತ್ಮಕ ಮತ್ತು ಆರ್ಥಿಕ ಅನುಕೂಲತೆಗಳ ಪರಿಸರವನ್ನು ನಿರ್ಮಾಣಮಾಡಬೇಕಾದ ಅವಶ್ಯಕತೆಯಿದೆ. ಇದರಿಂದ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತದೆ. ರಾಷ್ಟ್ರ ಎದುರಿಸುತ್ತಿರುವ ನಾಯಕರ ಕೊರತೆಯನ್ನು ನೀಗಿಸಿದಂತಾಗುತ್ತದೆ. ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಂಡಾಗ ಅವರ ವ್ಯಕ್ತಿತ್ವ ವಿಕಸನಕ್ಕೆ ಹೇಗೆ ಸಹಕಾರಿಯಾಗುತ್ತದೆ ಎಂಬುದು ಅನುಭವ ವೇದ್ಯ. ಸಹಕಾರದ ಪ್ರಥಮ ಅನುಭವ ಪಡೆದ ಯುವಕರು ಮುಂದೆ ಸಹಕಾರ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಹಕಾರದ ಬೆಳವಣಿಗೆಗೆ ಆರ್ಥಿಕ ಪ್ರಗತಿಗೆ ಕಾರಣರಾಗುತ್ತಾರೆ.

ಈ ಮೇಲಿನ ಅನಿಸಿಕೆಗಳೊಡನೆ, ಇತ್ತೀಚಿಗಿನ ಭಾರತ ಸರ್ಕಾರದ ನೀತಿಯಲ್ಲಿ ಬೆಳವಣಿಗೆಗಳು ಸಹಕಾರದ ಬೆಳವಣಿಗೆಯ ಅವಶ್ಯಕತೆಗೆ ಪೂರಕ ವಾತಾವರಣ ನಿರ್ಮಾಣಗೊಳ್ಳುತ್ತಿರುವುದು ಆಶಾದಾಯಕವಾಗಿದೆ ಎಂದು ಅಭಿಪ್ರಾಯಿಸಿದೆ. ಪ್ರಧಾನಿಗಳು ಖುದ್ದಾಗಿ 'ಉಗನೆ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ'ಯೊಡನೆ ವೀಡಿಯೋ ಸಂವಾದ ನಡೆಸಿ ಮುಖ್ಯ ಕಾರ್ಯನಿರ್ವಾಹಕರೊಡನೆ ಮಾತನಾಡಿರುತ್ತಾರೆ. ಭಾರತ ಸರ್ಕಾರವು 'ನಬಾರ್ಡ್' ನಲ್ಲಿ 'ಕೃಷಿ ಮೂಲ ಸೌಕರ್ಯನಿಧಿ' (Agriculture infrastructure development fund AIF) ಸ್ಥಾಪನೆ ಮಾಡಿ ರೂ ಒಂದು ಲಕ್ಷ ಕೋಟಿ ಮೀಸಲಿರಿಸಿದೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳಾದ ಗೋದಾಮು, ಶೀತಲಗೃಹ, ಮೌಲ್ಯವರ್ಧೀಕರಣ (value addition) ಅಥವ ಪರಿಷ್ಕರಣೆ (processing) ಚಟುವಟಿಕೆಗಳಿಗೆ ಅಗತ್ಯ ಯಂತ್ರೋಪಕರಣ ಸೌಲಭ್ಯ ನೀಡಲು ಅವಕಾಶವಾಗುತ್ತದೆ. ನಮ್ಮ ಸಹಕಾರ ಸಂಘಗಳು ಈ ಸೌಲಭ್ಯಗಳನ್ನು ಯಶಸ್ವಿಯಾಗಿ ಉಪಯೋಗಿಸಿಕೊಂಡಲ್ಲಿ ರೈತರಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಕಾರ್ಯ ಸಾಧುವಾದ ಯೋಜನೆಯನ್ನು ರೂಪಿಸುವುದು ಅದರಂತೆ ಅನುಷ್ಠಾನಗೊಳಿಸುವುದು ಅತಿಮುಖ್ಯವಾಗುತ್ತದೆ. ಯೋಜನೆಯಲ್ಲಿ ರೈತ ಉತ್ಪಾದನೆ ಕಂಪನಿಗಳು, ಕೃಷಿ ಉದ್ಧಿಮೆದಾರರಿಗೂ ಅವಕಾಶವಿರುವುದರಿಂದ ಅವರುಗಳೇ ಪ್ರಮುಖ ಪಾಲು ಪಡೆಯುವ ಸಾಧ್ಯತೆಗಳಿವೆ. ಆದುದರಿಂದ ನಮ್ಮ ಸಹಕಾರ ಸಂಘಗಳು ತಾಂತ್ರಿಕ ಸಾಧ್ಯತೆ, ಆರ್ಥಿಕ ಸದೃಢತೆ ಮತ್ತು ಬ್ಯಾಂಕಎಬಿಲಿಟಿಯನ್ನು ಅತ್ಯಂತ ಜಾಗರೂಕರಾಗಿ ರೂಪಿಸಿ, ಸಾಲದ ಹೊರೆ, 'ಹೊರೆ'ಯಾಗದಂತೆ ಲಾಭದಾಯಕವಾಗಿ ವ್ಯವಹಾರ ನಡೆಯುವಂತೆ ಮತ್ತು ಅದೇ ಸಮಯದಲ್ಲಿ ರೈತರಿಗೂ ಅನುಕೂಲಕರವಾಗಿರುವಂತೆ ಎಚ್ಚರಿಕೆಯ ನಿರ್ವಹಣೆ ಅತ್ಯಗತ್ಯ. ಜಾಗತಿಕ ಮಟ್ಟದಲ್ಲಿ ಭಾರತ ಸ್ಪರ್ಧಿಸುವಂತಾಗಬೇಕು ಎಂಬುದು ಪ್ರಧಾನಿಗಳ ಆಶಯವಾಗಿದೆ. ಇದು ಸಫಲವಾಗಬೇಕಾದಲ್ಲಿ ಯೋಜನೆಗಳ ನಿರ್ವಹಣೆಗೆ ಅಗತ್ಯ ಮಾನವ ಸಂಪನ್ಮೂಲ ಕೂಡ ಅತಿ ಮುಖ್ಯವಾಗುತ್ತದೆ. ಯೋಜನೆಯ ಬಗ್ಗೆ ಜ್ಞಾನ ಅರಿವು ವೃತ್ತಿಪರರನ್ನು ತೊಡಗಿಸಿಕೊಳ್ಳುವುದರ ಬಗ್ಗೆ ಸಹಕಾರ ಸಂಘ ಆಲೋಚಿಸಬೇಕಾಗುತ್ತದೆ. ಹಾಲಿ ಅಗತ್ಯ ಸಿಬ್ಬಂದಿ ಇದ್ದಲ್ಲಿ ಅವರಿಗೇ ಅಗತ್ಯ ತರಬೇತಿ ನೀಡಿ ವೃತ್ತಿ ಕೌಶಲರನ್ನಾಗಿ ಮಾಡಬೇಕಾಗುತ್ತದೆ. ಸಹಕಾರದ ಸಾಮರ್ಥ್ಯವನ್ನು ಬಲಪಡಿಸಬೇಕಾಗಿರುವುದು ಇಂದಿನ ಅವಶ್ಯಕತೆಯಾಗಿರುತ್ತದೆ. ಅದರಂತೆ ಸಹಕಾರ ರಂಗದ ಮಾನವ ಸಂಪನ್ಮೂಲಗಳಾದ ಸದಸ್ಯರು, ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಇವರೆಲ್ಲರನ್ನು ಸಬಲೀಕರಣಗೊಳಿಸುವ ಅವಶ್ಯಕತೆ ಇದೆ.

ಈ ಸಬಲೀಕರಣ ವಿದ್ಯಾರ್ಥಿ ದಿಸೆಯಲ್ಲಿಯೇ ಆರಂಭಗೊಳ್ಳುವ ಅಗತ್ಯತೆ ಇದೆ. ಶಿಕ್ಷಣದ ಉದ್ದೇಶವಾದ 'ಪರಿಪೂರ್ಣ ವ್ಯಕ್ತಿತ್ವ' ನಿರ್ಮಾಣವಾಗುವಲ್ಲಿ ಸಹಕಾರದ ವಿಷಯ ಶಿಕ್ಷಣ ಅತ್ಯಂತ ಪ್ರಭಾವ ಶಾಹಿಯಾಗಬಲ್ಲದು. ಆದುದರಿಂದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ 'ಸಹಕಾರ' ವನ್ನು ಅವಿಭಾಜ್ಯ ಅಂಗವಾಗಿ ಪರಿಗಣಿಸುವ ಅವಶ್ಯಕತೆ ಇದೆ. ಇದರಿಂದ ತಾನೂ, ನಾನು ಎನ್ನುವುದನ್ನು ತ್ಯಜಿಸಿ ನಾವು, ನಮ್ಮದು ಎಂಬ ಪರಿಕಲ್ಪನೆಯೊಡನೆ 'ಸಮೂಹ ಚಿಂತನೆ'ಗೆ ಅವಕಾಶ ಕಲ್ಪಿಸಿದಂತಾಗುತ್ತದೆ.

"ಸಹಕಾರಂಗೆಲ್ಗೆ' 'ಸಹಕಾರಂಬಾಳ್ಗೆ'

# ಕಲ್ಯಾಣ ಕರ್ನಾಟಕದಲ್ಲಿ ಎಲೆಮರೆಕಾಯಿಯಾಗಿ ಸೇವೆ ಸಲ್ಲಿಸುತ್ತಿರುವ ಸಹಕಾರಿ ಆಸ್ಪತ್ರೆ.

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಾನೂನು ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಕಲಬುರಗಿ ವಿಭಾಗ

ಅಣ್ಣ ಬಸವಣ್ಣವರ ಕಲ್ಯಾಣ ಕ್ರಾಂತಿಯ ಕರ್ಮಭೂಮಿಲ್ಲಿ ಸಮಾಜವಾದ ಸಮಬಾಳ್ವೆಯನ್ನು ಲಿಂಗ ಭೇದವಿಲ್ಲದೆ ಒಬ್ಬರೊಬ್ಬರ ಸಹಕಾರ ದೊಂದಿಗೆ ಶರಣರ ವೈಭವದಿಂದ ಮೇರೆದ ಕಲ್ಯಾಣ ನಾಡಿನ ಬೀದರ ಜಿಲ್ಲೆಯು ನಂತರ ಬಹುಮನಿ ಸುಲ್ತಾನ ಹಾಗೂ ನಿಜಾಮರ ಆಳ್ವಿಕೆಯಿಂದಾಗಿ ಬೀದರ ಜಿಲ್ಲೆಯು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಆರೋಗ್ಯವಾಗಿ ಅತ್ಯಂತ ಹಿಂದುಳಿದ ಜಿಲ್ಲಾ ಹಣೆ ಪಟ್ಟಿ ಹೊಂದಿದೆ ದೇಶದ ಸ್ವಾತಂತ್ರ್ಯದ ನಂತರ ಸಹ ಈ ಭಾಗವು ಅನೇಕ ಕಾರಣಗಳಿಂದ ಶೈಕ್ಷಣಿಕ, ಮತ್ತು ಆರೋಗ್ಯ ಕ್ಷೇತ್ರವು ಅಭಿವೃದ್ಧಿ ಹೊಂದಿರುವುದಿಲ್ಲ. ಇತ್ತಿಚಿಗೆ ಒಂದು ಸಣ್ಣದಾದ ಆಶಾಭಾವನೆಯನ್ನು ಜಿಲ್ಲೆಯಲ್ಲಿ ಪ್ರಾರಂಭವಾಗಿದೆ. ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಜಿಲ್ಲೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಸಾವಿರಾರು ಮಹಿಳೆಯರು ಹಾಗೂ ಕುಟುಂಬದವರನ್ನು ಸಬಲತೆ ಮಾಡುವುದರ ಮುಖಾಂತರ ದೇಶದಲ್ಲಿ ಹೆಸರುವಾಸಿಯಾದ ಬೀದರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನ ಅಧ್ಯಕ್ಷರಾಗಿ ಸುಮಾರ 20 ವರ್ಷಗಳಗಿಂತ ಅಧಿಕ ಕಾರ್ಯಭಾರ ನಿರ್ವಹಿಸಿರುವ ರಾಜ್ಯದ ಸಹಕಾರಿ ಮುತ್ಸದಿ, ರಾಜಕಿಯ ಚತುರ, ಮಾಜಿ ಸಚಿವರಾಗಿದ್ದ ಮಾನ್ಯ ಡಾ|| ಗುರುಪಾದಪ್ಪ ನಾಗಮಾರಪಳ್ಳಿರವರ ಜನಸಾಮನ್ಯರ ಆರೋಗ್ಯದ ಕಾಳಜಿಯನ್ನು ಪರಿಗಣಿಸಿ, ಸಣ್ಣ ದೊಡ್ಡ ಪ್ರಮಾಣದ ಆರೋಗ್ಯ ಚಿಕಿತ್ಸೆಗಾಗಿ ಬೀದರ ಜಿಲ್ಲೆಯವರು ಬೀದರ ಜಿಲ್ಲೆಯಲ್ಲಿ ಗುಣಮಟ್ಟದ ಚಿಕಿತ್ಸೆ ಹಾಗೂ ಅತ್ಯಾಧುನಿಕ ಯಂತ್ರೋಪಕರಣಗಳಿಲ್ಲದ ಕಾರಣ ರೋಗಿಗಳು ಅನಿವಾರ್ಯವಾಗಿ ತೆಲಾಂಗಣದ ಹೈದ್ರಬಾದ ಮತ್ತು ಮಹಾರಾಷ್ಟ್ರದ ಸೋಲಾಪೂರದಲ್ಲಿ ಚಿಕಿತ್ಸೆ ಪಡೆಯಬೇಕಾಗುತ್ತಿತ್ತು. ಇದರಿಂದಾಗಿ ಜನ ಸಾಮಾನ್ಯರು ಹಾಗೂ ಬಡವರಿಗೆ ಸಕಾಲದಲ್ಲಿ ಚಿಕಿತ್ಸೆ ಸಿಗದ ಕಾರಣ ಜೀವಕಳೆದುಕೊಂಡ ಸಾಕಷ್ಟು ಪ್ರಕರಣಗಳು ಗಮನಕ್ಕೆ ಬಂದಿದ್ದರಿಂದ ಜನಸಾಮನ್ಯರಿಗೆ ಮತ್ತು ಬಡವರಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆಯನ್ನು ನೀಡುವ ಮಹಾತ್ವಾಕಾಂಕ್ಷೆಯಿಂದಾಗಿ ಕಲ್ಯಾಣ ಕರ್ನಾಟಕ ಭಾಗದ ಬೀದರ ನಗರದಲ್ಲಿ ಒಂದು ವಿಶಿಷ್ಠವಾದ ಸಹಕಾರ ಸಂಘವನ್ನು ಹುಟ್ಟಿಹಾಕಿ ಅದರ ಬೆಳವಣಿಗೆಗೆ ಅಡಿಪಾಯಹಾಕಿದ್ದರು ಇದ್ದರಿಂದಾಗಿ ಆರೋಗ್ಯದ ಚಿಕಿತ್ಸೆಗಾಗ ಹೈದರಬಾದ ಮತ್ತು ಸೊಲಾಪೂರ ನಗರಗಳಿಗೆ ಅಲೆದಾಡುವುದನ್ನು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದ್ದು ಅತ್ಯಂತ ಉತ್ಕೃಷ್ಟ ಸೇವೆ ನೀಡುವುದರ ಮುಖಾಂತರ ಬೀದರ ಜಿಲ್ಲೆಯಲ್ಲಿ ಸಹಕಾರ ಆಸ್ಪತ್ರೆ ಇಂದು ಮನೆಮಾತಾಗಿದೆ.

**ಸಹಕಾರ ಸಂಘದ ಧ್ಯೇಯ :** ಬೀದರ ಜಿಲ್ಲೆ ಹಾಗೂ ಹತ್ತಿರದ ಮಹಾರಾಷ್ಟ್ರ ಮತ್ತು ಆಂದ್ರ ಪ್ರದೇಶದ ಬಡ ಜನರಿಗೆ ಆರೋಗ್ಯ ತಪಾಸಣೆಯೊಂದಿಗೆ ಉತ್ತಮ ಚಿಕಿತ್ಸೆಯನ್ನು ಕಡಿಮೆ ವೆಚ್ಚದಲ್ಲಿ ನೀಡುವುದರ ಜೊತೆ ತುರ್ತು ಚಿಕಿತ್ಸೆಗಾಗಿ ಹೈದ್ರಬಾದ ಮತ್ತು ಸೊಲಾಪೂರಗೆ ಹೊಗುವುದನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡುವ ಧ್ಯೇಯವನ್ನು ಇಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ.

**ಸಹಕಾರ ಸಂಘದ ದೃಷ್ಠಿ :** ಸಹಕಾರ ಸಂಘದ ಅಡಿಯಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭಿಸಿ 350 ಹಾಸಿಗೆಯುಳ್ಳ ಅತ್ಯಾಧುನಿಕ ಆಸ್ಪತ್ರೆಯನ್ನು ಪ್ರಾರಂಭಿಸಿ ಜಿಲ್ಲೆಯ ಜನರ ಆರೋಗ್ಯ ಕಾಪಾಡುವುದು.

**ಸಹಕಾರ ಸಂಘದ ಮೌಲ್ಯಗಳು :** ಆರೋಗ್ಯ ಸೇವೆಯಲ್ಲಿ ಸದಸ್ಯರ




ಭಾಗವಹಿಸುವಿಕೆಯಿಂದಾಗಿ ಆರೋಗ್ಯವಂತ ವ್ಯಕ್ತಿ ನಿರ್ಮಾಣ ಮಾಡುವುದು.

**ಉದ್ದೇಶಗಳು :**

- ಸಹಕಾರ ತತ್ವದಡಿಯಲ್ಲಿ ಪ್ರತಿಯೊಬ್ಬ ಸದಸ್ಯ ಮತ್ತು ಕುಟುಂಬದವರ ಆರೋಗ್ಯ ಕಾಳಜಿ ವಹಿಸುವ ಕುರಿತು ಉತ್ತೇಜನವನ್ನು ಅವರ ಆರ್ಥಿಕ ಮತ್ತು ಸಾಮಾಜಿಕ ಆಧಾರದ ಮೇಲೆ ಪರಸ್ಪರ ಸಹಕಾರದೊಂದಿಗೆ ಕಾರ್ಯನಿರ್ವಹಿಸುವುದು.
- ನಾಗರಿಕರಿಗೆ ಕಡಿಮೆ ವೆಚ್ಚದಲ್ಲಿ ಆರೋಗ್ಯ ಸೇವೆಯನ್ನು ಒದಗಿಸುವುದು.
- ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಯನ್ನು ಮುಂದುವರೆದ ಅತ್ಯಾಧುನಿಕ ಯಂತ್ರೋಪಕರಣ ಹೊಂದಿರುವ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ನಡೆಸುವುದು.
- ಸ್ವಂತ ಭೂಮಿಯಲ್ಲಿ ಕಟ್ಟಡ ನಿರ್ಮಾಣ ಮಾಡಿ ಸಹಕಾರ ಸಂಘದ ಎಲ್ಲಾ ಚಟುವಟಿಕೆಗಳನ್ನು ನಡೆಸುವುದು.
- ಆಸ್ಪತ್ರೆ, ವೈದ್ಯಕೀಯ ಕಾಲೇಜು, ದಂತ ಕಾಲೇಜು, ನರ್ಸಿಂಗ ಕಾಲೇಜು, ಔಷದಿ ಕಾಲೇಜು, ಪ್ಯಾರಮೆಡಿಕಲ್ ಕೋರ್ಸ್ ಮತ್ತು ಔಷಧಿ ಅಂಗಡಿಗಳನ್ನು ಪ್ರಾರಂಭಿಸುವುದು.
- ಆರೋಗ್ಯ ಕ್ಷೇತ್ರದ ಔಷಧಗಳ ಉತ್ಪಾದನೆ ಮಾಡುವುದು.
- ಆರೋಗ್ಯ ತಪಾಸಣೆ ಮಾಡುವುದು.
- ಸೆಟಲೆಟ್ ಕೇಂದ್ರವನ್ನು ಪ್ರಾರಂಭಿಸಿ ಅದರ ಮುಖಾಂತರ ಸೇವೆ ಒದಗಿಸುವುದು.
- ಸದಸ್ಯರಿಗೆ ಮತ್ತು ನಾಗರಿಕರಿಗೆ ಆರೋಗ್ಯ ರಕ್ಷಣೆ ಬಗ್ಗೆ ಶಿಕ್ಷಣವನ್ನು ನೀಡುವುದು.
- ಸಹಕಾರ ಸಂಘದ ಉದ್ದೇಶಗಳಿಗಾಗಿ ಧೇಣಿಗೆ ಪಡೆಯಬಹುದು.
- ಕೇಂದ್ರ ಮತ್ತು ರಾಜ್ಯ ಸರಕಾರಗಳ ಆರೋಗ್ಯದ ಸೇವೆಗಳ ಯೋಜನೆಗಳನ್ನು ಸಂಘದ ಮುಖಾಂತರ ಅನುಷ್ಠಾನಗೊಳಿಸುವುದು.
- ಮದ್ಯಪಾನ ವ್ಯಸನ ಮುಕ್ತಿ ಕೇಂದ್ರ, ಕೌಟುಂಬಿಕ ಆಪ್ತ ಸಮಾಲೋಚನ ಸಲಹಾ ಕೇಂದ್ರ.

- ಆರೋಗ್ಯ ವಿಮಾ ಕಂಪನಿಗಳ ಸಂಯೋಗದೊಂದಿಗೆ ಕಡಿಮೆ ಮೊತ್ತದಲ್ಲಿ ಆರೋಗ್ಯ ವಿಮೆ ಮಾಡಿಸುವುದು.
- ಆಸ್ಪತ್ರೆಯ ಆವರಣದಲ್ಲಿ ರೋಗಿಗಳ ಸಹಾಯಕರಿಗಾಗಿ ತಂಗುದಾಣ, ಕೊಠಡಿಗಳು ಮತ್ತು ಉಪಾಹಾರ ಕೇಂದ್ರ ಪ್ರಾರಂಭಿಸುವುದು.

**ಸಹಕಾರಿಯ ಆಡಳಿತ ವ್ಯವಸ್ಥೆ :**

ಸಹಕಾರಿಯು 16 ನಿರ್ದೇಶಕರ ಆಡಳಿತ ಮಂಡಳಿಯು ಹೊಂದಿದ್ದು ಪ್ರಸ್ತುತ ಶ್ರೀ ಸೂರ್ಯಕಾಂತ ನಾಗಮರಪಳ್ಳಿರವರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೂ ಆಡಳಿತ ಮಂಡಳಿ ನೇಮಕ ಮಾಡಿದ ಆರು ಜನರು ವಿಶೇಷ ಅಹ್ವಾನಿತರು

ಸದರಿ ಸಹಕಾರಿಯ ಆಡಳಿತ ಮಂಡಳಿ ಸಭೆಯು ಕನಿಷ್ಠ ತ್ರೈಮಾಸಿಕ ಕ್ಕೆ ಒಂದು ಸಭೆ ಹಮ್ಮಿಕೊಂಡು ಈ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳನ್ನು ಮುಖ್ಯಕಾರ್ಯನಿರ್ವಾಹಕರು ಅನುಷ್ಠಾನ ತರಲು ಎರಡು ವಿಭಾಗಗಳಾಗಿ ಮಾಡಿಕೊಂಡಿದ್ದಾರೆ.

**1. ಕಛೇರಿ ಮತ್ತು ಆಡಳಿತ :** ಕಛೇರಿ, ಲೆಕ್ಕಪತ್ರ ಮತ್ತು ಇತರೆ ಕೆಲಸಕ್ಕಾಗಿ 6 ಸಿಬ್ಬಂದಿಗಳು ಕಾರ್ಯನಿರ್ವಹಿಸುತಿದ್ದಾರೆ.

**2. ಆಸ್ಪತ್ರೆ ನಿರ್ವಹಣೆ :** ಈ ವಿಭಾಗದಲ್ಲಿ ಪ್ರಸ್ತುತ 55 ಹಾಸಿಗೆಯ 24 ಘಂಟೆ ಕಾರ್ಯನಿರ್ವಹಿಸುವ ಆಸ್ಪತ್ರೆಯಲ್ಲಿ 12 ವೈದ್ಯರು ಸೇರಿದಂತೆ ವಿವಿಧ ವರ್ಗದ 78 ಸಿಬ್ಬಂದಿಗಳು ಕಾರ್ಯನಿರ್ವಹಿಸುತಿದ್ದಾರೆ ಹಾಗೂ ಸಂಘವು ರೋಗಿಯ ಬೇಡಿಕೆ ಹಾಗೂ ಆಸ್ಪತ್ರೆಯ ಅವಶ್ಯಕತೆವೆನಿಸಿದಾಗ ಸಂಭಾವನೆಯ ಆಧಾರದ ಮೇಲೆ ಹಲವು ವೈದ್ಯರ ಸೇವೆ ಪಡೆದು ಕಾರ್ಯನಿರ್ವಹಿಸುತಿದ್ದಾರೆ. ಆಧುನಿಕ ಯಂತ್ರೋಪಕರನೊಳಗೊಂಡ 3 ಅಂಬುಲೆನ್ಸಗಳು ಹೊಂದಿದೆ.

**ಸಹಕಾರಿಯ ವಿಶ್ಲೇಷಣೆ :**

**ಶಕ್ತಿ :** ಸಹಕಾರಿ ಸದಸ್ಯರ ಶೇರು ಬಂಡವಾಳ, ಸಂಘಕ್ಕೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕನ ಬೆಂಬಲ, 70 ಎಕ್ಕರೆ ಸ್ವಂತ ಜಮಿನು.

**ದೌರ್ಬಲ್ಯಗಳು :** ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರಿಗೆ ಅನುಭವದ ಕೊರತೆ, ತಜ್ಞ ವೈದ್ಯರ ಕೊರತೆ, ಸದಸ್ಯರಿಗೆ ಚಿಕಿತ್ಸೆಗಾಗಿ ಆಸ್ಪತ್ರೆ ಬೀದರನಲ್ಲಿ ಮಾತ್ರ ಹೊಂದಿದ್ದರಿಂದ 40 ಕಿ. ಮೀ ಅಂತರದಿಂದ ದೂರ ವಿದ್ದವರು ಚಿಕಿತ್ಸೆಗೆ ಆಗಮಿಸುತಿಲ್ಲ ಅದರಿಂದ ಹಲವು ಸದಸ್ಯರಿಗೆ ಅನಾನೂಕುಲ.

**ಅವಕಾಶಗಳು :** ಬೀದರ ಜಿಲ್ಲೆಯಲ್ಲಿ ಸೂಪರ ಸ್ಪೆಶಾಲಿಟಿ ಆಸ್ಪತ್ರೆಗಳ ಕೊರತೆ, ಅಧುನಿಕ ಯಂತ್ರೋಪಕರಣಗಳನ್ನು ಹೊಂದಿರುವ ಆಸ್ಪತ್ರೆಗಳಿಗೆ ಹೊಗಬೇಕಾದರೆ ಹೈದರಬಾದ ಮತ್ತು ಸೋಲಾಪೂರಕ್ಕೆ ಹೋಗಬೇಕಾಗುತ್ತದೆ. ಖಾಸಗಿ ಆಸ್ಪತೆಗಳಲ್ಲಿ ಚಿಕಿತ್ಸೆಯ ವೆಚ್ಚ ಅಧಿಕವಿದೆ ಬೀದರ ಜಿಲ್ಲೆಯಲ್ಲಿ 100 ಹಾಸಿಗೆ ಮೇಲ್ಪಟ್ಟ ಆಸ್ಪತ್ರೆ ಸರಕಾರಿ ಆಸ್ಪತ್ರೆ ಹೊರತ್ತು ಪಡಿಸಿ ಯಾವುದೇ ಆಸ್ಪತ್ರೆಗಳು ಹೊಂದಿರುವುದಿಲ್ಲ. ಬೀದರ ಜಿಲ್ಲಾ ಕೇಂದ್ರದ ಸುತ್ತ ಮುತ್ತ ಜನ ಸಾಂದ್ರತೆ ಹೆಚ್ಚಳವಿದ್ದು ಮಹಾರಾಷ್ಟ್ರ ಮತ್ತು ತೆಲಂಗಾಣದ ಹಲವು ಗ್ರಾಮಗಳ ದೈನಂದಿನ ವ್ಯವಹಾರಗಳು ಬೀದರ ನಗರದೊಂದಿಗೆ ನಡೆಯುತಿದ್ದರಿಂದ ಜನರ ಸಂಬಂಧ ಬೀದರ ಜಿಲ್ಲೆಗೆ ಹೆಚ್ಚುವಿದೆ, ತಾಲ್ಲೂಕ ಕೇಂದ್ರಗಳಲ್ಲಿ ಆಸ್ಪತ್ರೆಗಳು ಪ್ರಾರಂಭಿಸಲು ಅವಕಾಶಗಳು ಇವೆ.

**ಸವಾಲಗಳು :** ಖಾಸಗಿ ಆಸ್ಪತ್ರೆಗಳ ಹಾವಳಿ, ವೈದ್ಯಕಿಯ ಮಹಾವಿದ್ಯಾಲಯ ಹೊಂದಿದ್ದರಿಂದ ಹೈದ್ರಬಾದ ಮತ್ತು ಸೊಲಾಪೂರನಲ್ಲಿ ಉತ್ತಮ ಆಸ್ಪತ್ರೆಗಳು ಹೊಂದಿದ್ದರಿಂದ ಆ ಆಸ್ಪತ್ರೆಗಳ ಮೇಲೆ ಜನರು ವಿಶ್ವಾಸ ಹೊಂದಿದ್ದಾರೆ ಆ ವಿಶ್ವಾಸವನ್ನು ಗಳಿಸುವುದು. ಸಹಕಾರ ಆಸ್ಪತ್ರೆ ಒಬ್ಬ ವ್ಯಕ್ತಿಯ ಒಡೆತನದ ಆಸ್ಪತ್ರೆ ಅಲ್ಲ ಎಲ್ಲಾ ಸದಸ್ಯರ ನಮ್ಮದು ಎಂಬ ತಿಳುವಳಿಕೆ ಪಡಿಸುವುದು. ಸಂಘವು ಹೊಂದಿದ ಎಲ್ಲಾ ಸದಸ್ಯರಿಗೆ ಅವರ ಸಮಿಪ ಆಸ್ಪತ್ರೆಗಳನ್ನು ಪ್ರಾರಂಭಿಸಿ ಸೇವೆ ಒದಗಿಸುವುದು.

**: ಸಂಘದ ಸಾಧನೆ/ಪ್ರಗತಿ :**

**ಸಹಕಾರಿಯ ಆರ್ಥಿಕ ವಿವರ : ಸಹಕಾರ ಸಂಘವು ದಿನಾಂಕ 31.03.2019 ಕ್ಕೆ ಇದ್ದಂತೆ ಈ ಕೆಳಕಂಡತೆ ಆರ್ಥಿಕ ವಿವರ ಹೊಂದಿದೆ.**

(ರೂ. ಲಕ್ಷಗಳಲ್ಲಿ)

| ವಿವರ | 31.03.2017 | 31.03.2018 | 31.03.2019 |
|---|---|---|---|
| ಸದಸ್ಯರು | 13811 | 13812 | 13816 |
| ಶೇರು ಮೊತ್ತ | 3068.80 | 3068.90 | 3070.20 |
| ಕಾಯ್ದಿಟ್ಟ ನಿಧಿ | 45.89 | 45.89 | 69.01 |
| ಸಹಕಾರಿ ಶಿಕ್ಷಣ ನಿಧಿ | 1.31 | 1.31 | 1.97 |
| ಸಹಕಾರಿ ಅಭಿವೃದ್ಧಿ ನಿಧಿ | 6.56 | 6.56 | 9.86 |
| ಕಟ್ಟಡ ನಿಧಿ | – | – | 13.21 |
| ಸಂಶಯಾಸ್ಪದ ನಿಧಿ | – | – | 6.60 |
| ಇತರ ನಿಧಿ | 80.84 | 73.35 | 89.09 |
| ಲಾಭ | 77.36 | 77.36 | 96.51 |
| ಜಮಿನು ಆಸ್ತಿ | 399.75 | 445.47 | 450.47 |
| ಚಿರಾಸ್ತಿ ಆಸ್ತಿಗಳು | 704.54 | 626.79 | 564.15 |
| ಇತರೆ ಚರಾಸ್ತಿ | 50.88 | 22.38 | 38.09 |
| ಮುದ್ದತ್ತು ಠೇವಣಿಗಳು | 2092.96 | 2145.14 | 2251.90 |
| ವಿದ್ಯುತ ಠೇವಣಿ | 4.78 | 4.8 | 4.78 |
| ಬ್ಯಾಂಕು ಶಿಲ್ಕು | 27.85 | 28.81 | 46.16 |

ಸಹಕಾರಿಯಲ್ಲಿ ವ್ಯಕ್ತಿ ಸದಸ್ಯತ್ವ ಪಡೆಯಲು ರೂ. 10,000 ಮೌಲ್ಯದ ಶೇರು ಹಾಗೂ ಸಹಕಾರ ಸಂಘಗಳು ಸದಸ್ಯತ್ವಕ್ಕೆ ರೂ.1,00,000 ಮೌಲ್ಯದ ಶೇರು ನಿಗದಿ ಪಡಿಸಲಾಗಿದೆ, ಸಹಕಾರಿಯು ಹೊಂದಿರುವ ಸದಸ್ಯರಲ್ಲಿ 171 ಸದಸ್ಯರು ಕೃಷಿ ಪತ್ತಿನ ಸಹಕಾರ ಸಂಘಗಳು ಸದಸ್ಯರಾಗಿದ್ದಾರೆ.

ಸಹಕಾರಿಯಲ್ಲಿ ಸದಸ್ಯತ್ವ ಪಡೆದ ಸದಸ್ಯರಿಗೆ ಚಿಕಿತ್ಸೆಯ ವೆಚ್ಚದಲ್ಲಿ ಶೇ.20 ಪ್ರತಿಶತ ರಿಯಾಯತಿ ಹಾಗೂ ಹಿರಿಯ ನಾಗರಿಕರಿಗೆ ಶೇ. 10 ಪ್ರತಿಶತ ನೀಡಲಾಗುತ್ತಿದೆ. ಸಹಕಾರಿಯು ರೂ.444.70 ಲಕ್ಷ ಮೌಲ್ಯದ 70 ಎಕ್ಕರೆ 18 ಗುಂಟೆ ಸ್ವಂತ ಜಮೀನು ಬೀದರ ನಗರದಿಂದ 12 ಕಿ. ಮೀ ದೂರದ ಪ್ರಶಾಂತವಾದ ಪ್ರದೇಶಲ್ಲಿ ಹೊಂದಿದೆ. ಸನ್ 2016–17 ನೆ ಸಾಲಿನಲ್ಲಿ ಚಿಕಿತ್ಸೆ ಪಡೆದ 21,810 ರೂಗಿಗಳಲ್ಲಿ 1984 ರೋಗಿಗಳು ಶೇ.20 ಪ್ರತಿಶತ ಹಾಗೂ 58 ರೋಗಿಗಳು ಶೇ.10 ಪ್ರತಿಶತ ರಿಯಾಯತಿ ಪಡೆದುಕೊಂಡಿದ್ದಾರೆ

**ಆಸ್ಪತ್ರೆಯಲ್ಲಿ ಸೇವೆ ಪಡೆದವರ ವಿವರ :**

**ಸಹಕಾರಿಯು ನೀಡಿರುವ ಸೇವೆಗಳ ಕುರಿತು ಮೂರು ವರ್ಷದ ಮಾಹಿತಿ ಈ ಕಳಕಂಡಂತೆ ವಿವರಿಸಲಾಗಿದೆ.**

| ಕ್ರ.ಸಂಖ್ಯೆ | ವಿವರ | 2017–18 | 2018–19 | 2019–20 |
|---|---|---|---|---|
| 1 | ಎಮ್ ಆರ್ ಐ ಸೇವೆ ಪಡೆದವರು | 2515 | 2870 | 1888 |
| 2 | ಸಿ ಟಿ ಸೇವೆ ಪಡೆದವರು | 1244 | 1157 | 1204 |
| 3 | ಎಕ್ಸ–ರೇ ಸೇವೆ ಪಡೆದವರು | 1488 | 1398 | 1526 |
| 4 | ಯು ಎಸ್ ಜಿಸೇವೆ ಪಡೆದವರು | 2022 | 2255 | 2369 |
| 5 | 2ಡಿ ಇಸಿ ಎಚ್ ಓ ಸೇವೆ ಪಡೆದವರು | 74 | 53 | 29 |
| 6 | ಇಸಿಜಿ ಸೇವೆ ಪಡೆದವರು | 451 | 424 | 483 |
| 7 | ಲ್ಯಾಬ್, ಸೇವೆ ಪಡೆದವರು | 4438 | 3193 | 6620 |
| 8 | ಓಪಿಡಿ, ಸೇವೆ ಪಡೆದವರು | 5955 | 6754 | 13908 |
| 9 | ಐಪಿಡಿ ಸೇವೆ ಪಡೆದವರು | 1551 | 1493 | 3798 |
| 10 | ಸರ್ಜರಿ, ಸೇವೆ ಪಡೆದವರು | 698 | 478 | 489 |
| | ಒಟ್ಟು | 20436 | 20075 | 32314 |

**ಸಹಕಾರಿಯು ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳು :**

1. ಮೆಡಿಸಿನ್, 2. ಶಸ್ತ್ರ ಚಿಕಿತ್ಸೆ 3. ಸ್ತ್ರೀ ರೋಗ 4. ಮಕ್ಕಳ ತಪಾಸಣೆ 5. ಚರ್ಮರೋಗ 6. ಮೂಳೆರೋಗ 7. ಕಿವಿ ಮೂಗು ಮತ್ತು ಗಂಟಲು ರೋಗ 8. ದಂತ ಚಿಕಿತ್ಸೆ 9. ಉಚಿತ ಅಂಬುಲೆನ್ಸ್ ಸೇವೆ (ಬೀದರ ನಗರದ ವ್ಯಾಪ್ತಿಯೊಳಗೆ ಮಾತ್ರ) 10. ಸಹಕಾರಿಯಲ್ಲಿ ತಾಯಿ ಭಾಗ್ಯ, ಯಶಸ್ವಿನಿ ಹಾಗೂ ಸ್ಟಾರ ಹೆಲ್ತ್ ಇನ್ಸೂರೆನ್ಸ್ ಕಾರ್ಡಗಳನ್ನು ಸ್ವೀಕರಿಸಲಾಗುತ್ತಿದೆ. 11. ಶೇ.20% ಪ್ರತಿಶತ ರಿಯಾಯತಿ ಆಸ್ಪತ್ರೆಯ ಶೇರುದಾರರಿಗೆ ಹಾಗೂ ಶೇ. 10% ಪ್ರತಿಶತ ರಿಯಾಯತಿ ಹಿರಿಯ ನಾಗರಿಕರಿಗೆ ನೀಡಲಾಗುತ್ತಿದೆ.

**ಸಹಕಾರಿಯು ಸದಸ್ಯರರಿಗೆ ನೀಡುವ ಸೌಲಭ್ಯಗಳು :**

- ಸಹಕಾರಿಯಲ್ಲಿ ಸದಸ್ಯತ್ವ ಹೊಂದಿರುವ ಸದಸ್ಯ ಹಾಗೂ ಅವರ ಅವಲಂಬಿತರಿಗೆ ತಪಾಸಣೆ ಮತ್ತು ಆಸ್ಪತ್ರೆಯ ಬಿಲ್ಲಿನಲ್ಲಿ ಶೇ.20% ಪ್ರತಿಶತ ರಿಯಾಯತಿ ನೀಡಲಾಗುವುದು.
- ಸದಸ್ಯತ್ವ ಪಡೆದ ಸಹಕಾರ ಸಂಘಗಳ ಆಡಳಿತ ಮಂಡಳಿಯ ಸದಸ್ಯರಿಗೆ ಶೇ. 20% ಪ್ರತಿಶತ ರಿಯಾಯತಿ ತಪಾಸಣೆ ಹಾಗೂ ಬಿಲ್ಲಿನಲ್ಲಿ ನೀಡಲಾಗುವುದು.
- 70 ವರ್ಷ ಮೇಲ್ಪಟ್ಟ ಸದಸ್ಯರಿಗೆ ವರ್ಷದಲ್ಲಿ ಒಂದು ಬಾರಿ ಉಚಿತ ತಪಾಸಣೆ.
- 60 ವರ್ಷ ಮೇಲ್ಪಟ್ಟ ಸದಸ್ಯರಿಗೆ ವರ್ಷದಲ್ಲಿ ಒಂದು ಬಾರಿ ತಪಾಸಣೆಗೆ ಶೇ.50% ಪ್ರತಿಶತ ರಿಯಾಯತಿ ನೀಡಲಾಗುತ್ತಿದೆ.
- ಡಯಾಬಿಟಿಕ ಸದಸ್ಯರಿಗೆ ಪ್ಯಾಥೋಜಿ ಲ್ಯಾಬ್ ನಲ್ಲಿ ವಿಶೇಷ ರಿಯಾಯತಿ ನೀಡುತ್ತಿದೆ.

**ಮುಂಬರುವ ಯೋಜನೆಗಳು :**

- ಡೈಲಾಸಿಸ ಕೇಂದ್ರ ಪ್ರಾರಂಭಿಸಿ ಕಡಿಮೆ ವೆಚ್ಚದಲ್ಲಿ ಸೇವೆ ಒದಗಿಸುವುದು ಈಗಾಗಲೆ ಯೋಜನೆ ಸಿದ್ದಪಡಿಸಲಾಗಿದೆ.
- ನ್ಯಾಚೊಥೇರಪಿ ಕೇಂದ್ರ ಪ್ರಾರಂಭಿಸುವುದು, ಈಗಾಗಲೆ ರಾಜ್ಯದ 2–3 ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಲಾಗಿದೆ.
- ನರ್ಸಿಂಗ ಕಾಲೇಜು ಮತ್ತು ಫಾರ್ಮಸಿ ಕಾಲೇಜು ಸಹಕಾರಿಯ ಜಮೀನಿನಲ್ಲಿ ಪ್ರಾರಂಭಿಸಲು ಅನುಮತಿಗೆ ಅರ್ಜಿ ಸಲ್ಲಿಸಲಾಗಿದೆ.
- 350 ಹಾಸಿಗೆಯ ಆಸ್ಪತ್ರೆಯೊಂದಿಗೆ ವೈದ್ಯಕೀಯ ಕಾಲೇಜು ಪ್ರಾರಂಭಿಸುವುದು.
- ಸಹಕಾರಿಯ ಕಾರ್ಯವ್ಯಾಪ್ತಿಯ ವಿವಿಧೆಡೆ ಆಸ್ಪತ್ರೆಗಳನ್ನು ಪ್ರಾರಂಭಿಸಿ ಸದಸ್ಯರಿಗೆ ಸೌಲಭ್ಯಗಳನ್ನು ಒದಗಿಸುವುದು.

ಇಂದು ಸರಕಾರಿ ಆಸ್ಪತ್ರೆಗಳು ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಗುಣಮಟ್ಟದ ಚಿಕಿತ್ಸೆ ಸಿಗುತಿಲ್ಲ ಎಂಬ ಭಾವನೆ ಒಂದು ಕಡೆ ಹೊಂದಿದ್ದರೆ ಖಾಸಗಿ ಆಸ್ಪತ್ರೆಗಳ ಚಿಕಿತ್ಸೆಯು ದುಬಾರಿಯಾಗಿದ್ದರಿಂದ ಜನ ಸಾಮಾನ್ಯ ಹಾಗೂ ಬಡ ರೋಗಿಗಳಿಗೆ ಉತ್ತಮ ಚಿಕಿತ್ಸೆ ಸಿಗದ ಕಾರಣ ನರಳುತಿದ್ದಾರೆ. ಇಂತಹವರಿಗೆ ಕಡಿಮೆ ವೆಚ್ಚದಲ್ಲಿ ಸಕಾಲದಲ್ಲಿ ಹತ್ತಿರದಲ್ಲೆ ಚಿಕಿತ್ಸೆ ಸಿಗುವಂತಹ ಇಂತಹ ಹತ್ತಾರು ಸಹಕಾರಿ ಆಸ್ಪತ್ರೆಗಳು ಹುಟ್ಟಿಕೊಂಡು ಹಾಲಿನ ಕ್ಷೇತ್ರದಲ್ಲಿ ಸಾಧನೆ ಗೈದ ಸಹಕಾರ ಕ್ಷೇತ್ರವು ಆರೋಗ್ಯ ಕ್ಷೇತ್ರದಲ್ಲಿ ಸಾಧನೆ ಹೊಂದಲ್ಲಿ ಎಂಬ ಆಶಾಭಾವನೆ ಹೊಂದೊಣಾ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–5)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-5)



– ಶ್ರೀ ಯಶವಂತ ಡೋಂಗ್ರೆ

## ಎಸ್‌ಡಿಜಿ 5 : ಲಿಂಗ ಸಮಾನತೆ ಮತ್ತು ಎಲ್ಲ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಸಬಲೀಕರಣ

## (Achieve gender equality and empower all women and girls)

ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿಂತೆ ಇರುವ ಗುರಿಗಳಲ್ಲಿ ಪ್ರಸ್ತುತ ಪರಿಸ್ಥಿತಿಯಲ್ಲಿ ಅತಿ ಮುಖ್ಯವಾದ ಗುರಿ ಎಂದರೆ ಲಿಂಗಸಮಾನತೆಯನ್ನು ಸಾಧಿಸುವುದು. ಪುರುಷ ಮತ್ತು ಸ್ತ್ರೀಯರು ಸಮಾನ ಹಕ್ಕು ಮತ್ತು ಅವಕಾಶಗಳನ್ನು ಪಡೆದಾಗ ಒಟ್ಟಾರೆ ಉತ್ಪಾದಕತೆ ಮತ್ತು ಒಟ್ಟಾರೆ ಜೀವನ ಗುಣಮಟ್ಟದಲ್ಲಿ ವೃದ್ಧಿಯಾಗುತ್ತದೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಸಿದ ಅಧ್ಯಯನವೊಂದರ ಪ್ರಕಾರ ಪುರುಷ ಮತ್ತು ಸ್ತ್ರೀಯರಿಗೆ ಅವರುಗಳು ಯಾರರೀತಿಯ ಗುಂಪಿನಲ್ಲಿ ಕೆಲಸಮಾಡಲು ಇಚ್ಛಿಸುತ್ತಾರೆ ಎಂದು ಕೇಳಿದಾಗ ಬಹುತೇಕ ಪುರುಷರು, ಕೇವಲ ಪುರುಷರು ಮಾತ್ರ ಇರುವ ಗುಂಪನ್ನೂ ಮತ್ತು ಬಹುತೇಕ ಮಹಿಳೆಯರು, ಕೇವಲ ಮಹಿಳೆಯರು ಮಾತ್ರ ಇರುವ ಗುಂಪನ್ನೂ ಆಯ್ಕೆಮಾಡಿದರೂ ಯಾವ ರೀತಿಯ ಕೆಲಸದ ಗುಂಪುಗಳು ಹೆಚ್ಚು ಉತ್ಪಾದಕತೆ ಸಾಧಿಸುತ್ತವೆ ಎನ್ನುವುದನ್ನು ನೋಡಿದಾಗ ಕೇವಲ ಪುರುಷರ ಅಥವಾ ಕೇವಲ ಮಹಿಳೆಯರು ಕೆಲಸ ನಿರ್ವಹಿಸುವ ಗುಂಪುರಳಿಗಿಂತ ಪುರುಷರು ಮತ್ತು ಮಹಿಳೆಯರು ಒಟ್ಟಾಗಿ ಕೆಲಸ ನಿರ್ವಹಿಸುವ ಗುಂಪುಗಳಲ್ಲಿ ಬಹು ಹೆಚ್ಚಿನ ಉತ್ಪಾದಕತೆ ಇರುವುದು ಗಮನಕ್ಕೆ ಬಂದಿದೆ. ಅಂತೆಯೇ ಲಿಂಗಸಮಾನತೆಯು ಅಭಿವೃದ್ಧಿಗೆ ಪೂರಕ ಅಂಶವೆಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಲಿಂಗ ಸಮಾನತೆ ಸಾಧ್ಯವಾಗಬೇಕಾದರೆ ಈಗಿರುವ ಲಿಂಗ ತಾರತಮ್ಯ ನಿಲ್ಲಬೇಕು ಮತ್ತು ಈ ತಾರತಮ್ಯಕ್ಕೆ ತುತ್ತಾಗಿರುವವರ ಸಬಲೀಕರಣ ನಡೆಯಬೇಕು. ಆದುರರಿಂದ ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ ಈ ಕೆಳಗಿನ ಪ್ರಮುಖ ಅಂಶಗಳನ್ನು ಒತ್ತಿ ಹೇಳಲಾಗಿದೆ.

2030ರೊಳಗೆ ಎಲ್ಲ ಮಹಿಳೆಯರು ಮತ್ತು ಹೆಣ್ಣುಮಕ್ಕಳ ವಿರುದ್ಧದ ಎಲ್ಲ ರೀತಿಯ ತಾರತಮ್ಯವನ್ನು ಕೊನೆಗೊಳಿಸಬೇಕು. ಲೈಂಗಿಕ ಮತ್ತು ಇತರ ರೀತಿಯ ಶೋಷಣೆ ಸೇರಿದಂತೆ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಮಹಿಳೆಯರ ಮೇಲಿನ ಎಲ್ಲ ರೀತಿಯ ಹಿಂಸಾಚಾರಗಳನ್ನು ನಿವಾರಿಸಬೇಕು. ಬಾಲ್ಯ ವಿವಾಹ, ಬಲವಂತದ ವಿವಾಹ, ಸ್ತ್ರೀ ಜನನಾಂಗದ ಊನಗೊಳಿಸುವಿಕೆಯಂಥಹ ಹಾನಿಕಾರಕ ಅಭ್ಯಾಸಗಳನ್ನು ಕೊನೆಗೊಳಿಸಬೇಕು ಮತ್ತು ಸರಕಾರಿ, ಸಾರ್ವಜನಿಕ ಹಾಗು ಖಾಸಗಿ ವಲಯದ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ಮತ್ತು ಪುರುಷರಿಗೆ ಮುಕ್ತ ಮತ್ತು ಸಮಾನ ಅವಕಾಶಗಳನ್ನು ನೀಡಬೇಕು ಎಂದು ಈ ಗುರಿಯು ವಿಧಿಸುತ್ತದೆ.

ಲಿಂಗ ಸಮಾನತೆ ಎನ್ನುವುದು ಯಾವುದೇ ಒಂದು ಬಣದ ಒಳಿತು ಮತ್ತು ಇನ್ನೊಂದು ಬಣದ ಕೆಡುಕಿನ ವಿಷಯವಲ್ಲ. ಅಂದರೆ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವುದು ಎಂದರೆ ಪುರುಷರನ್ನು ಅವಕಾಶ ವಂಚಿರನ್ನಾಗಿಸುವುದು ಎಂದು ಅರ್ಥವಲ್ಲ. ಎರಡೂ ಬಣದವರು ಎಲ್ಲ ರೀತಿಯ ಕೆಲಸಗಳನ್ನೂ ಮಾಡುವಂತಾಗಬೇಕೆನ್ನುವುದು ಇಲ್ಲಿಯ ಆಶಯ. ವಿಶೇಷವಾಗಿ ಪುರುಷ ಮತ್ತು ಸ್ತ್ರೀಯರು ಸಮಾನವಾಗಿ ಆರ್ಥಿಕ ನೆಲೆಯಲ್ಲಿ ಉತ್ಪಾದಕ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ತಳ ಮಟ್ಟದಲ್ಲಿ ಕುಟುಂಬದ ಮತ್ತು ಮೇಲ್ಮಟ್ಟದಲ್ಲಿ ಇಡೀ ದೇಶದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗುತ್ತದೆ. ಆದರೆ ಇಂದಿನ ಪರಿಸ್ಥಿತಿ ಹೀಗಿಲ್ಲ. ಜಗತ್ತಿನ ಸರಾಸರಿ ನೋಡಿದಾಗ ಶಿಕ್ಷಣದ ವಿಷಯದಲ್ಲಿ ಪುರುಷ ಮತ್ತು ಸ್ತ್ರೀಯರ ನಡುವೆ ದೊಡ್ಡ ಅಂತರವಿರದಿದ್ದರೂ, ಮಧ್ಯಮ ನಿರ್ವಹಣಾ ಹಂತದ ಕೆಲಸಗಳಲ್ಲಿರುವ ಮಹಿಳೆಯರ ಪ್ರಮಾಣ ಮೂರನೆ ಒಂದು ಭಾಗಕ್ಕಿಂತ ಕಡಿಮೆ. ಪತಿ–ಪತ್ನಿ ಇಬ್ಬರೂ ಆರ್ಥಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದರೂ ಮತ್ತು ಪತ್ನಿಯ ವರಮಾನ ಪತಿಗಿಂತ ಹೆಚ್ಚಿರುವ ಸಂಧರ್ಭದಲ್ಲಿ ಕೂಡ, ಪತ್ನಿಯರು ಕೆಲಸ ತೊರೆದು ಮನೆಯಲ್ಲಿ ಉಳಿಯುವ ಪ್ರಮಾಣ ಶೇಕಡ 80ಕ್ಕಿಂತ ಹೆಚ್ಚು. ಇಂತಹ ತಾರತಮ್ಯಗಳನ್ನು ನಿವಾರಿಸಬೇಕಾದರೆ ಮಹಿಳೆಯರಿಗೆ ಭಾಗವಹಿಸುವಿಕೆಯ ಅವಕಾಶಗಳನ್ನು ಸೃಷ್ಟಿಸಬಲ್ಲ ಸಾಂಸ್ಥಿಕ ರಚನೆಗಳು ಬಲಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಬಹುತೇಕ ತಜ್ಞರು ಸಹಕಾರಿ ಸಂಘಟನೆಗಳು ಮಹಿಳಾ ಸಬಲೀಕರಣಕ್ಕೆ ಉತ್ತಮ ಪರಿಸರ ಒದಗಿಸಬಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

### ಸಹಕಾರಿ ಸಂಘಟನೆಗಳ ಪಾತ್ರ :

ಸಹಕಾರಿ ಸಂಘಟನೆಗಳು ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವಲ್ಲಿ ಮೂರು ಮುಖ್ಯ ವಿಧಾನದಲ್ಲಿ ಸಹಕಾರಿಯಾಗಿವೆ ಎಂದು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ವರದಿಯು ತಿಳಿಸುತ್ತದೆ. ಅವುಗಳೆಂದರೆ, ಉದ್ಯೋಗ ಮತ್ತು ಆದಾಯದ ಅವಕಾಶಗಳನ್ನು ನೀಡುವುದು, ಆರ್ಥಿಕ ಭಾಗವಹಿಸುವಿಕೆಯನ್ನು (ಎಕೊನೊಮಿಕ್ ಡೆಮೋಕ್ರಸಿ) ಸಕ್ರಿಯಗೊಳಿಸುವುದು ಮತ್ತು ನಿರ್ವಹಣಾ ಅನುಭವವನ್ನು ನೀಡುವುದು ಹಾಗೂ ತಮ್ಮದೇ ಆದ ಆರ್ಥಿಕ ಸಂಘಟನೆಗಳನ್ನು ಕಟ್ಟಿಕೊಳ್ಳಲು ಸಹಕರಿಸುವುದು.

ಸಹಕಾರಿ ಚಳುವಳಿಯು ವಿಶೇಷವಾಗಿ ಅನೌಪಚಾರಿಕ ಆರ್ಥಿಕ ಕ್ಷೇತ್ರದಲ್ಲಿ

ತೊಡಗಿಕೊಂಡ ಮಹಿಳೆಯರನ್ನು ಸಂಘಟಿಸಲು ನೆರವಾಗಿದೆ. ಉದಾಹರಣೆಗೆ ಮನೆಗೆಲಸ ಮಾಡುವವರು, ಮನೆಯಲ್ಲೇ ತಿಂಡಿ ತಿನಿಸುಗಳನ್ನು ಮಾಡಿ ಮಾರವವರು, ಗೃಹಾಧಾರಿತ ಸಣ್ಣ ಕೈಗಾರಿಕೆ/ಉದ್ಯಮಗಳಲ್ಲಿ ನಿರತರಾಗಿರುವವರು ಇತ್ಯಾದಿ ಮಹಿಳೆಯರು ಒಟ್ಟು ಸೇರಿ ಜೀವನೋಪಾಯ ಕಂಡುಕೊಳ್ಳಲು ಸಹಕಾರಿ ಮಾರ್ಗ ಉತ್ತಮವೆಂದು ಏಶ್ಯಾ ಮತ್ತು ಆಫ್ರಿಕದ ಹಲವು ದೇಶಗಳ ಉದಾಹರಣೆಗಳಿಂದ ತಿಳಿಯುತ್ತದೆ. ಹೀಗೆಯೇ ತಮ್ಮ ತಾತ್ವಿಕ ನೆಲೆಗಟ್ಟಿನಿಂದಾಗಿ ಸಹಕಾರಿ ಸಂಸ್ಥೆಗಳು ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವುದು, ಅವರ ಭಾಗವಹಿಸುವಿಕೆಗೆ ಅನುಕೂಲವಾಗುವ ವಾತಾವರಣ ಸೃಷ್ಟಿಸುವುದು, ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವುದು, ಅವರೇ ಸ್ವತಂತ್ರವಾಗಿ ಆರ್ಥಿಕ ಚಟುವಟಿಕೆಗಳನ್ನು ನಡೆಸುವಂತೆ ಮಾಡುವುದು ಮತ್ತು ಮಹಿಳೆಯರಲ್ಲಿ ವೃತ್ತಿಪರತೆ ಬೆಳೆಯಲು ಸಹಕರಿಸುವಂಥ ಚಟುವಟಿಕೆಗಳನ್ನು ಯಾವಾಗಲೂ ರೂಪಿಸುತ್ತವೆ.

ಸಹಕಾರಿ ಕ್ಷೇತ್ರದಿಂದಾಗಿ ಹಲವಾರು ಮಹಿಳೆಯರು ತಮ್ಮ ಸಬಲೀಕರಣವನ್ನು ತಾವೇ ಸಾಧಿಸುವಂತಹ ಹಲವಾರು ಉಪಕ್ರಮಗಳ ಉದಾಹರಣೆಗಳು ಲಭ್ಯವಿವೆ. ಉದಾಹರಣೆಗೆ 2008ರಲ್ಲಿ ಆರ್ಥಿಕ ಕುಸಿತದಿಂದಾಗಿ ತಮ್ಮ ಕುಟುಂಬಗಳು ಆರ್ಥಿಕ ಸಂಕಷ್ಟದಲ್ಲಿದ್ದಾಗ ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿ 17 ಜನ ವಲಸೆಗಾರ ಮಹಿಳೆಯರು ಸೇರಿ 'ಬಿಯಾಂಡ್ ಕೇರ್ ಶಿಶುಪಾಲನಾ ಸಹಕಾರಿ ಸಂಘವನ್ನು' ಸ್ಥಾಪಿಸಿದರು. ಸದಸ್ಯರೇ ಕೆಲಸಗಾರರಾಗಿರುವ ಈ ಸಹಕಾರಿ ಸಂಸ್ಥೆ ಶಿಶುವಿಹಾರನ್ನು ನಡೆಸುವುದರ ಜೊತೆಗೆ ಶಿಶುಪಾಲನೆಗೆ ಸಂಬಂಧಿಸಿದಂತೆ ಹಲವು ತರಬೇತಿ ಕಾರ್ಯಕ್ರಮಗಳನ್ನೂ ಮಹಿಳೆಯರಿಗಾಗಿ ನಡೆಸುತ್ತಿದೆ. 1997ರಲ್ಲಿ ಇಟಲಿಯಲ್ಲಿ ಆರಂಭವಾದ 'ಕನ್ಸೋರ್ಜಿಯೋ ಕೋಪರ್ನಿಕೋ' ಆರು ಸಾಮಾಜಿಕ ಸಹಕಾರಿ ಸಂಸ್ಥೆಗಳು ಸೇರಿ ಸ್ಥಾಪಿಸಿದ ಒಕ್ಕೂಟವಾಗಿದ್ದು, ಒಟ್ಟಾರೆ ಸದಸ್ಯರು ಮತ್ತು ಕೆಲಸಗಾರರಲ್ಲಿ ಶೇಕಡ 76 ರಷ್ಟು ಮಹಿಳೆಯರನ್ನು ಹೊಂದಿದೆ. ಈ ಸಹಕಾರಿ ಒಕ್ಕೂಟವು ವಲಸಿಗರು, ಅನಾಥರು, ಸಾಮಾಜಿಕವಾಗಿ ಹಿಂದುಳಿದವರು, ಅಂಗವೈಕಲ್ಯ ಹೊಂದಿರುವವರು, ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾದ ಅಪರಾಧಿಗಳು ಮುಂತಾದವರುಗಳಿಗೆ ಉದ್ಯೋಗಾವಕಾಶ ಮತ್ತು ವರಮಾನದ ಮೂಲಗಳನ್ನು ಸೃಷ್ಟಿಸುವ ಕೆಲಸ ಮಾಡುತ್ತಿದೆ.

ಬ್ರೆಜಿಲ್‌ನಲ್ಲಿರುವ ಬಬಾಸು ತೆಂಗು (ಬಬಾಸು ಎನ್ನುವುದು ತೆಂಗಿನ ಜಾತಿಗೆ ಸೇರಿದ, ಅದಕ್ಕಿಂತ ಗಾತ್ರದಲ್ಲಿ ಸಣ್ಣದಾಗಿರುವ ಒಂದು ಬಗೆಯ ಕಾಯಿಯಾಗಿದ್ದು, ಅದರ ಬೀಜದಿಂದ ಎಣ್ಣೆ ತಯಾರಿಸುವುದು ಮತ್ತು ಗಿಡದ ನಾರಿನಿಂದ ಹಗ್ಗ ಮಾಡುವುದು ಇತ್ಯಾದಿ ಮಾಡಲಾಗುತ್ತದೆ) ಒಡೆಯುವವರ ಅಂತಾರಾಜ್ಯ ಸಹಕಾರಿಯು ಮೂರು ಲಕ್ಷಕ್ಕೂ ಹೆಚ್ಚಿನ ಮಹಿಳೆಯರಿಗೆ ಕೆಲಸ ಮತ್ತು ಸ್ವ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಿದೆ. ಈ ಸಂಘಟನೆಯ ಪ್ರಯತ್ನದಿಂದಾಗಿ ಬಬಾಸುವಿನಿಂದ ವಿವಿಧ ವಸ್ತುಗಳನ್ನು ತಯಾರಿಸಲಾಗುತ್ತಿದ್ದು ಅವುಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ದೊರೆತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಬಬಾಸು ಬೆಳೆಯುವ ರೈತರಿಗೆ ಈ ಸಹಕಾರಿ ಸಂಘದಿಂದಾಗಿ ಉತ್ತಮ ಆದಾಯ ದೊರೆತು ಅವರ ಕುಟುಂಬಗಳು ನೆಮ್ಮದಿಯ ಜೀವನ ನಡೆಸುವಂತಾಗಿದೆ. ಹೀಗೆ ಸಹಕಾರಿ ಮಾರ್ಗದ ಮೂಲಕ ಮಹಿಳೆಯರು ತಮ್ಮ ಏಳಿಗೆಯ ಜೊತೆ ಜೊತೆಗೆ ರೈತ ಕುಟುಂಬಗಳ ಏಳಿಗೆಗೂ ಕಾರಣರಾಗಿದ್ದಾರೆ. ಮೆಕ್ಸಿಕೊದ ಅಲ್ವಾರಾಡೊ ಲಗೂನ್ ಪ್ರದೇಶದಲ್ಲಿ 2002ರಲ್ಲಿ ಹನ್ನೆರಡು ಜನ ಮಹಿಳೆಯರು ಸೇರಿ 'ಮುಜೇರೆಸ್ ಎಕ್ಸ್‌ಪೆರಿಮೆಂಟಾಡೊ ಸಹಕಾರಿ' ಯನ್ನು ಸ್ಥಾಪಿಸಿದರು. ಸಂಪೂರ್ಣವಾಗಿ ಮಹಿಳೆಯರೇ ಯೋಜಿಸಿ, ರಚಿಸಿ ಪರಸ್ಪರ ಭಾಗವಹಿಸುವಿಕೆಯ ಪ್ರಜಾಸತ್ತಾತ್ಮಕ ಮಾದರಿಯಲ್ಲಿ ಆರಂಭಿಸಿದ ಈ ಸಹಕಾರಿ ಸಂಘವು ಮಹಿಳೆಯರ ಭಾಗವಹಿಸುವಿಕೆಗೆ ಹೊಸಮಾದರಿಯೊಂದನ್ನು ಹುಟ್ಟುಹಾಕಿದ ಪರಿಣಾಮವಾಗಿ ಇಂದು ಈ ಮಾದರಿ ಸಹಕಾರಿ ಸಂಘಗಳು ಮೆಕ್ಸಿಕೋದ ಸಮುದ್ರ ತಟದ ಪ್ರದೇಶದಲ್ಲೆಲ್ಲ ಹಬ್ಬಲು ಕಾರಣವಾಯ್ತು. ಮನೆಯಲ್ಲಿ ಅಕ್ವೇರಿಯಂನಲ್ಲಿ ಸಾಕುವ ಸೌಂದರ್ಯದ ಮೀನುಗಳನ್ನು ಬೆಳೆಸಿ, ಅವುಗಳನ್ನು ಮಾರುವ ಚಟುವಟಿಕೆಯಲ್ಲಿ ತೊಡಗಿರುವ ಈ ಸಹಕಾರಿ ಸಂಘ ಮೆಕ್ಸಿಕೋದಲ್ಲಿ ಮಹಿಳೆಯರು ಎಂದೂ ಭಾಗವಹಿಸದಿದ್ದ ಆರ್ಥಿಕ ಚಟುವಟಿಕೆಯೊಂದು ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ನಡೆಸುವ ಉದ್ದಿಮೆಯಾಗಿ ಪರಿವರ್ತಿತವಾಗುವಂತೆ ಮಾಡಿದೆ.

ಸಹಕಾರಿ ಮಾರ್ಗದಲ್ಲಿ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಿದ ಮಹಿಳೆಯರ ಅತ್ಯುತ್ತಮ ಉದಾಹರಣೆ ಭಾರತದಲ್ಲಿಯೇ ದೊರೆಯುತ್ತದೆ. ಗುಜರಾತ್‌ನಲ್ಲಿ ಆರಂಭವಾದ ಸ್ವಯಂ ಉದ್ಯೋಗಿ ಮಹಿಳಾ ಸಂಘ – ಸೆಲ್ಫ್ ಎಂಪ್ಲಾಯ್ಡ್ ವುಮೆನ್ಸ್ ಅಸೋಸಿಯೇಶನ್ (SEWA) – ಇಂದು 14 ರಾಜ್ಯಗಳಲ್ಲಿ ಅನೌಪಚಾರಿಕ ಕ್ಷೇತದ 1.5 ದಶಲಕ್ಷ ಮಹಿಳಾ ಕಾರ್ಮಿಕರನ್ನು ಹೊಂದಿ ಕೆಲಸ ನಿರ್ವಹಿಸುತ್ತಿದೆ. ಹೊಸ ಹೊಸ ಮಹಿಳಾ ಸಹಕಾರಿ ಸಂಘಗಳನ್ನು ವಿವಿಧ ವ್ಯವಹಾರ ಕ್ಷೇತ್ರದಲ್ಲಿ ಆರಂಭಿಸಿ, 115 ಸಹಕಾರಿ ಸಂಸ್ಥೆಗಳ ಒಕ್ಕೂಟವನ್ನು ಸ್ಥಾಪಿಸಿ, ಕರಕುಶಲ ಸಾಮಗ್ರಿಗಳು, ಡೈರಿ, ಕೃಷಿ ಉತ್ಪನ್ನಗಳ ಸಂಸ್ಕರಣ, ಬ್ಯಾಂಕಿಂಗ್, ಮಾರಾಟ ಸೇವೆ ಹೀಗೆ ಹಲವು ರೀತಿಯ ವ್ಯವಹಾರಗಳನ್ನು ಯಶಸ್ವಿಯಾಗಿ SEWA ನಡೆಸುತ್ತಿದೆ.

ಮೇಲಿನವುಗಳೆಲ್ಲ ಮಹಿಳೆಯರೇ ನಡೆಸುವ ಸಹಕಾರಿ ಸಂಘಗಳು ಮತ್ತು ಅವುಗಳಿಂದ ಮಹಿಳೆಯರಿಗೆ ಆದ ಉಪಯೋಗಗಳ ಉದಾಹರಣೆಯಾದರೆ, ಜಪಾನಿನ ಗ್ರಾಹಕ ಸಹಕಾರಿ ಸಂಘಗಳು ಇನ್ನೊಂದು ಮಾದರಿಯನ್ನು ತೋರಿಸಿ ಕೊಟ್ಟಿವೆ. ಜಗತ್ತಿನ ಅತ್ಯಂತ ಶಕ್ತಿಯುತ ಗ್ರಾಹಕ ಸಹಕಾರಿ ಕ್ಷೇತ್ರವನ್ನು ಹೊಂದಿರುವ ಜಪಾನಿನಲ್ಲಿ ಈ ಸಹಕಾರಿ ಸಂಘಗಳ ಶೇಕಡ 75 ಕ್ಕಿಂತ ಹೆಚ್ಚು ಸದಸ್ಯರು ಮಹಿಳೆಯರು. ಪುರಷರಿಗೆ ಸರಿಸಮನಾಗಿ ಅಥವಾ ಅವರಿಗಿಂತ ಸಶಕ್ತವಾಗಿ ಸಹಕಾರಿ ಸಂಘಗಳ ಚಟುವಟಿಕೆಗಳನ್ನು ಮಹಿಳೆಯರು ಸಂಘಟಿಸುತ್ತ ಬಂದಿದ್ದಾರೆ. ಜಗತ್ತಿನೆಲ್ಲೆಡೆ ಖಾಸಗೀ ಚಿಲ್ಲರೆ ವ್ಯಾಪಾರದ ಬೆಳವಣಿಗೆ ದೊಡ್ಡರೀತಿಯಲ್ಲಿ ಬಳೆದು ಜೊತೆಗೆ ಇ–ಕಾಮರ್ಸ್ ಮೂಲಕ ಗ್ರಾಹಕರು ನೇರವಾಗಿ ಖರೀದಿ ಮಾಡುವುದು ಹೆಚ್ಚಾಗಿ ಗ್ರಾಹಕ ಸಹಕಾರಿ ಸಂಘಗಳೆಲ್ಲ ಮುಚ್ಚಿಹೋಗುತ್ತಿದ್ದರೂ, ಇಂದಿಗೂ ಜಪಾನಿನ ಗ್ರಾಹಕ ಸಹಕಾರಿ ಸಂಘಗಳು ಸಶಕ್ತವಾಗಿರುವುದರ ಹಿಂದಿರುವುದು ಮಹಿಳಾ ಸದಸ್ಯರ ಧೃಡ ಸಂಕಲ್ಪ ಮತ್ತು ಸಹಕಾರಿ ಮಾರ್ಗದ ಬಗೆಗಿನ ಅವರ ನಂಬಿಕೆ.

ಲಿಂಗ ಸಮಾನತೆಯ ಪರಿಕಲ್ಪನೆ ಅದರ ಉದ್ದೇಶವನ್ನು ಸಾಧಿಸಬೇಕಾದರೆ, ಮಹಿಳೆಯರೇ ಭಾಗವಹಿಸುವ ಸಹಕಾರಿ ಸಂಘಗಳ ಸ್ಥಾಪನೆಗಿಂತ, ಎಲ್ಲರೂ ಭಾಗವಹಿಸುವ ಸಹಕಾರಿಗಳಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುವಂತೆ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 38
Licensed to post without Prepayment License No. PMG BG/WPP-384/2020-2022.

ಮಾಡುವುದು ಬಹು ಮುಖ್ಯ. ಮಹಿಳೆಯರು ಕೇವಲ ಗ್ರಾಹಕರಾಗಿ ಭಾಗವಹಿಸುವುದಲ್ಲದೆ, ಕೆಲಸಗಾರರಾಗಿ, ವ್ಯವಸ್ಥಾಪಕರಾಗಿ, ನಿರ್ದೇಶಕರಾಗಿ ಸಹಕಾರಿ ಸಂಸ್ಥೆಗಳಲ್ಲಿ ಭಾಗವಹಿಸುವುದು ಬಹು ಮುಖ್ಯ. ತಾತ್ವಿಕ ನೆಲೆಯಲ್ಲಿ, ಖಾಸಗಿ ಮತ್ತು ಸರಕಾರೀ ವಲಯದ ಸಂಸ್ಥೆಗಳಿಗಿಂತ ಸಹಕಾರಿಗಳು ಹೆಚ್ಚು ಲಿಂಗಸಮಾನತೆಯ ಪರವಾಗಿರುವ ಸಂಘಟನೆಗಳು. ಆದರೆ ಇದು ವಸ್ತುಸ್ಥಿತಿಯಲ್ಲೂ ನಡೆಯವಂತೆ ಮಾಡಬೇಕಿದೆ. ಈ ಎರಡೂ ಪ್ರಮುಖ ಮಾರ್ಗಗಳನ್ನು ಗಮನದಲ್ಲಿಟ್ಟು ನೋಡಿದಾಗ ನಮ್ಮ ಸಹಕಾರಿ ಸಂಘಟನೆಗಳು ಕೆಳಗಿನಂತೆ ಹಲವು ಕಾರ್ಯತಂತ್ರಗಳನ್ನು ಅನುಸರಿಸಬಹುದಾಗಿದೆ.

1. ವಿವಿಧ ಆರ್ಥಿಕ ಚಟುವಟಿಕೆಗಳನ್ನು ನಡೆಸಲು ಮಹಿಳೆಯರು ತಮ್ಮದೇ ಸಹಕಾರಿ ಸಂಘಗಳನ್ನು ರಚಿಸಿಕೊಳ್ಳಲು ಅನುವಾಗುವಂತೆ ಕಾನೂನಿನಲ್ಲಿ ಸೂಕ್ತ ಅವಕಾಶವನ್ನು ಸರಕಾರಗಳು ಕಲ್ಪಿಸಬೇಕು.
2. ಇಂತಹ ಸಹಕಾರಿ ಸಂಘಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವು ಸುಲಭವಾಗಿ ದೊರೆಯುವಂತೆ ಯೋಜನೆಗಳನ್ನು ರೂಪಿಸಬೇಕು.
3. ಮಹಿಳಾ ಸಹಕಾರಿ ಸಂಘಗಳ ಸದಸ್ಯರು, ಆಡಳಿತ ಮಂಡಳಿ ಮತ್ತು ಉದ್ಯೋಗಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ರಚಿಸಿ ಅನುಷ್ಠಾನಗೊಳಿಸಲು ಮಹಾಮಂಡಳಗಳು ಮತ್ತು ಸಹಕಾರಿ ತರಬೇತಿ ಸಂಸ್ಥೆಗಳು ಕಾರ್ಯಪ್ರವೃತ್ತರಾಗಬೇಕು.
4. ಗ್ರಾಮೀಣ ಪ್ರದೇಶದ ಮತ್ತು ಹೆಚ್ಚು ಶಿಕ್ಷಣ ಹೊಂದಿಲ್ಲದ, ವಿಶೇಷವಾಗಿ ಸಾಮಾಜಿಕ ಕಾರಣಗಳಿಗಾಗಿ ಯಾವುದೇ ಪೂರ್ಣಾವಧಿ ಉದ್ಯೋಗಕ್ಕೆ ಹೋಗಲಾರದ ಅಥವಾ ಮನೆಯಲ್ಲೇ ಉಳಿಯುವ ಮಹಿಳೆಯರು ಆರ್ಥಿಕ ಸ್ವಾವಲಂಬನೆ ಗಳಿಸಲು ಅನುವಾಗುವಂತೆ ಗೃಹ ಕೈಗಾರಿಕೆಗಳನ್ನು ಸಹಕಾರಿ ಮಾದರಿಯಲ್ಲಿ ಆರಂಭಿಸಲು ಸ್ಥಳೀಯ ಸಹಕಾರಿ ಸಂಘಗಳು, ಸಹಕಾರಿ ಮಹಾಮಂಡಳಗಳು ಮತ್ತು ಸರಕಾರದ ಇಲಾಖೆಗಳು ಕ್ರಮ ಕೈಗೊಳ್ಳಬೇಕು.
5. ಎಲ್ಲಾ ಸಹಕಾರಿ ಸಂಘಗಳಲ್ಲಿ ಶೇಕಡ 50 ರಷ್ಟು ಮಹಿಳಾ ಉದ್ಯೋಗಿಗಳು ಇರುವಂತೆ ಮಾಡಲು ಪ್ರಯತ್ನಿಸಬೇಕು.
6. ಮಹಿಳಾ ಉದ್ಯೋಗಿಗಳಿಗೆ ತರಬೇತಿ ನೀಡಿ ಅವರು ವ್ಯವಸ್ಥಾಪನಾ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಅನುವುಮಾಡಿಕೊಡಬೇಕು ಮತ್ತು ಕನಿಷ್ಠ ಶೇಕಡ 30ರಷ್ಟು ವ್ಯವಸ್ಥಾಪನಾ ಹುದ್ದೆಗಳಿಗೆ ಮಹಿಳೆಯರನ್ನು ನೇಮಿಸಬೇಕು.
7. ಎಲ್ಲಾ ಸಹಕಾರಿ ಸಂಸ್ಥೆಗಳ ನಿರ್ದೇಶಕ ಮಂಡಳಿಗಳಲ್ಲಿ ಕನಿಷ್ಠ ಶೇಕಡ 40 ರಷ್ಟು ಮಹಿಳಾ ಸದಸ್ಯರು ಇರುವಂತೆ ಮಾಡಲು ಪ್ರಯತ್ನಿಸಬೇಕು
8. ಎಲ್ಲಾ ಸಹಕಾರಿ ಸಂಘಗಳೂ ಮಹಿಳಾ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.
9. ಸಹಕಾರಿ ಸಂಘಗಳು ಮಹಿಳೆಯರಿಗೆ ಆರ್ಥಿಕ ಚಟುವಟಿಕೆಗಳನ್ನು ನಡೆಸಲು ಅನುವಾಗುವಂತೆ ವಿಶೇಷ ಪತ್ತಿನ ಯೋಜನೆಗಳನ್ನು ರೂಪಿಸಬೇಕು.
10. ಶಿಕ್ಷಣ ಮತ್ತು ಆರೋಗ್ಯದ ಅಗತ್ಯಗಳಿಗಾಗಿ ಹಣದ ಅಗತ್ಯವಿರುವ ಮಹಿಳೆಯರಿಗೆ ಕಡಿಮೆ ಬಡ್ಡಿದರದ ಸಾಲ ಯೋಜನೆಗಳನ್ನು ಆರಂಭಿಸಬೇಕು.
11. ಮಹಿಳಾ ಸಬಲೀಕರಣಕ್ಕೆ ಸಹಕಾರಿ ಸಂಸ್ಥೆಗಳು ನೀಡುವ ವಿಶೇಷ ಸವಲತ್ತುಗಳ ಬಗ್ಗೆ ಜನರಿಗೆ ತಿಳಿಯುವಂತೆ ಪ್ರಚಾರ ನೀಡಬೇಕು.
12. ದೊಡ್ಡ ಸಹಕಾರಿ ಸಂಸ್ಥೆಗಳು ಮಹಿಳಾ ಸಬಲೀಕರಣ ಚಟುವಟಿಕೆಗಳನ್ನು ತಮ್ಮ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಅನುಷ್ಠಾನಗೊಳಿಸಬೇಕು.
13. ಸಹಕಾರಿ ಸಂಸ್ಥೆಗಳ ಮಹಿಳಾ ಉದ್ಯೋಗಿಗಳು ಅಥವಾ ಸದಸ್ಯರು ಸಂಘದಲ್ಲಿ ಯಾವುದೇ ರೀತಿಯ ಶೋಷಣೆಗೆ ಒಳಗಾಗದಂತೆ ನಿಯಮಾವಳಿಗಳನ್ನು ರಚಿಸಿ ಚಾಲ್ತಿಗೆ ತರಬೇಕು.
14. ಹೆಚ್ಚು ಲಿಂಗ ಸಮಾನತೆ ಸಾಧಿಸುವ ಸಹಕಾರಿ ಸಂಘಗಳನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಬೇಕು.

ಸಹಕಾರಿ ಸಂಸ್ಥೆಗಳು ಮಹಿಳಾ ಪರ ಮತ್ತು ಮಹಿಳಾ ಸ್ನೇಹಿ ಸಂಸ್ಥೆಗಳೆಂದು ಜಗತ್ತಿನಾದ್ಯಂತ ಹೆಸರುಗಳಿಸಿವೆ. ಅಂತೆಯೇ ಸುಸ್ಥಿರ ಅಭಿವೃದ್ಧಿಯ ಲಿಂಗಸಮಾನತೆಯ ಗುರಿಯನ್ನು ಮುಟ್ಟುವಲ್ಲಿ ಸಹಕಾರಿ ಸಂಸ್ಥೆಗಳ ಜವಾಬ್ದಾರಿ ಬಹು ಮುಖ್ಯವಾದುದು. ಪುರುಷರು ಮತ್ತು ಮಹಿಳೆಯರ ನಡುವೆ ಇರುವ ತಾರತಮ್ಯವನ್ನು ಕಡಿಮೆ ಮಾಡುತ್ತ, ಎಲ್ಲರನ್ನೂ ಸಮಾನವಾಗಿ ಕಾಣುವ ವಾತಾವರಣವನ್ನು ಸೃಷ್ಟಿಸುತ್ತಾ, ಮಹಿಳೆಯರು ಸಹಕಾರಿ ಮಾದರಿಯನ್ನು ಸ್ವಇಚ್ಛೆಯಿಂದ ಆಯ್ದುಕೊಳ್ಳುವಂತೆ ಪ್ರೇರೇಪಿಸುತ್ತಾ ಸಾಗಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಹಕಾರಿ ಸಂಘಟನೆಗಳು ತಮ್ಮ ತಮ್ಮ ಪರಿಸರದ ಅಗತ್ಯಗಳನ್ನು ಅರಿತು ಸೂಕ್ತ ಕಾರ್ಯಕ್ರಮಗಳನ್ನು ಸಂಘಟಿಸಿದಲ್ಲಿ ಗುರಿ ಸಾಧನೆ ಸುಗಮವಾಗುವುದರಲ್ಲಿ ಸಂಶಯವಿಲ್ಲ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಫೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪ್ರಾಂತೀಯ ಕಛೇರಿ: ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ-585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010